ಅಖಿಲ ಭಾರತ ಪತ್ರಿಕೆ

ಫೆಬ್ರವರಿ 2019

# ಜ್ಯೋತಿರ್ಮಯ ಶಿಶು



ಬೆಲೆ : 15/–



ಬುವಿ–ಮನದ–ಹೃದಯದಲ್ಲೀಗ ಬೆಳಗು ಅಮರತ್ವದಗ್ನಿ–ತೇಜ
ಋತದ ಚೈತನ್ಯ ತೇಜಲೀಲೆಯಲಿ ಅವಳುದಿತಗೊಂಡು ಓಜ.

[ಸಾವಿತ್ರಿ; ಪದ್ಯಾನುವಾದದಿಂದ] – ಪುಟ್ಟು ಕುಲಕರ್ಣಿ

**ಅಖಿಲ ಭಾರತ ಪತ್ರಿಕೆ**
**ಫೆಬ್ರವರಿ 2019**

ಸಂಪುಟ: 29 ಸಂಚಿಕೆ: 02

## ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ಹೆಗಡೆ–ಕುಮಟಾ – 581 330.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ
ಶ್ರೀ ಪುರುಷೋತ್ತಮ ಗಲಗಲಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್ : 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

### "ಜ್ಯೋತಿರ್ಮಯ ಶಿಶು"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಅನುಚಿಂತನಗಳು** 8
ಅನು: ಪೂರ್ಣಪ್ರಜ್ಞ

**ಸ್ಮೃತಿಕಥೆಗಳು** 13
ಅನು: ಪುಟ್ಟು ಕುಲಕರ್ಣಿ

**ಸಾಮಾಜಿಕ ಜೀವನದ ಜಾಲ** 31
ಅನು: ಡಾ॥ ಬಿ.ಆರ್. ಭೀಡ

**ಭೌತಿಕ ಪ್ರಕೃತಿಯ ವಾಗ್ದಾನ** 44
ಅನು: ಪ್ರೊ. ಕೆ. ವೀರಭದ್ರಪ್ಪ

## ಸಂಪಾದಕರ ಟಿಪ್ಪಣಿ

ಶ್ರೀಮಾತೆಯವರ 141ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ, ಇಲ್ಲಿ ಶ್ರೀಮಾತೆಯವರ ಕುರಿತು ಹಾಗೂ ಧ್ಯಾನದ ವಿಷಯಗಳ ಕುರಿತು ಕೆಲವು ಅನುಚಿಂತನಗಳನ್ನು [Reflections] ಇಲ್ಲಿ ಪ್ರಸ್ತುತಪಡಿಸಲಾಗಿದೆ. ಇವುಗಳ ಜೊತೆಯಲ್ಲಿಯೇ ಶ್ರೀಮಾತೆಯ ಜೀವನದ ಕೆಲವು ಪ್ರಮುಖ ಘಟನೆಗಳನ್ನು – ಅವು ನಮಗೆಲ್ಲರಿಗೂ ಸ್ಫೂರ್ತಿದಾಯಕವಾಗಿರುವದರಿಂದ – ಮತ್ತು, ಶ್ರೀಮಾತೆಯ ಸಹಾಯ ಹಸ್ತವನ್ನು ಪಡೆದುಕೊಳ್ಳುವದರ ಸಲುವಾಗಿ, ಆ ಪಥದಲ್ಲಿ ಸಾಗಲು ಅವು ಸಹಕಾರಿಯಾಗಿವೆ. ಈ ರೀತಿ ಸಹಕಾರಿಯಾಗಿರುವದರ ಬಗೆಗೆ ಹಾಗೂ ಅವರ ಕೃಪೆಯನ್ನು ಪಡೆಯುವ ಬಗೆಗೆ ಇರುವ ಸಂದರ್ಭಗಳನ್ನು ಇಲ್ಲಿ ಕೊಡಲಾಗಿದೆ. ಇವುಗಳ ಜೊತೆಜೊತೆಗೇ ಶ್ರೀಮಾತೆಯ ಆ ವ್ಯಾಪ್ತ ಮತ್ತು ವೈಶ್ವಿಕ–ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳುವಲ್ಲಿ, ಹಲವು ಆಯಾಮಗಳಲ್ಲಿ ರೂಪಿತಗೊಂಡಿರುವ ಅವರ ಅನುಭವಗಳ ಬಗೆಗೆ ಆಧ್ಯಾತ್ಮಿಕ ಮತ್ತು ಲೌಕಿಕಕ್ಕೂ ಏಕಪ್ರಕಾರವಾಗಿ ಸ್ಪರ್ಶ ಒದಗಿಸುತ್ತಿರುವ ಆ ವಿಶೇಷ ಅನುಭವಗಳ ಬಗೆಗೆ ಇಲ್ಲಿ ವಿವರಗಳಿವೆ.

ಶ್ರೀಮಾತೆಯವರ ಅನಂತತೆಯನ್ನು ಸಂಕ್ಷಿಪ್ತಗೊಳಿಸಿ [Cramped] ಒಂದೇ ಒಂದು ರೂಪದಲ್ಲಿ ಅಥವಾ ಆಕಾರದಲ್ಲಿ ಹಿಡಿದಿಡುವದು ಸಾಧ್ಯವಿಲ್ಲ; ಅದೇ ರೀತಿ ಅವರ ವ್ಯಕ್ತಿತ್ವದ ಎಲ್ಲ ಆಯಾಮಗಳನ್ನೂ ಸಂಕಲನಗೊಳಿಸಿ ಅಥವಾ ಗ್ರಂಥ ರೂಪದಲ್ಲಿ ರೂಪಿಸಲೂ ಸಾಧ್ಯವಾಗುವದಿಲ್ಲ. ಹೀಗಾಗಿ ಅವರ ಆ ಅಪಾರ ವ್ಯಾಪ್ತಿಯ ವ್ಯಕ್ತಿತ್ವದ ಬಗೆಗೆ, ಕೆಲವು ಚಿಕ್ಕ–ಚಿಕ್ಕ ದೃಷ್ಟಾಂತಗಳ ಮೂಲಕವೇ ಬೇಕಾದಷ್ಟು ಮಾಹಿತಿಯನ್ನು ಒದಗಿಸಲು ಮಾಡುತ್ತಿರುವ ಅಲ್ಪ ಪ್ರಯತ್ನ ಇದಾಗಿದೆ.

"ಈ ಲೋಕ ಸತತ ಆಲಿಸಿದೆ ಅವಳ, ಇವಳೇನೆ ನಿಯತಿಯಿರಲು,
ಅಚ್ಚರಿಯು ಅಲ್ಲಿ ತಾನುಳಿಯಮದಿನ್ನು, ತೋಷದಲಿ ಬದಲುಗೊಳಲು,"

ಅವರ ಜೊತೆಯಲ್ಲಿ ನಡೆದ ಸಂಭಾಷಣೆಗಳು, ಕೆಲವೊಂದು ದೃಷ್ಟಾಂತಗಳು ಈಗಾಗಲೇ ನಿರೂಪಣೆಗೊಂಡಿರಬಹುದು. ಇಲ್ಲಿ ಪುಟಗಳ ಮಿತಿಯಿಂದಾಗಿ ಆ ಸಂಭಾಷಣೆಗಳನ್ನು ಸಂಪೂರ್ಣವಾಗಿ ಮತ್ತೆ ಒದಗಿಸಲು ಸಾಧ್ಯವಾಗುವದಿಲ್ಲ. ಈ ಎಲ್ಲ ಸೀಮಿತ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ, ಇಲ್ಲಿಯವರೆಗೂ ಪ್ರಕಾಶನಕ್ಕೆ ಬರದೇ ಇರುವ, ಅದರಲ್ಲೂ ಅತೀ ಪ್ರಾಮುಖ್ಯವಾಗಿರುವ ಕೆಲವು ಸಂಗತಿಗಳ ಬಗೆಗೆ, ಶ್ರೀಮಾತೆಯವರ ಜೀವನದ ಮೊದಲ ಹಂತದ ಕೆಲವು ದೃಷ್ಟಾಂತಗಳನ್ನು – ಸ್ವತಃ ಶ್ರೀಮಾತೆಯವರೇ ಸಂಭಾಷಣೆಗಳಲ್ಲಿ ತಿಳಿಸಿರುವ ಹಾಗೆ – ಇಲ್ಲಿ ಒದಗಿಸುವ ಸಾಹಸ ಮಾಡಲಾಗಿದೆ. [ಇಂಗ್ಲೀಷ ಟಿಪ್ಪಣಿ]

## ಸಂಪಾದಕೀಯ

ಈ ಸಂಚಿಕೆಯ ಶೀರ್ಷಿಕೆ "ಋತ-ಚೈತನ್ಯದ ತೇಜ ಶಿಶು" (ಜ್ಯೋತಿರ್ಮಯ ಶಿಶು). ಸಾಮಾನ್ಯವಾಗಿ ಫ್ಲೇಮ್ [Flame] ಎನ್ನುವದನ್ನು ಲೌಕಿಕಾರ್ಥದಲ್ಲಿ ಜ್ವಾಲೆ ಎಂದೇ ಕರೆಯಲಾಗುತ್ತದೆ. ಆದರೆ ವೇದದ ಪ್ರತಿಮಾ ತತ್ತ್ವದಲ್ಲಿ ಈ "ತೇಜ"ಕ್ಕೆ ವಿಶಾಲಾರ್ಥದ ವ್ಯಾಪ್ತಿ ಇದೆ. ಶ್ರೀ ಅರವಿಂದರು ಅದಕ್ಕೆ ಮತ್ತೆ ವೈಶ್ವಿಕ ಆಯಾಮವನ್ನೂ ರೂಪಿಸಿದ್ದಾರೆ. ಅಲ್ಲಿ "ದೈವೀ ಚೇತನದ ಬಲ"ವೆಂದು ಜ್ವಾಲೆಯನ್ನು ಕರೆಯಲಾಗುತ್ತದೆ. ಇದು ವೇದದ ಪ್ರತಿಮಾ ತತ್ತ್ವದ ನಿರೂಪಣಾ ವಿಧಾನವೂ ಆಗಿದೆ. ಅದರಲ್ಲೂ ಈ ದೈವೀ ಚೇತನವು "ಅಧಿಮಾನಸದಲ್ಲಿರುವ (ಸುಪ್ರಾಮೆಂಟಲ್) ಋತವೇ ಆಗಿದೆ. ಶ್ರೀ ಅರವಿಂದರು ರೂಪಿಸಿರುವ ಈ ವಿಷಯವನ್ನು ["ವೇದದ ಪ್ರತಿಮಾ ತತ್ತ್ವ" Vedic Symbolism of Sri Aurobindo; Compiled by Sri M.P.Pandit] ಈ ವಿಷಯವನ್ನು ಶ್ರೀ ಎಮ್.ಪಿ. ಪಂಡಿತರು ವಿವರಿಸಿದ್ದಾರೆ.

ವೇದ ಕಾಲದಲ್ಲಿ ಎಲ್ಲ ಅಭಿವ್ಯಕ್ತಿಗಳೂ ಪ್ರತಿಮಾತ್ಮಕವಾಗಿಯೇ ಪ್ರಕಾಶನಗೊಳ್ಳುತ್ತಿದ್ದವು. ಸಮರ್ಪಣಾ ಹೃದಯ ಸ್ಪಂದನವನ್ನು ಹೊಂದಿದ್ದ ಜೀವನ ಶೈಲಿಯನ್ನು ಹೊಂದಿದ್ದ ಧಾರ್ಮಿಕ ಸಂಸ್ಥೆಗಳೂ ಸಹಿತ ಇಡೀ ಸಮಾಜವನ್ನು ಪ್ರಭಾವಗೊಳಿಸುತ್ತಿದ್ದವು, ನಿಯಮಕ್ಕೊಳಪಡಿಸುತ್ತಿದ್ದವು. ಪ್ರತಿಯೊಂದು ಕ್ಷಣ, ಪ್ರತಿಯೊಂದು ಘಟನೆಯೂ ಸಹಿತ ಜೊತೆಗೆ ಸಮರ್ಪಣಾ ವಿಧಿ-ವಿಧಾನಗಳಲ್ಲಿ ಸಹಿತ ಅದೇ ತೆರನಾದ ಅತೀಂದ್ರಿಯವೆನ್ನುವಂತೆಯೇ ಪ್ರತಿಮಾತ್ಮಕಗೊಳಿಸಲ್ಪಡಲಾಗಿತ್ತು. ಈ ರೀತಿಯ "ಪ್ರತಿಮಾ ತತ್ತ್ವವು" ಭಾರತೀಯ ಪರಂಪರೆಯ ಮೇಲೆ ಸುದೀರ್ಘಾವಧಿಯ ಪರಿಣಾಮಗಳನ್ನು ರೂಪಿಸಿದೆ. ಶಾಶ್ವತವಾದ ಪಥವನ್ನೇ ನಿರ್ಮಿಸಿದೆ. ಇವುಗಳನ್ನು ಈಗಲೂ ಸಹಿತ ಭಾರತೀಯ ಮದುವೆಯ ವಿಧಿ-ವಿಧಾನಗಳಲ್ಲಿ, ಭಾರತೀಯ ಚಿಂತನೆಗಳಲ್ಲಿ ಕಾಣಬಹುದು.

ಈ ಹಿನ್ನೆಲೆಯ "ತೇಜವು" ಸಪ್ತ ಸ್ವರೂಪದಲ್ಲಿ ಇರುತ್ತದೆ. ಅನ್ನಕೋಶ, ಪ್ರಾಣಕೋಶ, ಮನೋಕೋಶ, ವಿಜ್ಞಾನಕೋಶ, ಚಿತ್ಕೋಶ, ಆನಂದಕೋಶ ಹಾಗೂ ಸತ್-ಕೋಶ ಇವು ಅದರ ಸಪ್ತ ರೂಪಗಳು. ಇವೆಲ್ಲವೂ ಇದೀಗ ಈ ಭೂಮಿಯ ಮೇಲೆ ಅವತರಣಗೊಂಡಿದ್ದು, ಅದು ಶೈಶವಾವಸ್ಥೆಯಲ್ಲಿದೆ

ಎನ್ನುವದ ಕುರಿತು, ಇಲ್ಲಿ ದಾಖಲಾತಿ ಇವೆ. ಈ ಶೈಶವಾಸ್ಥೆಯ ಹಂತದ ಮಾನವ ಸ್ವರೂಪದ ಅವತರಣದಲ್ಲಿ, ಶ್ರೀಮಾತೆಯವರನ್ನು ರೂಪಿಸಿದ್ದನ್ನು ಶ್ರೀಮಾತೆಯವರ ಲೇಖನಗಳ ಮೂಲಕವೇ ದಾಖಲಾಗಿದೆ.

ಶ್ರೀ ಅರವಿಂದರೂ ಸಹಿತ ಈ ವಿಷಯವಾಗಿ "ಈ ರೀತಿಯಾಗಿ ಪೃಥ್ವಿಯಲ್ಲಿ (ಪೃಥ್ವಿಯ ಮೇಲೆ) ಅನುಷ್ಠಾನಿಸಲ್ಪಟ್ಟ ಚೇತನವು ಮತ್ತು ಮನಸ್ಸೇ ಪ್ರಧಾನಾಂಶ–ವಾಗಿರುವ ಜನಾಂಗವೊಂದರ ಬಲವು ರೂಪುಗೊಳ್ಳುವದರ ಮೂಲಕವೇ, ಮೃಣ್ಮಯದ ಸ್ವಭಾವಗಳೆಲ್ಲವನ್ನೂ – ಪರಿವರ್ತಿತಗೊಳಿಸುವದಕ್ಕಾಗಿಯೇ – ತನ್ನಲ್ಲಿಯೇ ತಾನು ಸ್ವೀಕರಿಸಲು ಸಿದ್ಧವಾಗುತ್ತದೆ. ಈ ಸಿದ್ಧತೆಯ ಮೂಲಕವೇ ಇದೀಗ ಇಲ್ಲಿ "ವಿಜ್ಞಾನಮಯ–ಚೇತನವು (ಚೈತನ್ಯವು) [Gnostic Consciousness] ಅನುಷ್ಠಾನಗೊಳ್ಳುತ್ತದೆ. ಈ ಅನುಷ್ಠಾನದ ಮೂಲಕವೇ "ವೈಜ್ಞಾನಿಕ–ದೈವೀ–ಪ್ರಜ್ಞೆ" [Gnostic Subliminal Being] ಹೊಂದಿ ರೂಪುಗೊಳ್ಳಲು ಅಣಿಯಾಗುತ್ತದೆ. ಇಲ್ಲಿಯೂ ಸಹಿತ ಲೌಕಿಕ ಬದುಕಿನ (ಮೃಣ್ಮಯದ) ಸ್ವಭಾವವನ್ನು ಹೊಸ–ರೂಪಾಂತರದಲ್ಲಿ ಅಭಿವ್ಯಕ್ತಗೊಳಿಸಲು - ತನ್ನಲ್ಲಿ – ಆವಾಹಿಸಿಕೊಳ್ಳುತ್ತದೆ. ಇದರ ಜೊತೆಗೇ, ಆ ಊರ್ಧ್ವದ ನೆಲೆಯಿಂದ ಅವತರಣಗೊಳ್ಳಲಿರುವ, ಸದಾ ವಿಕಸನಶೀಲವಾಗಿರುವ, ತನ್ನದೇ ಮೂಲಸ್ಥಾನವಾದ ಚಿನ್ಮಯದ ಪರಿಪೂರ್ಣ ಪ್ರಕಾಶದ ಹಾಗೂ ಬಲದ ಜೊತೆಗೆ ಮತ್ತೂ ಸಚ್ಚಿದಾನಂದ ಸ್ವರೂಪದ ಸೌಂದರ್ಯದಲ್ಲಿ ಸರ್ವಸ್ವವೂ ಅವತರಣಗೊಳ್ಳುವ ಮೂಲಕ, ಇದು ತನ್ನ ಮೂಲ ನೆಲೆಯಾದ ಖೇಖಮಧ್ಯದಿಂದ [Cosmo cosmic zenith] ಐಹಿಕ ಜೀವ(ನ)ಕ್ಕೆ ಪ್ರವೇಶಿಸುತ್ತದೆ" ಎಂದು "ದಿವ್ಯ ಜೀವನ"ದಲ್ಲಿ ವಿವರಿಸುತ್ತಾರೆ.

ಈ ರೀತಿಯಲ್ಲಿ ವಿಕಾಸಗೊಳ್ಳುವದರ ಸಲುವಾಗಿ, ಇದು ಪ್ರತಿ ಹಂತದಲ್ಲೂ ಸಂಘರ್ಷಮಯ ಘಟನೆಗಳಲ್ಲಿ, ಅಚೇತನದ ಗುಹ್ಯತ್ವದಲ್ಲಿ ಸ್ಥಿತವಿರುವ ಅವಸರ್ಪಿಣೀ (Involution) ಕ್ರಿಯೆಯ ಮೂಲಕ ಉತ್–ಕ್ಷೇಪಗೊಂಡು [Upsurging], ಇಲ್ಲಿಗೆ ಬರುವ ಮುನ್ನವೇ ಇದೇ ತೆರನಾದ ವಿಕಾಸದ ಸ್ವರೂಪಕ್ಕಾಗಿ, ಆ ಊರ್ಧ್ವಾತಿಊರ್ಧ್ವದ ನೆಲೆಯಿಂದ ಅವತರಣಗೊಳ್ಳುತ್ತದೆ. ಏಕೆಂದರೆ ಅದಕ್ಕೆ ಈಗಾಗಲೇ ನಿಗದಿತವಾದ ಉಗಮಸ್ಥಾನವೊಂದು ಇದೆ. ಅದೂ ಸಹಿತ ಚಿತ್ಪ್ರಕಾಶದ ನಿತ್ಯಸತ್ಯದ ಶಾಶ್ವತವೂ ಆಗಿದೆ. ಆ ಪ್ರಕಾಶವೂ ತನ್ನಲ್ಲಿ ತಾನೇ

ಆತ್ಮಸಾಕ್ಷಾತ್ಕಾರ ಹೊಂದಿದ್ದು (ಸ್ವಯಂ ಪ್ರಭಾಪೂರ್ಣ ಜ್ಯೋತಿಪುಂಜವಾಗಿದ್ದು) ಅಲ್ಲಿರುವ ಅದರದೇ ವೈರಾಜ್ಯದಿಂದ ಬಂದಿರುತ್ತದೆ.

ಈ ಎಲ್ಲ ಪೂರ್ವಭಾವೀ ಹಂತಗಳಲ್ಲಿ ಚೇತನ ಮತ್ತು ಕ್ಷಿತಿತಲದ ಅಸ್ತಿತ್ವದ (ಮೂಲಾಧಾರದಸ್ತಿತ್ವದ – Surface Self) ಹಾಗೂ ಅಧಿಚೇತನದ ಜೀವ ಮತ್ತು ಚೇತನದ ಮಧ್ಯದಲ್ಲಿ ವಿಭಾಗಗಳಿರುತ್ತವೆ. ಈ ಕ್ಷಿತಿತಲವೂ–ದೃಶ್ಯಾಂಗವೂ– ಮುಖ್ಯವಾಗಿ ಅಂತರಾಳದಿಂದಲೇ ಹೊಮ್ಮಲ್ಪಟ್ಟು ಉದಿತವಾಗಿರುತ್ತದೆ. ಇದು ಅಚೇತನದಿಂದಲೇ ಸಂವರ್ಧನಗೊಳ್ಳುತ್ತಿದ್ದು, ಆತ್ಮದಿಂದಲೇ ಹೊರಹೊಮ್ಮಲು ಗೂಢಾಗೂಢವಾದ ಬಲವೊಂದು ಸ್ಫುಟಗೊಂಡು, ನಿಧಾನವಾಗಿ ಹೊರಹೊಮ್ಮುತ್ತ ವಿಕಸಗೊಳ್ಳುತ್ತದೆ. ಇದು ಅಚೇತನದ ಸಂವರ್ಧನಾ ಕ್ರಿಯೆಯಾಗಿರುತ್ತದೆ. ಇದು ಅಂತಃಶ್ಚೇತನದ (ಅಧಿಚೇತನದ) ಅಂಶೀಕವಾಗಿದ್ದರೂ, ಅದಕ್ಕಿಂತ ಮುಖ್ಯವಾಗಿ, ಈ ಊರ್ಧ್ವದಿಂದ ಬರುವ ಅದೇ ಬೃಹತ್–ಶಕ್ತಿಯಲ್ಲಿ ಅಂತರ್ಗತವಾಗಿದ್ದುಕೊಂಡು ಏಕಕಾಲದಲ್ಲಿ ಪ್ರವಹಿಸುತ್ತಿರುವ ಅಂತರ್ಝರಿಯಾಗಿರುತ್ತದೆ [Simultaneous Influx] ಇದು ಮನೋಚೈತನ್ಯ [Mental being] ಅಥವಾ ಪ್ರಾಣಭೂತ (ಜೀವಾತ್ಮ- Vital being)ವಾಗಿ ಈ ಅಧಿಚೇತನದ [Subliminal] ಅಂಶಗಳೆಡೆ ಅವತರಣಗೊಳ್ಳುತ್ತದೆ. ಜೊತೆಗೆ ಇಲ್ಲಿಯೇ ಇದ್ದು, ರಹಸ್ಯ ಸ್ತರದಲ್ಲಿಯೇ ರೂಪಾಂತರಗೊಂಡು, ಮೇಲ್–ಸ್ತರದಲ್ಲಿಯೇ ಅಭಿವ್ಯಕ್ತಗೊಳ್ಳಲು ಮನೋಚೇತನದ ಅಥವಾ ಜೀವಾತ್ಮ–ಸತ್ತೆಯಾಗಿ ಪ್ರಕಟಗೊಳ್ಳುತ್ತದೆ.

ಆದರೆ ಈ ಉನ್ಮನೀ ಮನೋಭಾವವು [Supramental] ಪ್ರಾರಂಭಗೊಳ್ಳುವ ಮುನ್ನ, ಇದೇ ಉನ್ಮನೀ ಮನೋಭಾವವು ಮತ್ತು ಮೇಲಿರುವ ಭಾವಗಳ ಮಧ್ಯೆ ಇರುವ ಪರದೆಯು ಸಂಪೂರ್ಣವಾಗಿ ಮರೆಯಾಗಿ ಬಿಡುತ್ತದೆ. ಈ ಅಂತಃಪ್ರವಾಹ [Influx] ಮತ್ತೆ ಅವತರಣಗಳೆಲ್ಲವೂ ಚೈತನ್ಯದ ಪರಿಪೂರ್ಣತೆಯಾಗಿರುತ್ತದೆ. ಇದು ಯಾವ ಕಾರಣಕ್ಕೂ ಪರದೆಯ ಹಿಂದೆ ಅಂಶೀಕವಾಗಿ ರೂಪುಗೊಂಡಿರುವದಿಲ್ಲ. ಈ ಎಲ್ಲ ಪ್ರಕ್ರಿಯೆಯೂ ಸುದೀರ್ಘವಾಗಿ ರಹಸ್ಯವಾಗಿಯೇ ಉಳಿಯುವದಿಲ್ಲ. ಧೂಮಾವೃತಗೊಂಡು ಅಸ್ಪಷ್ಟವಾಗಿ ಉಳಿಯುವದಿಲ್ಲ. ಸಂದಿಗ್ಧಾರ್ಥಗಳನ್ನು ರೂಪಿಸುವದಿಲ್ಲ. ಆದರೆ ಇದು ಸಂಪೂರ್ಣವಾಗಿ ಚೇತನಾನುಭೂತಿಯಲ್ಲಿಯೇ ಹೊರಹೊಮ್ಮುವ,

ವಿಕಾಸಗೊಳ್ಳುವ ಮೂಲಕ ಸ್ಫುಟಗೊಳ್ಳುತ್ತದೆ. ಈ ಎಲ್ಲ ಸಂಗತಿಗಳೂ ಮೇಳೈಸಿ ಪರುಷಗುಣ [Transmutation] ಪ್ರಾಪ್ತವಾಗುತ್ತದೆ.

ಈ ಋತ–ಚೈತನ್ಯವು ಸಾಕಾರಗೊಳ್ಳಲೆಂದು ಅಭೀಪ್ಸೆ ಹೊಂದಿ, ಜಡದೊಂದಿಗೆ ತಾದಾತ್ಮ್ಯತೆಯನ್ನೂ ಹೊಂದಿ, ಮಾನವನ ದೇಹಧಾರಣೆಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಅಂತಹ ಘಟನೆಯ ಶೈಶವಾವಸ್ಥೆಯ ವಿವರಗಳು ಈ ಸಂಚಿಕೆಯಲ್ಲಿ ಇವೆ. ಇದನ್ನು ಗಮನಿಸಿಯೇ ಇಂಗ್ಲೀಷಿನಲ್ಲಿ "ಫ್ಲೇಮ್ ಚೈಲ್ಡ್" ಎಂದು ಹೆಸರಿಸಲಾಗಿದೆ. ಕನ್ನಡದ ಹಿನ್ನಲೆಯಲ್ಲಿ "ಜ್ವಾಲಾ ಶಿಶು", ಅಥವಾ "ತೇಜ ಶಿಶು" ಎನ್ನುವದು ನೀರಸ ರೂಪಾಂತರವಾಗುತ್ತದೆ. ಅದಕ್ಕಾಗಿಯೇ ಕನ್ನಡದ ಅನುಸ್ಪಂದನಕ್ಕೆ "ಋತ–ಚೈತನ್ಯದ ತೇಜ ಶಿಶು" (ಜ್ಯೋತಿರ್ಮಯ ಶಿಶು) ಎಂದು ಅನುಸ್ಪಂದನಗೊಳಿಸಲಾಗಿದೆ.



ಈ ಭೂಮಿ ಸೃಷ್ಟಿಯಾದಾಗಿನಿಂದಲೂ, ಎಲ್ಲೆಲ್ಲಿ ಮತ್ತು ಯಾವಾಗ ಯಾವಾಗ ಚೈತನ್ಯದ ಒಂದು ಕಿರಣವು ಪ್ರಕಟಗೊಳ್ಳುವ ಸಂಭವವು ಇತ್ತೋ, ಅಲ್ಲೆಲ್ಲ ನಾನು ಹಾಜರಿದ್ದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/37 – ಶ್ರೀಮಾತೆ**

## ಅನುಚಿಂತನಗಳು

– ಅನುವಾದ: ಪೂರ್ಣಪ್ರಜ್ಞ


### ನನ್ನಾತ್ಮ ಮತ್ತು ನನ್ನ ಪಂಥ

ನಾನು ಯಾವುದೇ ರಾಷ್ಟ್ರಕ್ಕೆ, ಯಾವುದೇ ನಾಗರೀಕತೆಗೆ, ಯಾವುದೇ ಸಮಾಜಕ್ಕೆ, ಯಾವುದೇ ಕಾಲಕ್ಕೂ ಸಂಬಂಧಿಸಿರುವದಿಲ್ಲ. ಆದರೆ ಆ ದೈವತ್ವಕ್ಕೆ ಮಾತ್ರ ನಾನು ಸಂಬಂಧಿಸಿದ್ದೇನೆ.

ನಾನು ಯಾವುದೇ ಯಜಮಾನನನ್ನೂ ಹೊಂದಿಲ್ಲ; ಯಾವುದೇ ಆಡಳಿತಗಾರನ್ನೂ, ಯಾವುದೇ ಶಾಸನವನ್ನೂ, ಸಾಮಾಜಿಕ ರೀತಿ–ನೀತಿಗಳನ್ನು ಹೊಂದಿಲ್ಲ. ಆದರೆ ಆ ದೈವತ್ವವನ್ನು ಮಾತ್ರ ಹೊಂದಿದ್ದೇನೆ.

ಆ ದೈವಕ್ಕೆ ಮಾತ್ರ ನಾನು ಸರ್ವಸ್ವವನ್ನೂ ಸಮರ್ಪಿಸಿದ್ದೇನೆ, ಅಭೀಪ್ಸೆ, ಜೀವನ, ಆತ್ಮ.. ಎಲ್ಲವನ್ನೂ ಸಮರ್ಪಿಸಿಕೊಂಡಿದ್ದೇನೆ. ಅವನ ಸಲುವಾಗಿ ನಾನು ನನ್ನ ರಕ್ತವನ್ನು ಕೊಡಲು – ಹನಿ ಹನಿಯಾಗಿ ಕೊಡಲೂ ಸಿದ್ಧ. ಒಂದು ವೇಳೆ ಇದೇ ಅವನ ಅಭೀಪ್ಸೆಯಾಗಿದ್ದರೆ, ಅದನ್ನು ಸಂತೋಷದಿಂದಲೇ ಕೈಗೊಳ್ಳುತ್ತೇನೆ; ಅವನ ಸೇವೆಯ ಸಲುವಾಗಿ ಯಾವುದನ್ನೇ ಆಗಲಿ ತ್ಯಾಗ ಮಾಡದೇ ಉಳಿಯುವದಿಲ್ಲ. ಅದೇ ಸರ್ವಸ್ವವೂ ಪರಿಪೂರ್ಣವೂ ಆದ ಆಹ್ಲಾದವಾಗಿರುತ್ತದೆ.


**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/38** **– ಶ್ರೀಮಾತೆ**


Written in Japan – February 1920.

I belong to no nation, no civilisation, no society, no race, but to the Divine.

I obey to no master, no ruler, no law, no social convention, but to the Divine.

To Him I have surrendered all, will, life and self; for Him I am ready to give all my blood, drop by drop, if such is His Will, with complete joy; and nothing in His service can be sacrifice, for all is perfect delight.



ನಾನು ಯಾವಾಗಲೂ ಊರ್ಧ್ವಮುಖಿಯಾಗಿಯೇ ನೋಡುತ್ತೇನೆ, ಗಮನಿಸುತ್ತೇನೆ. ಸೌಂದರ್ಯ, ಶಾಂತಿ, ಪ್ರಕಾಶ ಎಲ್ಲವೂ ಅಲ್ಲಿ ಇವೆ. ಅಲ್ಲದೇ ಅವೆಲ್ಲವೂ ಇಲ್ಲಿಗೆ ಅವತರಣಗೊಳ್ಳಲು ಸಿದ್ಧಗೊಂಡಿವೆ. ಆದ್ದರಿಂದ, ಯಾವಾಗಲೂ ಅದರ ಅಭೀಪ್ಸೆಯನ್ನು ಹೊಂದಿಯೇ, ಆ ಊರ್ಧ್ವದತ್ತ ಗಮನ ಕೊಡಿ. ಅದನ್ನು ಭೂಮಿಯ ಮೇಲೆ ಪ್ರಕಟಪಡಿಸುವ ಕ್ರಮದಲ್ಲಿ ಅದನ್ನು ಗಮನಿಸಿ.

ಅಧೋಮುಖವಾಗಿ, ಈ ಜಗತ್ತಿನ ಕೆಟ್ಟ ಸಂಗತಿಗಳ ಬಗೆಗೆ ಗಮನ ಕೊಡಬೇಡಿ. ನನ್ನೊಡನೆ ಸದಾ ಆ ಊರ್ಧ್ವದತ್ತಲೇ ಗಮನವಿಡಿ. ನಿಮಗೆ ಯಾವಾಗ ಯಾವಾಗ ದುಃಖವೆನಿಸುತ್ತದೆಯೋ, ಆಗೆಲ್ಲ ಆ ಊಧ್ವದ ಕಡೆಗೆ ಗಮನ ಕೊಡಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/68** **– ಶ್ರೀಮಾತೆ**

**ಈ ಭೂಮಿಯ ಮೇಲೆ, ಈ ಲೌಕಿಕ ಜಗತ್ತಿನಲ್ಲಿ ನಾನು ತರಲು ಇಚ್ಛಿಸುತ್ತಿರುವದೇನೆಂದರೆ –**

1. ಪರಿಪೂರ್ಣ ಚೈತನ್ಯ.
2. ಸಮಗ್ರ ಜ್ಞಾನ, ಸರ್ವಜ್ಞತ್ವ.
3. ಅಜೇಯ, ಅಪ್ರತಿರೋಧ್ಯ, ಅನಿವಾರ್ಯ ಶಕ್ತಿ; ಸರ್ವ ಶಕ್ತತೆ.
4. ಆರೋಗ್ಯ, ಪರಿಪೂರ್ಣತೆ, ನಿರಂತರತೆ, ಅವಿಚಲತೆ; ನಿರಂತರವಾಗಿ ನವೀಕರಣಗೊಳ್ಳುವ ಬಲ.
5. ಶಾಶ್ವತ ಲಾವಣ್ಯ, ನಿರಂತರವಾದ ಬೆಳವಣಿಗೆ – ಅವಿಚ್ಛಿನ್ನವಾದ ಪ್ರಗತಿ.
6. ಪರಿಪೂರ್ಣ ಸೌಂದರ್ಯ, ಸಮಷ್ಠಿ ಹಾಗೂ ಸಂಪೂರ್ಣ ಸೌಷಮ್ಯತೆ.
7. ಅವ್ಯಯವಾದ, ಎಣೆಯಿಲ್ಲದ ಧನ–ಸಂಪತ್ತು, ಈ ಜಗತ್ತಿನ ಸರ್ವ ಸಂಪತ್ತಿನ ಮೇಲೆ ನಿಯಂತ್ರಣ.
8. ಗುಣಪಡಿಸುವಿಕೆಯ ಮೂಲಕ ಸಂತೋಷವನ್ನು ಒದಗಿಸುವಿಕೆ.
9. ಎಲ್ಲ ಆಕಸ್ಮಿಕಗಳಿಂದಲೂ ವಿನಾಯತಿ, ಎಲ್ಲ ಹಾಣಿಕಾರಕ ದಾಳಿಗಳಿಗೆ ಅಖಂಡನೀಯವಾಗಿರುವದು.
10. ಸರ್ವ ರಂಗಗಳಲ್ಲಿಯೂ ಮತ್ತು ಸರ್ವ ಚಟುವಟಿಕೆಗಳಲ್ಲಿ ಪರಿಪೂರ್ಣವಾಗಿ ಪ್ರತಿಪಾದಿಸುವ ಸಾಮರ್ಥ್ಯ.
11. ವಾಕ್–ಚಾತುರ್ಯ, ಸರ್ವರಿಂದಲೂ ಪರಿಪೂರ್ಣವಾಗಿ ಅರ್ಥೈಸಿ–ಕೊಳ್ಳುವಂತಹ ಸ್ವಸ್ವರೂಪವನ್ನು ನಿರ್ಮಿಸಿಕೊಳ್ಳುವ ಶಕ್ತಿ.
12. 'ಅವನ' ಕಾರ್ಯವನ್ನು ಉಪಲಬ್ಧಗೊಳಿಸುವ ಸಲುವಾಗಿ ಅವಶ್ಯವಿರುವ ಇತರೇ ಎಲ್ಲ ಅಂಶಗಳು.

ನಾನು ಆಶಿಸುತ್ತಿರುವದೇನೆಂದರೆ –

1. ಆ ಪರಮ ದಿವ್ಯದ ಅಭಿವ್ಯಕ್ತಿಯು ಪರಿಪೂರ್ಣವಾಗಿ ವ್ಯಕ್ತಿಗತವಾಗಿ ಇರಲಿ.

2. ಆ ಅತಿಮಾನಸದ ವಿಜಯ, ರೂಪಾಂತರ ಮತ್ತು ಪ್ರಕಟಗೊಳ್ಳುವದೆಲ್ಲವೂ ಏಕಕಾಲಕ್ಕೇ ನಡೆಯಬೇಕು.

3. ಜಗತ್ತು ಅನುಭವಿಸುತ್ತಿರುವ ಹಾಗೂ ಅನುಭವಿಸಲಿರುವ ಎಲ್ಲ ತೊಂದರೆಗಳೂ ಶಾಶ್ವತವಾಗಿ ಮರೆಯಾಗಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/41–42**

*ನಿಮ್ಮ ಕರ್ಮವು ಕೇವಲ ಮಾನವ ಜೀವಿಗಳನ್ನು ಮಾತ್ರವೇ ಅವಲಂಬಿಸಿ–ಕೊಂಡಿರುವದಿಲ್ಲ ಎಂದು ವಿಶ್ವಾಸ ಹೊಂದಿದ್ದೇನೆ. ಜೊತೆಗೆ ಹಾಗೆಯೇ ಆಶಿಸುತ್ತೇನೆ ಕೂಡಾ....*

ಇಲ್ಲ, ಅದು ಮಾನವ ಜಿವಿಗಳನ್ನು ಯಾವ ಕಾರಣಕ್ಕೂ ಅವಲಂಬಿಸಿಕೊಂಡಿಲ್ಲ. ಏನು ಘಟಿಸಬೇಕಾಗಿದೆಯೋ ಅದು ಘಟಿಸಿಯೇ ಘಟಿಸುತ್ತದೆ. ಅದಕ್ಕೆ ಎದುರಾಗಲಿರುವ ಯಾವುದೇ ಅಡೆತಡೆಯ ಸಂಭವನೀಯತೆಗಳೂ ಇದ್ದರೂ ಸಹಿತ ಅದು ಘಟಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/47**

*ಈ ಜಗತ್ತಿನ್ನು ರೂಪಿಸಲು ನಿಮಗೆ ಆ ಪರಮ ದೇವನು ಯಾವಾಗ ತಿಳಿಸಿದ್ದಾನೆ? ಏನು ಮಾಡಬೇಕು ಎನ್ನುವದನ್ನು ನೀವು ಹೇಗೆ ಅರಿತುಕೊಂಡಿರುವಿರಿ?*

ಅದಕ್ಕಾಗಿ ನಾನು ಬೇರೆ ಏನನ್ನೂ ಕಲಿಯಬೇಕಾಗಿರಲಿಲ್ಲ, ಏಕೆಂದರೆ, ಆ ಪರಮ ದೇವತೆಯಲ್ಲಿಯೇ ಸರ್ವಸ್ವವೂ ಅಡಕಗೊಂಡಿದೆ. ಇಡೀ ಜಗತ್ತನ್ನು, ಜಗತ್ತಿನ ಸರ್ವ ಜ್ಞಾನವನ್ನೂ ಜೊತೆಗೆ ಅದನ್ನು ರೂಪಿಸುವ ಸಲುವಾಗಿ ಶಕ್ತಿಯನ್ನೂ ಹೊಂದಿದ್ದಾನೆ. ಒಂದು ಜಗತ್ತು(ಲೋಕ)ವು ಅಸ್ತಿತ್ವದಲ್ಲಿ ಇರಬೇಕೆಂದು ಅವನು ಯಾವಾಗ ನಿರ್ಧರಿಸಿದನೋ, ಆಗ ಅವನು ಮೊದಲು ಲೋಕದ ಜ್ಞಾನವನ್ನೂ ಮತ್ತು ಬಲವನ್ನೂ ರೂಪಿಸಿದ್ದನು. ಆ ರೂಪಣೆಯೇ ನಾನಾಗಿದ್ದೇನೆ. ತದನಂತರದಲ್ಲಿಯೇ ನಾನು ಈ ಜಗತ್ತನ್ನು ರೂಪಿಸಲು “ಅವನು” ನನಗೆ ಆಜ್ಞೆ ಮಾಡಿದ್ದಾನೆ.

*

*ನೀವೂ ಸಹಿತ ನಮ್ಮ ರೀತಿಯಲ್ಲಿಯೇ ಅವತರಿಸಿರುವ ಉದ್ದೇಶವೇನು? ನೀವು ನಿಮ್ಮ ನೈಜಸ್ವರೂಪದಲ್ಲಿಯೇ ಏಕೆ ಆಗಮಿಸಲಿಲ್ಲ?*

ಏಕೆಂದರೆ, ನಾನೂ ನಿಮ್ಮ ಹಾಗೆ ಬರದೇ ಹೋಗಿದ್ದರೆ, ನಾನು ಯಾವತ್ತೂ ನಿಮ್ಮ ಸಮೀಪಕ್ಕೆ ಬರಲು ಸಾಧ್ಯವೇ ಆಗುತ್ತಿರಲಿಲ್ಲ. ಅಷ್ಟೇ ಅಲ್ಲದೇ ‘ನಾನು’ ಹೀಗೆ ಇದ್ದೇನೆ ಎಂದು ನಿಮಗೆ ಹೇಳಲೂ ಸಾಧ್ಯವಾಗುತ್ತಿರಲಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/52**

*ಜಗತ್ತು ಯಾವುದನ್ನು ಸ್ವೀಕೃತವೆಂದು ಸಮಾಧಾನಪೂರ್ವಕವಾಗಿ ಒಪ್ಪಿಕೊಳ್ಳುತ್ತಿಲ್ಲವೋ, ಅಂತಹ ಪರಮ ಸತ್ಯವನ್ನು(ಋತವನ್ನು) ನಾವೆಲ್ಲರೂ ದರ್ಶಿಸುವಂತೆ, ನೀವು ನಿಮ್ಮ ಶಬ್ದಗಳಲ್ಲಿ ಮಂಡಿಸುತ್ತೀದ್ದೀರಿ. ಅಂತಹ ಯಾವ ವಿಶೇಷ ಸಂಗತಿಗಳು ನಿಮ್ಮ ಶಬ್ದಗಳಲ್ಲಿ ಇವೆ?*

"ಚೈತನ್ಯ", "ಚೈತನ್ಯ".

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/53**



ನಾನು ಆರಾಧಿಸಲ್ಪಡಬೇಕೆಂದು ನಾನು ಎಂದಿಗೂ ಆಶಿಸುವದಿಲ್ಲ. ನಾನು ಇಲ್ಲಿಗೆ ಆಗಮಿಸಿದ್ದು ಕರ್ಮದ ಸಲುವಾಗಿಯೇ ವಿನಾ ಆರಾಧಿಸಕೊಳ್ಳುವದಕ್ಕಾಗಿ ಅಲ್ಲ; ಅವರವರ ಹೃದಯಾಭಿಲಾಷೆಯಂತೆ ಅವರು "ನಿಮ್ಮನ್ನು" ಆರಾಧಿಸಿಕೊಳ್ಳಲು ಬಿಡಿ, ಅದೇ ಸಮಯದಲ್ಲಿ ನನ್ನನ್ನೂ ಬಿಡಿ. ಮೌನದಲ್ಲಿ ಮತ್ತು ರಹಸ್ಯವಾಗಿ ನನಗೆ ವಹಿಸಲ್ಪಟ್ಟಿರುವ ಕಾರ್ಯವನ್ನು ಮಾಡಲು ಯಾವುದೇ ಅಡೆ–ತಡೆಗಳು ಇಲ್ಲದಂತೆ ಬಿಡಿ – ಒಟ್ಟಿನಲ್ಲಿ ಈ ದೇಹದ ಸುತ್ತಲೂ ಕವಿದಿರುವ ಎಲ್ಲ ಪರದೆಗಳನ್ನು (ಆವರಣಗಳನ್ನು) ತೆಗೆದಲ್ಲಿ ಅದು ಸರ್ವಶ್ರೇಷ್ಠವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/46** **– ಶ್ರೀಮಾತೆ**

# ಸ್ಮೃತಿಕಥೆಗಳು

– ಅನುವಾದ: ಪುಟ್ಟು ಕುಲಕರ್ಣಿ

## ಚೈತನ್ಯಶೀಲತೆಯಲ್ಲಿ ರೂಪುಗೊಳಿಸಲ್ಪಟ್ಟ ಶರೀರ

ಚೈತನ್ಯಪೂರ್ಣವಾಗಿಯೇ ರೂಪುಗೊಳಿಸಲ್ಪಟ್ಟ ಶರೀರದಲ್ಲಿಯೇ ನಾನು ಜನಿಸಿದ್ದೇನೆ. ಶ್ರೀ ಅರವಿಂದರು ಆ ವಿಷಯವಾಗಿ ಸಂಪೂರ್ಣ ಮಾಹಿತಿ ಹೊಂದಿದ್ದರು. ನನ್ನನ್ನು ಪ್ರಪ್ರಥಮ ಬಾರಿಗೆ ಅವರು ನನ್ನನ್ನು ನೋಡಿದಾಗಲೇ, ತತ್–ಕ್ಷಣವೇ ನನಗೆ ಅದನ್ನು ಹೇಳಿದ್ದರು. ನಾನು ಸ್ವತಂತ್ರವಾಗಿಯೇ (ಮುಕ್ತಾತ್ಮಳಾಗಿಯೇ) ಜನ್ಮ ತಾಳಿದ್ದೇನೆ. ಅದೇನೇ ಇದ್ದರೂ ಅದು ಆಧ್ಯಾತ್ಮಿಕ ಆಯಾಮದಲ್ಲಿದೆ; ಯಾವುದೇ ಬಯಕೆಯನ್ನೂ ನಾನು ಹೊಂದಿಲ್ಲ, ಹೌದು – ಯಾವುದೇ ಬಯಕೆಯನ್ನೂ ನಾನು ಹೊಂದಿಲ್ಲ. ಜೊತೆಗೆ ಮಮಕಾರವನ್ನೂ ಹೊಂದಿಲ್ಲ. ಮತ್ತೆ ಅತ್ಯಂತ ಸೂಕ್ಷ್ಮವಾಗಿ ಸ್ವಲ್ಪಮಟ್ಟಿಗೆ ಬಯಕೆ ಇದ್ದರೂ, ಹಾಗೂ ಅಷ್ಟೇ ಅತ್ಯಲ್ಪ ಪ್ರಮಾಣದ ಮಮಕಾರವಿದ್ದರೂ ಸಹಿತ "ಈ ಕರ್ತವ್ಯವನ್ನು" ಮಾಡಲು ಸಾಧ್ಯವಾಗುವದಿಲ್ಲ.

ಓರ್ವ ಯುದ್ಧವೀರನಂತೆ ಜೀವನಾಧಾರವೇ ಪ್ರಾಮುಖ್ಯವಾದ ಸೂಕ್ಷ್ಮ ವಿಷಯವಾಗಿ, ಅಂದರೆ ಪರಿಪೂರ್ಣವಾದ ಸ್ವಯಂನಿಯಂತ್ರಣದಲ್ಲಿ (ಈ ವರ್ತಮಾನದ ಪುನರವತಾರವು ಯಾವುದೇ ಲಿಂಗ–ಭೇದವಿಲ್ಲದ ಓರ್ವ ವೀರನಂತೆ) ಇದ್ದು, ಅದರಲ್ಲೂ ಓರ್ವ ಪರಿಪೂರ್ಣ ಶಾಂತ ಸ್ವಭಾವದವನಾಗಿದ್ದು ಮತ್ತೆ ಅನುದ್ವಿಗ್ನ ಭಾವದಲ್ಲಿ ಹೋರಾಟ ನಡೆಸುವ ಯೋಧನಂತೆ – ಯಾವುದೇ ಬಯಕೆಗಳಿಲ್ಲದೆ, ಯಾವುದೇ ಲಿಂಗಭೇದವಿಲ್ಲದ ಯೋಧನಂತೆ – ಪರಿಪೂರ್ಣವಾದ ಹಾಗೂ ಪ್ರಶಾಂತತೆಯಿಂದ ಕೂಡಿದ ಮತ್ತು ಅಕ್ಷೋಭ್ಯ ಯೋಧನಂತೆ – ಯಾವುದೇ ಬಯಕೆಗಳಿಲ್ಲದ, ಮಮಕಾರವಿಲ್ಲದವನಂತೆ – ಒಂದು ವೇಳೆ ಈ ಲೋಕ(ಜನರು)ವು ನನ್ನ ವಿಷಯವಾಗಿ ನಕಾರಾತ್ಮಕವಾಗಿದ್ದಲ್ಲಿ, ಅಥವಾ ಅವರು ತೊರೆದು ಹೋದಲ್ಲಿ, ನಿರ್ಗಮಿಸಿದರೆ ಅಲ್ಲೊಂದು ಸಂಪೂರ್ಣ ಶಾಂತತೆಯೇ ನನ್ನನ್ನು ಬಿಟ್ಟು ಹೋದಂತೆ ಆಗುತ್ತದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಮಾರ್ಚ 28, 1964**

## ನನ್ನ ಮಾತೆಯ ಅಭೀಪ್ಸೆ ಮತ್ತು ಅಸಾಧಾರಣ ಸಂಕಲ್ಪ

ಇದು ನಿಜಕ್ಕೂ ಅಚ್ಚರಿಯ ವಿಷಯವಾಗಿದೆ... ನಾನು ಇದನ್ನು ಯಾಕೆ ಅಚ್ಚರಿಯ ವಿಷಯ ಎನ್ನುತ್ತಿದ್ದೇನೆ ಎಂದರೆ "ಅದು ಅವರಿಗೆ ಋಣಿಯಾಗಿದ್ದು ನಾನು ಅದನ್ನು ಪಡೆದಿದ್ದೇನೆ". ಈ ದೇಹದಲ್ಲಿ ಜನಿಸಿದ್ದು ಅದೊಂದು ಪೂರ್ವ ನಿರ್ಧರಿತ ಆಯ್ಕೆಯಾಗಿತ್ತು. ಕಿಶೋರಾವಸ್ಥೆಯಲ್ಲಿಯೇ ಅವಳು ಬಲವತ್ತರವಾದ ಅಭೀಪ್ಸೆಯನ್ನು ಹೊಂದಿದ್ದಳು. ಅವಳು ನನಗಿಂತಲೂ ನಿಖರವಾಗಿ ಇಪ್ಪತ್ತು ವರ್ಷ ಹಿರಿಯಳು. ನಾನು ಜನಿಸಿದಾಗ ಅವಳಿಗೆ ಇಪ್ಪತ್ತು ವರ್ಷವಾಗಿತ್ತು. ನಾನು ಅವಳಿಗೆ ಮೂರನೇ ಮಗು. ಮೊದಲನೇಯದು ಗಂಡು ಮಗು, ಆದರೆ ಆ ಮಗು ಎಡು ತಿಂಗಳಿನಲ್ಲಿಯೇ, ನಾವು ಟರ್ಕಿಯಲ್ಲಿ ಇದ್ದಾಗ, ನಮ್ಮನ್ನು ಅಗಲಿತ್ತು. ಅವನ ಬೆನ್ನಲ್ಲೇ, ಇಜಿಪ್ತಿನ ಅಲೆಗ್ಸಾಂಡ್ರಿಯಾದಲ್ಲಿದ್ದಾಗ ನನ್ನ ಇನ್ನೊಬ್ಬ ಸಹೋದರನ ಜನನವಾಯಿತು. ತದನಂತರದಲ್ಲಿ ನಾನು. ನಾನು ಜನಿಸಿದ್ದು ಪ್ಯಾರೀಸಿನಲ್ಲಿ. ಆ ಅವಧಿಯಲ್ಲಿ ಆಕೆಗೆ (ನನ್ನ ತಾಯಿಗೆ) ನಿಖರವಾಗಿ ಇಪ್ಪತ್ತು ವರ್ಷ ವಯಸ್ಸು. ಆ ಅವಧಿಯಲ್ಲಿ, ಅವಳ ಪ್ರಥಮ ಶಿಶು ಮರಣ ಹೊಂದಿದ್ದರಿಂದಾಗಿ, ಅವಳು ಒಂದು ರೀತಿಯ ತೀವ್ರ ಅಭೀಪ್ಸೆಯಲ್ಲಿದ್ದಳು. ಅಂದರೆ "ಜಗತ್ತಿನಲ್ಲಿಯೇ ತನ್ನ ಮಕ್ಕಳು ಶ್ರೇಷ್ಠವಾದ ವ್ಯಕ್ತಿಗಳಾಗಬೇಕು" ಎನ್ನುವದೇ ಆ ಅಭೀಪ್ಸೆಯಾಗಿತ್ತು. ಹಾಗೆಂದು ಅದೇ ಅವಳ ಸರ್ವಸ್ವವೆಂದೇನೂ ಹೇಳಲಾಗುವದಿಲ್ಲ. ಆದರೆ ಅದು ಏನಾಗಿತ್ತು ಎನ್ನುವದನ್ನು ನಾನು ಈಗಲೂ ಅರಿಯೆ. ಅದಕ್ಕಿಂತ ಮಿಗಿಲಾಗಿ ಅವಳ ಇಚ್ಛೇ ಇರಬಹುದೇನೋ! ನನ್ನ ತಾಯಿಯು ಅಸಾಧಾರಣವಾದ ಸಂಕಲ್ಪ ಶಕ್ತಿಯನ್ನು ಹೊಂದಿದ್ದಳು. ಅದು ಕಬ್ಬಿಣದಷ್ಟೇ ದೃಢವಾಗಿತ್ತು. ಬಾಹ್ಯದ ಯಾವುದೇ ಪ್ರಭಾವಕ್ಕೂ ಯಾವುದೇ ರೀತಿಯಲ್ಲಿಯೂ ಒಳಗಾಗದ ಹಾಗೆ ಇತ್ತು.

ಒಂದು ಸಲ ಅವಳು ಮನಸ್ಸಿನಲ್ಲಿ ನಿರ್ಣಯಿಸಿದಳು ಎಂದರೆ ಅದು ಯಾವಾಗಲೂ ಅಚಲವೇ ಆಗಿರುತ್ತಿತ್ತು. ಒಂದು ವೇಳೆ ಯಾರಾದರೂ ಅವಳ ಕಣ್ಣೆದುರಿಗೆ ಮರಣ ಹೊಂದುತ್ತಿದ್ದರೂ ಸಹಿತ, ಯಾವುದೇ ರೀತಿಯಿಂದಲೂ ತನ್ನ ನಿರ್ಧಾರದಿಂದ ಹಿಂದೆ ಸರಿಯುತ್ತಿದ್ದಿಲ್ಲ. ವಿಚಲನಗೊಳ್ಳುತ್ತಿದ್ದಿಲ್ಲ! ಅದಕ್ಕಾಗಿ ಅವಳು ಯಾವಾಗಲೂ "ತನ್ನ ಮಕ್ಕಳು ಜಗತ್ತಿನಲ್ಲಿಯೇ ಶ್ರೇಷ್ಠರಾಗಿಯೇ ಇರಬೇಕು" ಎನ್ನುವ ಅಭಿಪ್ರಾಯಕ್ಕೆ ಕಟಿಬದ್ಧರಾಗಿದ್ದರು.

ಪ್ರಗತಿಯ ಸಂವೇದನೆಯ ಕುರಿತು ಅವಳು ಪೂರ್ತಿಯಾದ ಅನುಭವವನ್ನು ಹೊಂದಿದ್ದಳು; ಅವಳು ಅನುಭಾವದಿಂದ ಕಂಡುಕೊಂಡದ್ದೇನೆಂದರೆ, ಈ ಜಗತ್ತು ವಿಕಸನಗೊಳ್ಳುತ್ತಿದೆ, ಪ್ರಗತಿ ಪಥದಲ್ಲಿದೆ, ಅದಕ್ಕಾಗಿ ನಾವು ಆ ಒಂದು ನೂತನತೆಯು ಬರುವ ಮುನ್ನವೇ ನಮ್ಮನ್ನು ನಾವು ಅದನ್ನು ಎದುರುಗೊಳ್ಳಲು ಸುಧಾರಣೆಗೊಂಡಿರಬೇಕು ಎನ್ನುವ ವಿಷಯವನ್ನು ಅವಳು ಬಲ್ಲವಳಾಗಿದ್ದಳು. ಅಷ್ಟು ಅರಿವು ಇದ್ದರೆ ಸಾಕಾಗಿತ್ತು, ಇದು ಅಚ್ಚರಿಯ ವಿಷಯವೆನಿಸಿದರೂ, ಅದು ಸಂಪೂರ್ಣವಾಗಿ ಪರ್ಯಾಪ್ತ ಪರಿಮಾಣದಲ್ಲಿತ್ತು.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಅಗಸ್ಟ 5, 1961**

ಸಾಧುತ್ವ ಮತ್ತು ಅಚಲತೆಯೇ ತುಂಬಿದ ವಾತಾವರಣದಲ್ಲಿ ನಾನು ಬೆಳೆದಿದ್ದೇನೆ. ಅದು ನಿಮಗೆ ತಿಳಿದಿರಲಿ. ನಾನು ಮತ್ತು ನನ್ನ ಸೋದರ ಚಿಕ್ಕವರಾಗಿದ್ದಾಗ, ಅವಳು ಸದಾ "ನೀವು ಇಲ್ಲಿ ಈ ಭೂಮಿಯ ಮೇಲೆ ಕೇವಲ ಮೋಜು–ಮಸ್ತಿ ಮಾಡುವದರ ಸಲುವಾಗಿ ಬಂದಿಲ್ಲ; ಇದೊಂದು ನಿತ್ಯ ನರಕ ಸದೃಶ ವಾತಾವರಣ. ಆದರೆ ಅದೇ ನೀವು ಇದೇ ವಾತಾವರಣದಲ್ಲಿಯೇ ಪರಿಶುದ್ಧವಾಗಿಯೇ ವಿಕಸನಗೊಂಡು ಮೇಲೇರಬೇಕು. ಅದಕ್ಕಾಗಿ ನೀವು ನಿಮ್ಮ ನಿಮ್ಮ ಕರ್ತವ್ಯಗಳನ್ನು ತೃಪ್ತಿದಾಯಕವಾಗಿ ಮಾಡುವದೇ ಇಲ್ಲಿ ಮುಖ್ಯವಾಗಿರುತ್ತದೆ" ಎಂದು ನಮಗೆ ಸದಾ ಹೇಳುತ್ತಿದ್ದಳು. ಇದುವೇ ನಮಗೆ ದೊರೆತ ಉತ್ಕೃಷ್ಟವಾದ ಶಿಕ್ಷಣವಾಗಿದೆ. ಇದು ನಮ್ಮ ಆತ್ಮೀಯ ವಿಷಯವೂ ಹೌದು.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಮೇ 29, 1962**

**ಸಾಮಥ್ಯಶಾಲಿ ಹಾಗೂ ಸಮತೋಲಿತ ಪ್ರಕೃತಿ (ದೇಹ ರಚನೆ)**

ನನ್ನ ತಂದೆಯು ಅತ್ಯಂತ ಆರೋಗ್ಯಪೂರ್ಣವಾದ ಹಾಗೂ ಸಾಮರ್ಥ್ಯ–ಶಾಲಿಯಾಗಿದ್ದರು. ಜೊತೆಗೆ ಸಮಚಿತ್ತದ ಮನೋಭಾವವನ್ನೂ ಹೊಂದಿದ್ದರು. ಅವರು ಅಷ್ಟೊಂದು ಎತ್ತರವಾದ ದೇಹವನ್ನೇನೂ ಹೊಂದಿರಲಿಲ್ಲ. ಆದರೆ ಸ್ವಲ್ಪ ಪ್ರಮಾಣದಲ್ಲಿ ಸ್ಥೂಲಕಾಯರಾಗಿದ್ದರು. ಅವರು ತಮ್ಮ ವಿದ್ಯಾಭ್ಯಾಸವನ್ನೆಲ್ಲ ಆಸ್ಟ್ರಿಯಾದಲ್ಲಿ ಪಡೆದುಕೊಂಡಿದ್ದರು. (ಆಗ ಅಲ್ಲಿ ಫ್ರೆಂಚ್ ಸಾಮಾನ್ಯ ಭಾಷೆಯಾಗಿತ್ತು, ಅದರ ಜೊತೆಗೆ ಅವರಿಗೆ ಜರ್ಮನ್ ಭಾಷೆ, ಇಂಗ್ಲೀಷ ಭಾಷೆ,

ಇಟಾಲಿಯನ್, ಟರ್ಕಿ ಭಾಷೆಗಳೂ ಕರಗತವಾಗಿದ್ದವು.) ಇವುಗಳ ಜೊತೆಗೆ ಅಲ್ಲಿ ಕುದುರೆ ಸವಾರಿಯನ್ನೂ ಕಲಿತಿದ್ದರಷ್ಟೇ ಅಲ್ಲದೇ ಅದರಲ್ಲಿ ವಿಶೇಷ ಪರಿಣಿತಿಯನ್ನೂ ಹೊಂದಿದ್ದರು. ಅವರು ತಮ್ಮ ಮೊಣಕಾಳಿನ ಒತ್ತಡದಿಂದಲೇ ಕುದುರೆಗಳನ್ನು ನಿಯಂತ್ರಿಸಿ ಚಲಾಯಿಸುತ್ತಿದ್ದರು. ತಮ್ಮ ಮುಷ್ಠಿಯ ಬಲದಿಂದ ಏನನ್ನಾದರೂ ಹುಡಿಗುಟ್ಟಿಸುತ್ತಿದ್ದರು. ಆ ರೀತಿಯ ಮುಷ್ಠಿಯ ಹೊಡೆತದಿಂದ ಹುಡಿಗುಟ್ಟಿ ಹೋದ ವಸ್ತುವೆಂದರೆ ನಮ್ಮ ಮನೆಯ ಬೆಳ್ಳಿಯ ವಸ್ತುವಾಗಿತ್ತು. ಅದಕ್ಕೆ ಐದು ಫ್ರಾಂಕ್ ಕೊಟ್ಟು ಅದನ್ನು ಖರೀದಿಸಲಾಗಿತ್ತು. ಅದನ್ನು ಒಂದೇ ಒಂದು ಗುದ್ದಿನಿಂದ ಹುಡಿಗುಟ್ಟಿಸಿದ್ದರು.

ಅದಕ್ಕಿಂತ ಹೆಚ್ಚಾಗಿ ಅವರು ಕಥೆಗಳನ್ನು ಹೇಳುತ್ತಿದ್ದರು ಆಗ ಲಭ್ಯವಿರುವ ಎಲ್ಲ ಕಾದಂಬರಿಗಳನ್ನು ಅವರು ಓದಿದ್ದರು ಎಂದು ನನ್ನ ಅನಿಸಿಕೆ ಇದೆ. ಅಪರೂಪದ ಸಾಹಸದ ಕಥೆಗಳನ್ನು, ಅವರಿಗೂ ಅದು ಪ್ರಿಯವಾದದ್ದರಿಂದ, ಅಂತಹ ಎಲ್ಲ ಕಥೆಗಳನ್ನೂ ನಮಗೆ ಹೇಳುತ್ತಿದ್ದರು. ನಾವಿನ್ನೂ ಪುಟ್ಟ ಮಕ್ಕಳಾಗಿದ್ದಾಗ, ಬೆಳಿಗ್ಗೆ ಬೇಗನೇ ನಮ್ಮ ಕೋಣೆಗೆ ಬಂದು, ನಾವಿನ್ನೂ ಮಲಗಿರುತ್ತಿದ್ದ ಹಾಸಿಗೆಯ ಮೇಲೆಯೇ ಕುಳಿತುಕೊಂಡು, ಕಥೆಗಳನ್ನು ಹೇಳುತ್ತಿದ್ದರು. ಆಗ ಅವರು ತಾವೇ ಸ್ವತಃ ಆ ಸಾಹಸದಲ್ಲಿ ಭಾಗವಹಿಸಿರುವಂತೆಯೇ ಅವುಗಳನ್ನು ವಿವರಿಸುತ್ತಿದ್ದರು. ಅದು ದುಷ್ಕರ್ಮಿಗಳ ವಿರುದ್ಧದ ಹೋರಾಟದ ಕಥೆಯೇ ಆಗಿರಲಿ ಅಥವಾ ವನ್ಯಪಶುಗಳ ವಿಷಯಕ್ಕೆ ಸಂಬಂಧಿಸಿದವುಗಳೇ ಆಗಿರಲಿ, ಒಟ್ಟಿನಲ್ಲಿ ಸೂಕ್ತವಾದ ಕಥೆಯನ್ನು ಆಯ್ದುಕೊಂಡು, ಅದು ತಮ್ಮದೇ ಅನುಭವವೆನ್ನುವಂತೆ ಹೇಳುತ್ತಿದ್ದರು. ನಾವಂತೂ ಅವುಗಳನ್ನು ತುಂಬ ತುಂಬ ಸಂತೋಷದಿಂದ ಕೇಳಿ ಆನಂದಿಸುತ್ತಿದ್ದೆವು.

ಒಂದು ದಿನ ನನ್ನ ಸೋದರ ಅಪ್ಪನಿಗೆ ಗೌರವ ಕೊಡದೇ ಯಾವುದೋ ಕಾರಣಕ್ಕೆ ವಿರೋಧಿಸಿದ್ದ (ಸೋದರನಿಗೆ ಆವಾಗ ಹತ್ತು ಅಥವಾ ಹನ್ನೊಂದು ವರ್ಷ, ನನಗೆ ಒಂಬತ್ತರ ಆಸುಪಾಸು). ನಾನು ಊಟದ ಕೋಣೆಗೆ ಬಂದು ನೋಡಿದಾಗ, ಅಲ್ಲಿ ಸೋಫಾದ ಮೇಲೆ ತಂದೆ ಕುಳಿತುಕೊಂಡಿದ್ದರು. ಅವರ ಮೊಣಕಾಲುಗಳ ಮಧ್ಯೆ ನನ್ನ ಸಹೋದರನನ್ನು ಬಿಗಿಯಾಗಿ ಹಿಡಿದುಕೊಂಡಿದ್ದರು, ಅವನನ್ನು ಹಾಗೆ ಕೆಳಗೆ ತಳ್ಳಿ, ಅವನ ಪೃಷ್ಠದ ಮೇಲೆ ಸರಿಯಾಗಿ ಬಾರಿಸುತ್ತಿದ್ದರು. ಅದೇಕೆ ಹಾಗೆ ಎನ್ನುವದು ನನಗೆ ತಿಳಿದಿರಲಿಲ್ಲ. ಅವನಿಗೆ ಬೀಳುತ್ತಿರುವ

ಹೊಡೆತಗಳು ಜೋರಾಗಿಯೇ ಇದ್ದವು. ಹಾಗಿದ್ದಾಗ್ಯೂ ಸಹಿತ... ನಾನು ಅಲ್ಲಿಗೆ ಹೋದೆ. ನಾನು ನನ್ನ ಎತ್ತರವವನ್ನು ಮತ್ತೂ ಎತ್ತರಿಸಿಕೊಂಡು, "ಪಾಪಾ – ನೀವು ಇದೇ ರೀತಿ ಮತ್ತೆ ಹೊಡೆದರೆ ನಾನು ಮನೆ ಬಿಟ್ಟು ಹೋಗುತ್ತೇನೆ!" ಎಂದು ಜೋರಾಗಿ ಕೂಗಿದ್ದೆ. ಇಂತಹ ಬಲವಾದ ಪ್ರತಿರೋಧವನ್ನು – ಅದು ಸಣ್ಣ ಧ್ವನಿಯಲ್ಲಿಯೇ ಆಗಿದ್ದರೂ ಸಹಿತ – ಅವರು ಹೊಡೆಯುವದನ್ನು ನಿಲ್ಲಿಸಿದ್ದರು. ಅಷ್ಟೇ ಅಲ್ಲ ಮುಂದೆ ಎಂದೂ ಆ ರೀತಿಯಲ್ಲಿ ನಡೆಯಲಿಲ್ಲ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಅಗಸ್ಟ 5, 1961**

## ಸ್ವಯಂ ಸಾಮರ್ಥ್ಯದ ಜೀವಿ

... ಒಂದು ವೇಳೆ ನೀವು ಪ್ರಜ್ಞಾಪೂರ್ವಕವಾಗಿ ಸಂರಚನೆಗೊಂಡು, ಆ ದಿವ್ಯ ಕೇಂದ್ರದ ಪರಿಧಿಯಲ್ಲಿ ಏಕತ್ವಗೊಳ್ಳುವಂತಿದ್ದರೆ, ಅದರ ಮೂಲಕವೇ ನಿರ್ದೇಶಿತರಾಗಿ ಮತ್ತು ಅದರ ಆಳ್ವಿಕೆಗೊಳಪಟ್ಟಿದ್ದರೆ, ಆಗ ನಿಮ್ಮ ಗುಹ್ಯದ ಗುರು ನೀವೇ ಆಗಿರುತ್ತೀರಿ. ಪ್ರಯತ್ನಶೀಲತೆಯ ಅವಧಿಯಲ್ಲಿ ಬರುವ ಯಾವುದೇ ತೊಂದರೆಗಳನ್ನು ಎದುರಿಸಲು ಇದು ಅತೀ ಮುಖ್ಯವಾದ ಸಂಗತಿಯಾಗಿದೆ. ಕೇವಲ ಗುಲಾಮೀ ಜೀವನದಲ್ಲಿ ಇರುವದಕ್ಕಿಂತ, ನಾಯಕ ಅಥವಾ ಯಜಮಾನನಾಗಿರುವದು ಉತ್ತಮವೆಂದು ನಾನು ಕಂಡುಕೊಂಡಿದ್ದೇನೆ. ಜೊತೆಗೆ ನಿಮ್ಮಷ್ಟಕ್ಕೆ ನೀವೇ ಅಪ್ರಿಯವಾದ ಸಂವೇದನೆ(ಅನುಭವ)ಗೊಳ್ಳುವಂತೆ ನಿಮ್ಮನ್ನು ಒತ್ತಾಯಿಸುವ ಆ ತೆರನಾದ ಬಯಕೆಗಳಿಂದಾಗಿ, ಅವು ನಿಮ್ಮನ್ನು ಮತ್ತೂ ಒತ್ತಾಯಕ್ಕೆ ಸಾಗಿಸುತ್ತವೆ. ಅಂತಹ ಘಟನೆಗಳು ಬಹುತೇಕ ಅಸಂಗತವೇ ಆಗಿದ್ದರೂ ಸಹಿತ, ಅದೇ ತೆರನಾದ ಕ್ರಿಯೆಗಿಳಿಯಲು ಬಲವಂತಗೊಳಿಸುವ ಮಿಡಿತಗಳೇ ಇರುತ್ತವೆ. ಇವುಗಳನ್ನು ನೀವು ಕಾಣಲಿಕ್ಕೂ ಸಹಿತ ಸಾಧ್ಯವಿಲ್ಲದಿದ್ದರೂ ಸದಾ ಉತ್ತೇಜನಕಾರಿಯಾಗಿಯೇ ಇರುತ್ತವೆ.

ಆದರೂ ಅದು ನನಗೆ ಗೊತ್ತಿಲ್ಲ. ಅದು ಅತಿಶಯವಾಗಿ ಉತ್ತೇಜನದಲ್ಲಿ ಇರುತ್ತದೆ ಎನ್ನುವದನ್ನು ಮಾತ್ರ ಅರಿತಿದ್ದೇನೆ. ಅದೂ ನಾನಿನ್ನೂ ಶೈಶವಾವಸ್ಥೆಯಲ್ಲಿ ಇದ್ದಾಗಲೇ ಕಂಡಿದ್ದೇನೆ. ಆಗ ನನಗೆ ಐದು ವರ್ಷದ ಅವಧಿ. ಆಗ ಅದು ನನಗೆ ಸಹಿಸಲಸಾಧ್ಯವಾಗಿಯೇ ಕಾಣುತ್ತಿತ್ತು. ಮತ್ತೆ ನಾನು ಆವಾಗ ಅದರಿಂದಲೇ ಒಂದು ಮಾರ್ಗವನ್ನು ಕಾಣಲು ಯತ್ನಿಸಿದ್ದೆ. ಹೀಗಾಗಿ ಜನ

ಸಮುದಾಯವು ನನ್ನನ್ನು ಗದರಿಸುವ ಅವಕಾಶವನ್ನು ಪಡೆದುಕೊಳ್ಳದ ಹಾಗೆ ಅಂತಹ ಮಾರ್ಗವನ್ನು ಅರಸಿದ್ದೆ. ಅದಕ್ಕಿಂತ ಮುಖ್ಯವಾಗಿ ನನಗೆ ಸಹಾಯ ಮಾಡಲೂ ಯಾರೂ ಇರಲಿಲ್ಲ. ಅದೂ ನನಗೆ ತಿಳಿದ ವಿಷಯವಾಗಿತ್ತು. ಮತ್ತೆ ನಿಮ್ಮೆಲ್ಲರಿಗೆ ಲಭ್ಯವಾದ ಈ ಅವಕಾಶ(ಸುಯೋಗ)ವು ನನಗೆ ಇರಲೇ ಇಲ್ಲ. ಯಾರಾದರೂ ನಿಮಗೆ "ನೀವು ಮಾಡಬೇಕೆಂದಿರುವದು ಇದೇ ಆಗಿದೆ!" ಎಂದು ಯಾರಾದರೂ ಹೇಳಿರುವವರು ನಿಮಗೆ ಸಿಕ್ಕರೆ, ಆಗ ನನಗೆ ಆ ರೀತಿ ಹೇಳಲು ಯಾರೂ ಇರಲಿಲ್ಲ. ಹೀಗಾಗಿ ನನ್ನಷ್ಟಕ್ಕೆ ನಾನೇ ಅದನ್ನು ಕಂಡುಕೊಳ್ಳಬೇಕಿತ್ತು. ಹೀಗಾಗಿಯೇ ನಾನು ಅದನ್ನು ಕಂಡುಕೊಂಡಿದ್ದೇನೆ. ಇದನ್ನು ನಾನು ನನ್ನ ಐದನೇ ವಯಸ್ಸಿನಿಂದಲೇ ಪ್ರಾರಂಭಿಸಿದ್ದೇನೆ.

**– ಶ್ರೀಮಾತೆ: ಅವಳ ಅಲೌಕಿಕ ಸ್ಪರ್ಶ: ಪುಟ 7**

**ಲೋಕದ ಈ ದುಃಖ**

ನಾನೀಗಲೂ ಅದರ ನೆನಪು ಹೊಂದಿದ್ದೇನೆ.... ಅವಳು (ನನ್ನ ತಾಯಿ) ಕೆಲವೊಮ್ಮೆ ಸ್ವಲ್ಪ ಗಟ್ಟಿ ಧ್ವನಿಯಲ್ಲಿಯಲ್ಲಿಯೇ ನನ್ನನ್ನು ಗದರಿಸಿದ್ದಳು. (ಆದರೆ ಅದು ಒಳ್ಳೆಯದಕ್ಕೇ ಆಗಿತ್ತು. ಏಕೆಂದರೆ ಅದರ ಮೂಲಕ ಅತ್ಯುತ್ತಮ ಪಾಠವನ್ನು ಕಲಿತಿದ್ದೇನೆ). ಅವಳು ಬಹಳ ಸಾರಿಯೂ ಗದರಿಸಿದ್ದಳು. ಅದರಲ್ಲೂ ಕೆಲವೊಮ್ಮೆ ನಾನು ಮಾಡದೇ ಇರುವ ಕೆಲಸಕ್ಕೂ ಸಹಿತ ನನ್ನನ್ನು ಜರಿಯುತ್ತಿದ್ದಳು! ಒಮ್ಮೆಯಂತೂ ನಾನು ಮಾಡಿದ್ದ ಕಾರ್ಯಕ್ಕಾಗಿಯೇ ನನ್ನ ಮೇಲೆ ಎರಗಿ ಬಂದಿದ್ದಳು. ಆದರೆ ಅವಳು ನಾನು ಏಕೆ ಆ ರೀತಿ ಮಾಡಿದ್ದೆ ಎನ್ನುವದನ್ನು ಅರ್ಥೈಸಿಕೊಂಡಿರಲಿಲ್ಲ. (ಅದನ್ನು ನಾನು ಒಂದು ಉದಾತ್ತ ಧ್ಯೇಯದೊಂದಿಗೆ ಮಾಡಿದ್ದೆ); ನಾನು ಅವಳ ಪರವಾನಿಗೆ ಇಲ್ಲದೇನೆ ಬೇರೊಬ್ಬರಿಗೆ ಯಾವುದೋ ವಸ್ತುವೊಂದನ್ನು ಕೊಟ್ಟಿದ್ದೆನು. ಆಗ ಅವಳು ಅದನ್ನೇ ಒಂದು ಅಪರಾಧವೆಂದು ಭಾವಿಸಿ ನನ್ನನ್ನು ನಿಂದಿಸಿದ್ದಳು! ಅದನ್ನು ಕೇಳಿದಾಗ ನಾನೂ ಮೊದಮೊದಲು ಕಠೋರಳಾಗಿಯೇ ಹೇಳಿದ್ದೆ, "ನಾನು ಆ ಕೆಲಸವನ್ನು ಮಾಡಿಯೇ ಇಲ್ಲವೆಂದು" ಉತ್ತರಿಸಿದ್ದೆ. ಅದಕ್ಕೆ ಅವಳು, "ನೀನು ಸುಳ್ಳು ಹೇಳುತ್ತಿದ್ದೀಯಾ" ಎಂದು ಮತ್ತೂ ಜೋರಾಗಿ ಅಬ್ಬರಿಸಿದ್ದಳು. ಆಗ ನಾನು ಅವಳ ಕಡೆ ಗಮನಿಸಿ, ನನ್ನಲ್ಲೇ ನಾನು ಪರಿಭಾವಿಸಿಕೊಂಡಿದ್ದೇನೆಂದರೆ, – ಈ ಎಲ್ಲವೂ ಮಾನವ ಜೀವಿಗಳ ದುಃಖಗಳು

ಮತ್ತು ಮಾನವ ಲೋಕದ ಹುಸಿತನವೆಂದು ನಾನು ಕಂಡುಕೊಳ್ಳುವಂತಾಯಿತು. ಆ ರೀತಿ ಗೊತ್ತಾಗುತ್ತಲೇ ನನಗರಿವಿಲ್ಲದಂತೆಯೇ ನನ್ನ ಕಣ್ಣಿನಿಂದ ನೀರು ಧಾರಾಕಾರವಾಗಿ ಸುರಿಯಲು ಪ್ರಾರಂಭಿಸಿತ್ತು. "ಏನು! ಇದೀಗ ಅಳಲು ಪ್ರಾರಂಭಿಸಿದೆಯಾ? ಎಂದು ಜೋರಾಗಿಯೇ ಕೇಳಿದ್ದಳು. ಆ ಒಂದು ಸಂದರ್ಭದಲ್ಲಿ, ನಾನೂ ಸಹಿತ ಸ್ವಲ್ಪ ಬಿರುಸಾಗಿಯೇ ವರ್ತಿಸಿದ್ದೆ. ಓ, ನಾನು ನನ್ನ ಸಲುವಾಗಿ ಅಳುತಿದ್ದಿಲ್ಲ; ಆದರೆ ಈ ಜಗತ್ತಿನ ದುಃಖದ ಸಲುವಾಗಿ ಅಳುತ್ತಿದೇನೆ ಎಂದು ತಾಯಿಗೆ ಪ್ರತ್ಯುತ್ತರ ಕೊಟ್ಟಿದ್ದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಅಗಸ್ಟ 5, 1961**

## ನೊಂದವರಿಗೊಂದು ಸಾಂತ್ವನ

ನನ್ನ ಬಾಲ್ಯದಲ್ಲಿ ನನ್ನ ಜೊತೆಗೆ ಆಟವಾಡಲು ಬರುತ್ತಿದ್ದ ನನ್ನ ಸಹಪಾಠಿಗಳಿಗೆ, ಅವರ ಅಭಿಪ್ರಾಯಗಳನ್ನು ನಾನು ಒಪ್ಪದೇ ಹೋದಾಗ, ನಾನು ಇದೇ ತೆರನದ ಪರಿಹಾರವೊಂದನ್ನು ಉಪಯೋಗಿಸುತ್ತಿದ್ದೆ. ಆ ಸಂದರ್ಭಗಳಲ್ಲಿ ಈಗ ನೀವು ಇರುವಂತೆಯೇ, ನಾನೂ ಸಹಿತ ಅತೀ ಸಂವೇದನಾಶೀಲ ವ್ಯಕ್ತಿತ್ವವನ್ನು ಹೊಂದಿದವಳಾಗಿದ್ದೆ. ಹೀಗಾಗಿ, ಅವರು ನನ್ನನ್ನು ತೆಗಳಿದಂತೆಲ್ಲ, ನನ್ನಲ್ಲಿ ನಾನೇ ಘಾಸಿಗೊಳ್ಳುತ್ತಿದ್ದೆ, ಅದರಲ್ಲೂ ಯಾರ ಸಲುವಾಗಿ ನಾನು ಕರುಣೆ ಹಾಗೂ ದಯಾಳುತನವನ್ನು ತೋರುತ್ತಿದ್ದೇನೋ ಅವರ ಸಲುವಾಗಿ, ನನ್ನಲ್ಲಿ ನಾನೇ ಘಾಸಿಗೊಳ್ಳುತ್ತಿದ್ದೆ. ಆಗ ನನ್ನಷ್ಟಕ್ಕೆ ನಾನೇ ಹೇಳಿಕೊಳ್ಳುತ್ತಿದ್ದ ಸಂಗತಿ ಏನೆಂದರೆ, – "ಯಾಕೆ ಈ ರೀತಿ ಶೋಕಾಕುಲರಾಗಬೇಕು? ಏಕೆ ಈ ರೀತಿಯ ದುಃಖಿಗಳಾಗಬೇಕು? ಅವರು ಹೇಳುತ್ತಿರುವ ಪ್ರಕಾರ ಅವರೇ ಸರಿಯಾಗಿದ್ದರೆ, ಅದು ನಾನು ಕಲಿತುಕೊಳ್ಳುತ್ತಿದ್ದ ಪಾಠವೆಂದು ಭಾವಿಸಿ, ಅವರ ಮಾತು ನನ್ನನ್ನು ನಾನು ಸುಧಾರಿಸಿಕೊಳ್ಳಲು ಸಾಧ್ಯಗೊಳಿಸುತ್ತದೆ ಎನ್ನುವದಕ್ಕೆ ಸಂತೋಷ ಪಡುತ್ತಿದ್ದೆ; ಒಂದು ವೇಳೆ ಅವರು ತಪ್ಪು ಮಾಡಿದ್ದಲ್ಲಿ, ಅದಕ್ಕಾಗಿ ನಾನೇಕೆ ಚಿಂತಿತಳಾಗಬೇಕು, ಅವರವರ ತಪ್ಪಿಗೆ ಅವರೇ ದುಃಖಿತರಾಗಬೇಕಾಗುತ್ತದೆ. ಈ ಎರಡೂ ಸಂದರ್ಭಗಳಿಂದಾಗಿ ತಿಳಿದು ಬಂದ ಅತ್ಯಂತ ಉತ್ತಮವಾದ ಹಾಗೂ ಗೌರವಾನ್ವಿತವಾದ ವಿಷಯವೆಂದರೆ, – ನಾನು ಮತ್ತೂ ದೃಢವಾಗಿ, ಶಾಂತವಾಗಿ ಹಾಗೂ ಅಚಲಳಾಗಿಯೇ ಕಾರ್ಯ ನಿರ್ವಹಿಸುವದನ್ನು ಮಾಡಬೇಕಾಗಿದೆ ಎಂದು ಮನದಟ್ಟಾಯಿತು."

ನಾನು ಎಂಟನೇ ವರ್ಷದವಳಿದ್ದಾಗ ಈ ರೀತಿಯ ಪಾಠವನ್ನು ನನಗೆ ನಾನೇ ರೂಪಿಸಿಕೊಂಡು ಹಾಗೂ ಅದನ್ನೇ ಅನುಸರಿಸಲು ಯತ್ನಿಸಿದ್ದೆನು. ಇದು ಈಗಲೂ ಸಹಿತ, ಅಂತಹದೇ ಪ್ರಕರಣಗಳಲ್ಲಿ ತುಂಬ ಉಪಯುಕ್ತವಾಗಿಯೇ ಸಹಾಯಕವಾಗಿದೆ.

**– ಶ್ರೀಮಾತೆ: ಅವಳ ಅಲೌಕಿಕ ಸ್ಪರ್ಶ: ಪುಟ 11**

**ಜೀವನದ ಉಪಹಾಸ್ಯ**

ನಾನು ಆ ಸಮಯದಲ್ಲಿ ಖಾಸಗೀ ಶಾಲೆಯೊಂದಕ್ಕೆ ಹೋಗುತ್ತಿದ್ದೆ. ಸರಕಾರೀ ಶಾಲೆಗೆ ನಾನು ಹೋಗುತ್ತಿರಲಿಲ್ಲ. ಏಕೆಂದರೆ, ಬಾಲಕಿಯರು ಓದಲು ಈ ಸರಕಾರೀ ಶಾಲೆಗಳು ಸೂಕ್ತವಾದವುಗಳಲ್ಲ ಎನ್ನುವದು ನನ್ನ ತಾಯಿಯ ಅಭಿಪ್ರಾಯವಾಗಿತ್ತು! ಆ ಕಾಲದಲ್ಲಿ ಅತ್ಯಂತ ಪ್ರಸಿದ್ಧವಾದ ಖಾಸಗೀ ಶಾಲೆಗೇ ನಾನು ಹೋಗುತ್ತಿದ್ದೆ, ಅಲ್ಲಿದ್ದ ಶಿಕ್ಷಕರೆಲ್ಲರೂ ತುಂಬ ಸಮರ್ಥರಾದ ಶಿಕ್ಷಕರಾಗಿದ್ದರು. ಅದರಲ್ಲೂ ಭೂಗೋಳ ಶಿಕ್ಷಕರು, ಒಬ್ಬ ಪ್ರಸಿದ್ಧ ವ್ಯಕ್ತಿಯಾಗಿದ್ದರು. ಅವರು ಕೆಲವು ಪುಸ್ತಕಗಳನ್ನೂ ಬರೆದಿದ್ದಾರೆ. ಅವರು ಬರೆದ ಭೂಗೋಳ ಪುಸ್ತಕವು ಅತ್ಯಂತ ಜನಪ್ರೀಯವಾಗಿತ್ತು. ಅದರಲ್ಲಿ ರೂಪಿಸಿದ್ದ ಎಲ್ಲ ನಕಾಶೆಗಳನ್ನೂ ನಾನು ತುಂಬ ಸಂತೋಷದಿಂದ ಅಭ್ಯಸಿಸಿದ್ದೇನೆ. ಒಂದು ದಿನ ಆ ಶಿಕ್ಷಕರು (ಅವರು ತುಂಬ ಪ್ರತಿಭಾಶಾಲೀ ಶಿಕ್ಷಕರಾಗಿದ್ದರು) ನನ್ನಡೆಗೆ ನೋಡಿ, “ಏಕೆ ಎಲ್ಲ ಪಟ್ಟಣಗಳೂ ದೊಡ್ಡ ದೊಡ್ಡ ನಗರಗಳೂ ನದಿಯ ದಂಡೆಗುಂಟಲೇ ಕಟ್ಟಲ್ಪಡುತ್ತವೆ?” ಎಂದು ಕೇಳಿದ್ದರು. ನಾನು ಉಳಿದ ಸಹಪಾಠಿಗಳನ್ನು, ಅವರ ವ್ಯಗ್ರ ದೃಷ್ಟಿಯ ನೋಟವನ್ನೂ ಗಮನಿಸುತ್ತಿದ್ದೆ, ಅವರ ದೃಷ್ಟಿ ಎಲ್ಲವೂ ನನ್ನ ಮೇಲೆಯೇ ಇದ್ದುದನ್ನು ಗಮನಿಸಿದ್ದೆ, “ಈ ಪ್ರಶ್ನೆಯನ್ನು ನನಗೇ ಕೇಳಬೇಕೆನ್ನುವದು ಅವರ ಆಶೆಯಿತ್ತು, ಅದನ್ನೇ ತಮ್ಮತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದರು. ಅದೃಷ್ಟವಶಾತ್ ಆ ಪ್ರಶ್ನೆಯನ್ನು ನನಗೆ ಕೇಳಲಿಲ್ಲ; ಅದರೆ ಕೊನೆಗೆ ನಾನೇ, ಏಕೆಂದರೆ ಅದು ಬಹಳ ಸರಳವಾದ ಉಪಾಯ! ಪರಸ್ಪರರಲ್ಲಿ ಸಂವಹನಕ್ಕೆ ಈ ನದಿಗಳು ನೈಸರ್ಗಿಕವಾಗಿಯೇ ಸುಲಭ ಮಾರ್ಗಗಳಾಗಿವೆ” ಎಂದು ಉತ್ತರಿಸಿದ್ದೆ. ಆ ಉತ್ತರಕ್ಕೆ ಶಿಕ್ಷಕರೂ ಸಹಿತ ಚಕಿತರಾಗಿದ್ದರು!... ಇದು ನನ್ನ ಶಾಲಾ ಜೀವನದಲ್ಲಿ ನಡೆದ ಘಟನೆ. ನನ್ನ ಎಲ್ಲ ವಿದ್ಯಾಭ್ಯಾಸವೂ ಈ ರೀತಿಯಲ್ಲಿಯೇ ಆಗಿದೆ. ನನ್ನಷ್ಟಕ್ಕೆ ನಾನೇ ಇದನ್ನು ತುಂಬ ಖುಷಿಯಿಂದ ಅನುಭವಿಸಿದ್ದೇನೆ. ಜೀವಮಾನದುದ್ದಕ್ಕೂ ಇದರಿಂದ ಖುಷಿ–ಗೊಂಡಿದ್ದೇನೆ. ಏಕೆಂದರೆ ಇದೊಂದು ತಮಾಶೆದಾಯಕವಾದ ಸಂಗತಿಯಾಗಿತ್ತು.

ಇನ್ನು ಸಾಹಿತ್ಯದ ಶಿಕ್ಷಕರು, ಪಾರಂಪರಿಕವಾದ ಕಲ್ಪನೆಗಳಿಂದ ಕೂಡಿದ ಅದೇ ವಿಚಾರಧಾರೆಗಳನ್ನೇ ಹೇಳುತ್ತಿದ್ದ ವೃದ್ಧರಾಗಿದ್ದ ವ್ಯಕ್ತಿಯಾಗಿದ್ದರು. ಅಯ್ಯೋ ... ಅದು ಎಷ್ಟೊಂದು ಬೇಜಾರಿನ ಸಂಗತಿಯಾಗಿತ್ತು ಅದು! ಹೀಗಾಗಿ ಅಲ್ಲಿ ಹಾಜರಿದ್ದ ಎಲ್ಲ ಸಹಪಾಠಿಗಳೂ ಅವರನ್ನು ಕಂಡರೆ ಮೂಗು ಮುರಿಯುತ್ತಿದ್ದರು. ಅವರು ನಿಬಂಧಗಳಿಗಾಗಿ ಕೊಡುತ್ತಿದ್ದ ವಿಷಯ – ಉತ್ತರಾಪಥ ಮತ್ತು ಭವಿಷ್ಯದ ಪಥ ಎನ್ನುವದಾಗಿತ್ತು. ನಾನು ಹನ್ನೆರಡು ವರ್ಷದವಳಿದ್ದಾಗ ಇದಕ್ಕೆ ಉತ್ತರಿಸಿ ನಿಬಂಧ ಬರೆದಿದ್ದೆ. ಇದು ಆ ಪ್ರಶ್ನೆಯನ್ನು ಗಮನಿಸಿಯೇ ಸಿದ್ಧಪಡಿಸಿದ್ದ ಉತ್ತರವಾಗಿರುತ್ತಿತ್ತು. ಅವರು ಒಂದು ಗಾದೆ ಮಾತನ್ನೂ ಆಗಾಗ ಹೇಳುತ್ತಿದ್ದರು (ಇದೀಗ ಆ ಗಾದೆ ಮಾತು ಏನಿತ್ತು ಎನ್ನುವದು ಮರೆತಿದೆ) ಅದನ್ನು ನಾನು ಹೇಳಬೇಕೆಂದು ಬಯಸುತ್ತಿದ್ದರು. ಅದು ಇಂದ್ರಿಯಜನ್ಯ ಸಂಗತಿಗಳನ್ನು ಹೇಳುವಂತೆ ಇತ್ತು ಎನಿಸುತ್ತಿದೆ. ಆಗ ನಾನು ನನ್ನ ಕಥೆಯನ್ನು ಹೇಳಿದ್ದೆ. ಅದು ಅತ್ಯಂತ ಚಿಕ್ಕ ಕಥೆಯಾಗಿತ್ತು. ನಾನು ಹನ್ನೆರಡು ವರ್ಷದವಳಾಗಿದ್ದಾಗ ಬರೆದಿದ್ದ ಕಥೆಯಾಗಿತ್ತು ಅದು. ಈ ಘಟನೆಯೇ ನಂತರದಲ್ಲಿ ಅವರು ನನ್ನ ಕಡೆಗೆ ತಪ್ಪು ದೃಷ್ಟಿಯಿಂದಲೇ ನೋಡುತ್ತಿದ್ದರು. (ನಗು) ನಾನೂ ಸಹಿತ ಅಂತಹದೇ ದೃಷ್ಟಿಯನ್ನು ಹೊಂದಬೇಕು ಎನ್ನುವದು ಅವರ ಆಶಯವೂ ಆಗಿತ್ತು.... ಓ... ಆದರೆ ನಾನು ಮಾತ್ರ ಸದಾ ಒಳ್ಳೆಯ ಹುಡುಗಿಯಾಗಿಯೇ ಇದ್ದೆ!

ಹೆಚ್ಚು–ಕಡಿಮೆ ಇದೇ ತೆರನಾದ ಸಂಗತಿಗಳು ನಡೆಯುತ್ತಿದ್ದವು. ಜೀವನದ ವಾಸ್ತವದ ಪರಿಹಾರಾತ್ಮಕವಾದ ಸಲಹೆಗಳನ್ನು ಗಮನಿಸುತ್ತಲೇ ಮತ್ತು ಆ ಮೂಲಕವೇ ಗಂಭಿರತೆಗೆ ತಂತಾನೆ ಪರಿವರ್ತಿತನಗೊಳ್ಳುವದನ್ನು ಗಮನಿಸುತ್ತ ಬಂದಿದ್ದೇನೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜುಲೈ 26, 1967**

**ಭಾಷೆಗಳ ಕಲಿಕೆ**

ಹೀಗಾಗಿಯೇ ಇದು ಚೈತನ್ಯವಾಗಿತ್ತು.

ತದನಂತರದಲ್ಲಿ ಕಲಿಕಾ ಅವಧಿ ಮತ್ತು ವಿಕಸನಗೊಳ್ಳುವ ಅವಧಿಯಾಗಿತ್ತು. ಆದರೆ ಸಾಮಾನ್ಯ ಬೌದ್ಧಿಕ ಹಂತದಲ್ಲಿ – ಅದೂ ಶಾಲಾ ದಿನಗಳಲ್ಲಿ – ಇದೊಂದು ತೆರನಾದ ಕಲಿಕಾ ಅವಧಿಯೂ ಆಗಿತ್ತು. ಇದನ್ನು ವಿವರ ವಿವರವಾಗಿ

ತಿಳಿಸಲು, ಹಾಗೆ ನೋಡಿದರೆ ಆ ಕಲಿಕಾ ಅವಧಿಯ ಉದ್ದಕ್ಕೂ ಪ್ರಜ್ಞೆಯು ವಿಕಸನಗೊಳ್ಳುತ್ತಲೇ ಬರುತ್ತಿತ್ತು. ನಾನು ಯಾವುದನ್ನೂ ಯಾಂತ್ರಿಕವಾಗಿ ಕಲಿಯಲೇ ಇಲ್ಲ; ಬದಲಾಗಿ ಅದರ ಅಂತರಂಗವನ್ನೂ ಅರಿಯುವದರಿಂದಲೇ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೆ. ಯಾವಾಗ ನಾನು ಅವುಗಳ ಬಗೆಗೆ ಕೆಲವು ಅಂಶಗಳನ್ನು ತಿಳಿದುಕೊಳ್ಳುತ್ತಿದ್ದೆನೋ, ಆಗಲೇ ಅದರ ಅರಿವು ನನಗಾಗುತ್ತಿತ್ತು. ಇದನ್ನೇ ಬೇರೆ ಶಬ್ದಗಳಲ್ಲಿ ಹೇಳುವದಾದಲ್ಲಿ, ಆ ಕಲಿಕಾ ಅವಧಿಯು ಬೌದ್ಧಿಕದ್ದಾಗಿರಲಿಲ್ಲ. ಅದನ್ನು ಪ್ರಜ್ಞಾವಿಕಸನಗೊಳ್ಳುತ್ತಿರುವ ಅವಧಿಯ ಭಾಗವೆಂದು ಪರಿಗಣಿತವಾಗಿತ್ತು. ಆದರೆ ಕುತೂಹಲವೇ ನನ್ನನ್ನು ಓದಲು ಕಲಿಸಿತು. ಇದು ಹೇಗೆ ಘಟಿಸಿತು ಎನ್ನುವದನ್ನು ನಾನು ಈಗಾಗಲೇ ಹೇಳಿದ್ದೇನಲ್ಲವೇ? ನಾನು ಅಜಮಾಸು ಏಳು ವರ್ಷದವಳಾಗಿದ್ದಾಗ – ಅಂದರೆ ಇನ್ನೂ ಏಳು ಪೂರ್ತಿಯಾಗಿ ಆಗಿರದಿದ್ದಾಗ, ನನ್ನ ಸೋದರ – ನನಗಿಂತ ಹದಿನೆಂಟು ತಿಂಗಳು ದೊಡ್ಡವನು – ಶಾಲೆಯಿಂದ ದೊಡ್ಡ ದೊಡ್ಡ ಚಿತ್ರದ ಪುಸ್ತಕಗಳನ್ನು ಮನೆಗೆ ತರುತ್ತಿದ್ದನು. (ಮಕ್ಕಳಿಗಾಗಿಯೇ ರಚಿಸಲ್ಪಡುತ್ತಿದ್ದ ಈ ಚಿತ್ರಗಳಲ್ಲಿ, ಅವುಗಳ ಕೆಳಗೆ ದೊಡ್ಡ–ದೊಡ್ಡ ಅಕ್ಷರಗಳಲ್ಲಿ ಅಡಿಬರಹ ಇರುತ್ತಿತ್ತು. ಈಗಲೂ ಅವುಗಳನ್ನು ಅಲ್ಲಿ ಉಪಯೋಗಿಸುತ್ತಾರೆ.) ಆ ರೀತಿಯಲ್ಲಿ ತಂದ ಒಂದು ಪುಸ್ತಕವನ್ನು ನನಗೆ ನೋಡಲು ಕೊಟ್ಟಿದ್ದನು. “ಅದರಲ್ಲಿ ಏನು ಬರೆದಿದೆ?” ಎಂದು ಕೇಳಿದ್ದೆ. “ನೀನೇ ಅದನ್ನು ಓದು” ಎಂದು ಅವನು ಉತ್ತರಿಸಿದ್ದ. “ಹೇಗೆ ಓದಬೇಕು ಎನ್ನುವದು ನನಗೆ ಗೊತ್ತಿಲ್ಲ” ಎಂದಿದ್ದೆ. “ಹಾಗಾದರೆ ಕಲಿತುಕೋ!” ಎಂದು ಹೇಳಿದ್ದ. “ಹಾಗೇ ಆಗಲಿ” ಎಂದು ನಾನು ಅವನಿಗೆ ಉತ್ತರಿಸಿ, “ನನಗೆ ಅಕ್ಷರಗಳನ್ನು ಕಲಿಸಿ ಕೊಡು” ಎಂದು ಕೇಳಿದಾಗ ಅವನು ನನಗೆ ಒಂದು ಅಂಕಲಿಪಿ ಪುಸ್ತಕವನ್ನು ತಂದುಕೊಟ್ಟಿದ್ದನು. ನಾನು ಅದನ್ನು ಕೇವಲ ಎರಡೇ ದಿನಗಳಲ್ಲಿ ಕಲಿತುಕೊಂಡಿದ್ದೆ. ಮೂರನೇ ದಿನದಿಂದಲೇ ಓದಲು ಪ್ರಾರಂಭ ಮಾಡಿದ್ದೆ. ಇದು ನಾನು ಕಲಿತ ವಿಧಾನ. ನಾನು “ಓದಲು ಶುರು ಮಾಡಿದಾಗ ಅವರೆಲ್ಲ ಓಹೋ, ಓಹೋ ಎಂದು ಹೇಳುತ್ತಿದ್ದರು.” ಈಗಲೂ ಈ ಮಗು ಓದಿನಲ್ಲಿ ಹಿಂದುಳಿದಿದೆ! ಏಳು ವರ್ಷ ವಯಸ್ಸಾಗಿದ್ದರೂ ಇನ್ನೂ ಓದಲು ಕಲಿತಿಲ್ಲ.. ಎಂತಹ ಅವಮಾನಕರ ಘಟನೆಯಾಗಿತ್ತು ಅದು..! ಹೀಗಾಗಿ ಇಡೀ ಕುಟುಂಬವೇ ಅಸಮಾಧಾನಗೊಂಡಿತ್ತು. ಮತ್ತೆ ತದನಂತರದಲ್ಲಿ ನೋಡ ನೋಡುತ್ತಲೇ, ಕೇವಲ ಒಂದೇ ಒಂದು ವಾರದಲ್ಲಿ ನಾನು ವರ್ಷಾನುಗಟ್ಟಲೇ ಕಲಿಕೆಗೆ ತೆಗೆದುಕೊಳ್ಳಬೇಕಾದುದನ್ನು ಕೇವಲ ಒಂದೇ

ವಾರದಲ್ಲಿ ಮುಗಿಸುತ್ತಿದ್ದೆ. ಹೇಗೆ ಕಲಿಕೆಯನ್ನು ಮುಂದುವರೆಸಬೇಕು ಎನ್ನುವದು ಗೊತ್ತಾಯಿತು. ಹೀಗಾಗಿ ಅವರು ನನ್ನ ಬಗೆಗೆ ಮಾತನಾಡುವಾಗ ಎರಡೆರಡು ಬಾರಿ ಯೋಚಿಸುವಂತಾಯಿತು.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜುಲೈ 25, 1962**



**ಶಿರೋಭಾಗದಲ್ಲಿ ಉಜ್ವಲ ಮತ್ತು ಶಕ್ತಿದಾಯವಾದ ಚೈತನ್ಯ**

ಮುಖ್ಯ ಸಂಗತಿ ಎಂದರೆ, ನನ್ನದೇ ಯೋಗ ಪದ್ಧತಿಯನ್ನು ನಾನೇ ರೂಪಸಿಕೊಂಡಿದೆ. ಅದೂ ನಾನು ಕೇವಲ ಐದು ವರ್ಷ ವಯಸ್ಸಿನಲ್ಲಿ ಇದ್ದಾಗಲೇ. (ನಾನು ಅದಕ್ಕಿಂತಲೂ ಪೂರ್ವದಲ್ಲಿಯೇ ಇದನ್ನು ಪ್ರಾರಂಭಿಸಿರಬೇಕೆಂದು ಭಾವಿಸಿದ್ದೇನೆ. ಆದರೆ ಆ ಅವಧಿಯ ನೆನಪು ತುಂಬ ಅಸ್ಪಷ್ಟ ಹಾಗೂ ನಿಖರವಾಗಿಲ್ಲ) ... ಅದೆಲ್ಲವೂ ಇರಲಿ, ನಾನು ಅದನ್ನು ಪ್ರಜ್ಞಾಪೂರ್ವಕವಾಗಿಯೇ

ಕೈಕೊಂಡಿದ್ದೆನು. ಹಾಗೆಂದು ಅದರ ಮೂಲ ಅರ್ಥದ ಬಗೆಗೆ ನನಗೆ ಏನೊಂದೂ ತಿಳಿದಿರಲಿಲ್ಲ. ಆದರೆ ಪ್ರಜ್ಞೆಯ ಪ್ರಥಮ ಅನುಭವವು ಮಾತ್ರ ನನಗೆ ಇಲ್ಲಿ (ತಲೆಯ ಮೇಲ್ಭಾಗದಲ್ಲಿ ತೋರಿಸುತ್ತ) ಆಗಿತ್ತು. ಅದೊಂದು ಪ್ರಕಾಶಮಾನವಾದ ಹಾಗೂ ಸಾಮರ್ಥ್ಯಶಾಲಿಯಾದ ಸಂಗತಿಯಾಗಿತ್ತು. ಅದೂ ಅಲ್ಲದೇ ನಾನು ಐದನೇ ವರ್ಷದಲ್ಲಿದ್ದಾಗಲೇ ಇಂತಹ ಅನುಭವವನ್ನು ಕಂಡಿದ್ದೆ. ಅದೊಂದು ಹರ್ಷದಾಯಕವಾದ ಸಂವೇದನೆಯ ಘಟನೆಯಾಗಿತ್ತು. ನಾನು ಆ ದಿನ ನನ್ನ ಸಲುವಾಗಿಯೇ ತಯಾರಿಸಿದ್ದ ಆರಾಮ ಖುರ್ಚಿಯಲ್ಲಿ ಕುಳಿತಿದ್ದೆ. ನಾನು ಓರ್ವಳೇ ಆ ಕೋಣೆಯಲ್ಲಿ ಇದ್ದದ್ದು. ಹೌದು ನಾನು ಓರ್ವಳೇ ಅಲ್ಲಿ ಇದ್ದದ್ದು. ಅದು ಏನು.. ಏನಾಗಿತ್ತು, ನಾನು ಏನನ್ನು ನೋಡುತ್ತಿದ್ದೆ... ಅದೊಂದು ವಸ್ತುವಲ್ಲ.. ಏನೂ ಅಲ್ಲ.. ಒಟ್ಟಿನಲ್ಲಿ ಮಾನಸಿಕವಾಗಿ ಶೂನ್ಯವಾಗಿದ್ದೆ. ಅಯೋಮಯದಲ್ಲಿದ್ದೆ. ಆದೆ ನಾನು ಆ ಪ್ರಕಾಶಮಾನವಾದ, ಸಾಮರ್ಥ್ಯಶಾಲಿಯಾದ ಸಂವೇದನೆಯನ್ನು (ತಲೆಯ ಮೇಲ್ಭಾಗದಲ್ಲಿ) ಹೊಂದಿದ್ದೆನು. ಅದು ಚೈತನ್ಯವಾಗಿತ್ತು. ಅಲ್ಲಿ ನಾನು ಅನುಭೂತಿಗೊಂಡಿದ್ದೆನು. ಜೊತೆಗೆ ಅದು ನಾನು ಬದುಕಬೇಕೆಂದಿರುವ ವಿಷಯವೂ ಆಗಿತ್ತು. ಆ ಎಲ್ಲ ಶಬ್ದಗಳ ಜೊತೆಗೆ ಮಾತ್ರವಲ್ಲ, ನೈಸರ್ಗಿಕವಾಗಿ, ಮತ್ತು .. (ಊರ್ಧ್ವಗಾಮಿಯಾದ ಅಭೀಪ್ಸೆಯ ವಿನ್ಯಾಸದೊಡನೆ ಶ್ರೀಮಾತೆಯವರು ತೋರಿಸುತ್ತ) ಅದಾಗಿತ್ತು. ಆಮೇಲೆ ನಾನು ಅದನ್ನು ಕೆಳಗೆ ಎಳೆದುಕೊಂಡೆ. ಏಕೆಂದರೆ ಅದು ಅಲ್ಲಿ ಇತ್ತು. ಅದು ಖಚಿತವಾಗಿಯೂ ನನ್ನ ಸಲುವಾಗಿಯೇ ಆಗಮಿಸಿದ “ಕಾರಣ”ವಾಗಿತ್ತು.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜುಲೈ 25, 1962**

**ಶಾಲಾ ದಿನಗಳು**

ಆ ಒಂದು ಕಾರಣದಿಂದಾಗಿಯೇ ನಾನು ಸದಾ ಪ್ರತಿಭಾಶಾಲೀ ವಿದ್ಯಾರ್ಥಿಯಾಗಿದ್ದೆ. ನಾನು ಎಲ್ಲವನ್ನೂ ಅರಿತುಕೊಳ್ಳಲು ಬಯಸುತ್ತಿದ್ದೆ. ಅದನ್ನು ಕಂಠಪಾಠ ಮಾಡುವ ಮೂಲಕ ವಿಷಯವನ್ನು ಕಲಿಯುತ್ತಿದ್ದ ಇನ್ನುಳಿದವರಂತೆ ನಾನಿರಲಿಲ್ಲ. ಅದಕ್ಕಿಂತ ಮಿಗಿಲಾಗಿ ನನ್ನ ಜ್ಞಾಪಕಶಕ್ತಿಯೂ ಅಗಾಧವಾಗಿತ್ತು. ಅದೂ ಶಬ್ದಗಳ ಬಗೆಗೆ ಹಾಗೂ ಆಕೃತಿಗಳ ಬಗೆಗೆ ಇರುವ ಜ್ಞಾಪಕಶಕ್ತಿ ಮತ್ತೂ ಹೆಚ್ಚಿತ್ತು! ಒಂದು ಕವಿತೆಯನ್ನು ಒಂದು ರಾತ್ರಿಯ ಅವಧಿಯಲ್ಲಿ ಗಟ್ಟಿಯಾಗಿ ಓದುತ್ತಿದ್ದೆ. ಮರುದಿನ ಬೆಳಿಗ್ಗೆ ಅದನ್ನು ಪೂರ್ತಿಯಾಗಿಯೇ ಅರಿತುಕೊಂಡಿರುತ್ತಿದೆ.

ತದನಂತರದಲ್ಲಿ ನಾನು ಪುಸ್ತಕವನ್ನು ಓದಲು ಪ್ರಾರಂಭಿಸಿದ್ದೆ. ಯಾರೋ ಒಬ್ಬರು ಒಂದು ಭಾಗವನ್ನು ಓದಲು ಸೂಚಿಸಿದ್ದರು. ಆಗ ನಾನು ಅವರಿಗೆ, "ಹೌದೇ.. ಸರಿ ಹಾಗಾದರೆ, ಅದು ಇಂತಹ ಪುಸ್ತಕದ ಇಂತಹ ಪುಟದಲ್ಲಿಯೇ ಸರಿ" ಎಂದು ಉದ್ಗರಿಸಿದ್ದೆ. ಆ ಪುಟವನ್ನು ಹುಡುಕಿ ಓದಿದ್ದೆ. ಆ ಘಟನೆ ಇನ್ನೂ ಮಾಸಿಲ್ಲ. ಈಗಲೂ ಅದೇ ಅನುಭೂತಿಯಲ್ಲಿಯೇ ಇದೆ. ಆದಾಗ್ಯೂ ಅದೊಂದು ಅತೀ ಸಾಮಾನ್ಯ ವಿಕಸನದ ಅವಧಿಯಾಗಿತ್ತು.

ಆಮೇಲೆ ಕಿಶೋರಾವಸ್ಥೆಯಲ್ಲಿ (ಎಂಟು–ಹತ್ತು ವರ್ಷಗಳ ಅವಧಿಯಲ್ಲಿ) ನನ್ನ ಅಭ್ಯಾಸದ ಜೊತೆಜೊತೆಗೇ ಚಿತ್ರಕಲೆಯನ್ನೂ ಕಲಿಯಲು ಪ್ರಾರಂಭಿಸಿದ್ದೆ. ನನ್ನ ಹನ್ನೊಂದನೇ ವರ್ಷದಲ್ಲಿ ನಾನು ಭಾವಚಿತ್ರಗಳನ್ನು ರಚಿಸುತ್ತಿದ್ದೆ. ಕಲೆ ಮತ್ತು ಸೌಂದರ್ಯದ ಎಲ್ಲ ವಿಷಯಗಳನ್ನೂ, ಅದರಲ್ಲೂ ವಿಶೇಷವಾಗಿ ಸಂಗೀತ ಮತ್ತು ಚಿತ್ರಕಲೆಗಳು ನನ್ನನ್ನು ಹೆಚ್ಚು ಆಕರ್ಷಿಸಿದ್ದವು. ಆ ಅವಧಿಯಲ್ಲಿ ನಾನು ತೀವ್ರತೆರನಾದ ಮಹತ್ವಪೂರ್ಣವಾದ ಪ್ರಗತಿಯ (ವಿಕಸನದ) ಹಂತದಲ್ಲಿದ್ದೆ. ಇದರೊಡನೆ, ಅದು ನನ್ನ ಪ್ರಾಥಮಿಕ ವರ್ಷಗಳಲ್ಲಿ ನನ್ನ ಆಂತರ್ಯದಲ್ಲಿ ಇರುವ ಮಾರ್ಗದರ್ಶಿಯ ಅಸ್ತಿತ್ವದೊಡನೆ ನಾನಿದ್ದೆ. ಹೀಗಾಗಿ ಇವೆಲ್ಲವನ್ನೂ ಕೇಂದ್ರೀಕರಿಸಿಕೊಂಡೇ ಅಭ್ಯಾಸ ಮಾಡುತ್ತಿದ್ದೆ. ಸಂವೇದನೆಗಳ ಅಧ್ಯಯನ, ಅವುಗಳ ಅವಲೋಕನ, ಕಲಿಕಾ ತಂತ್ರವನ್ನು ಹಾಗೂ ತುಲನಾತ್ಮಕ ಅಧ್ಯಯನವನ್ನು ಮಾಡುತ್ತಿದ್ದೆ, ಜೊತೆಜೊತೆಗೆ ಹಲವು ಅಭಿರುಚಿಗಳ ವ್ಯವಹರಣೆಗಳಲ್ಲಿನ ಅವಲೋಕನದ ಮೂಲಕ ಒಂದು ಪರಿಪೂರ್ಣ ವರ್ಣಮಯ ಸಂರಚನೆಯನ್ನೂ, ರುಚಿ–ಗಂಧ ಹಾಗೂ ಧ್ವನಿಗಳನ್ನು ಗ್ರಹಿಸುವ ಮೂಲಕ – ಅಂದರೆ – ಸಮಗ್ರವಾದ ಅನುಭವಗಳ ಒಂದು ಸುಯೋಜಿತ ವಿಷಯದಂತೆ ಕಲಿಯುತ್ತಿದ್ದೆ. ಹೀಗಾಗಿ ಇದು ಇಡೀ ಜೀವನದ ಉದ್ದಕ್ಕೂ ಬರುವ ಹಲವು ಅನುಭವಗಳ ಮೂಲಕ – ಹೌದು ಹಲವು ಅನುಭವಗಳು – ದುಃಖ, ಸುಖ, ಸಂತೋಷ, ತೊಂದರೆ, ಯಾತನೆ ... ಒಟ್ಟಿನಲ್ಲಿ ಎಲ್ಲವೂ... ಸೇರಿದಂತೆ.. ಓ.. ಎಲ್ಲವೂ ಅಧ್ಯಯನಶೀಲ ವಸ್ತುಗಳೇ ಆಗಿವೆ. ಅದು ಯಾವಾಗಲೂ ಅಂತರ್ಗತವಾಗಿ ಅಸ್ತಿತ್ವದಲ್ಲಿ ಉಳಿಯುತ್ತದೆ; ನ್ಯಾಯ ನಿರ್ಣಯ ಮಾಡುತ್ತದೆ; ನಿರ್ಧರಣೆಯನ್ನು, ವ್ಯವಸ್ಥೆಗೊಳಿಸುವದನ್ನು ಮತ್ತು ಸರ್ವವನ್ನೂ ಸುಸಂಬದ್ಧಗೊಳಿಸುತ್ತದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜುಲೈ 25, 1962**

## ಹಲವು ವಿಭಿನ್ನ ವಿಷಯಗಳು

...ನಾನು ಹಲವು ವಿಧದ ಸಂಗತಿಗಳನ್ನು ಕೈಕೊಂಡಿದ್ದೇನೆ! ಹೀಗಾಗಿ ನಾನು ಯಾವಾಗಲೂ ಒಳ್ಳೆಯವಳು ಎಂದು ಹೇಳಿಸಿಕೊಂಡಿಲ್ಲ. ನಾನು ಅಧ್ಯಯನ ಮಾಡುತ್ತಿದ್ದೆ, ಚಿತ್ರಕಲೆಯನ್ನೂ ಮಾಡುತ್ತಿದ್ದೆ, ಇವುಗಳ ಜೊತೆಜೊತೆಗೆ ಇನ್ನುಳಿದ ವಿಷಯಗಳನ್ನೂ ಸಹಿತ ಕೈಗೊಳ್ಳುವದರಲ್ಲಿ ನಿರತಳಾಗಿದ್ದೆ. ನನ್ನ ಸಂಗೀತವೂ ಸಹಿತ ನಿಗದಿತವಾದ ಹಂತವನ್ನು ತಲುಪಿಲ್ಲ ಎಂದು ಹೇಳುವದನ್ನೂ ಕೇಳಿದ್ದೇನೆ. ನನ್ನ ಚಿತ್ರಕಲೆಯೂ ಸಹಿತ ಅಷ್ಟೊಂದು ಪರಿಪಕ್ವದ್ದಲ್ಲ ಎನ್ನುವವರ ನುಡಿಗಳನ್ನೂ ಕೇಳಿದ್ದೇನೆ. ನನ್ನ ಅಧ್ಯಯನವೂ ಸಹಿತ ಅಪೂರ್ಣವಾದದ್ದೇ ಆಗಿದೆ. ಬಹುತೇಕವಾಗಿ ಇವೆಲ್ಲ ಸಂಗತಿಗಳೂ ನಿಜವಾದವುಗಳೇ ಆಗಿವೆ. ಆದರೆ ಈಗಲೂ ಸಹಿತ, ಇವೆಲ್ಲವೂ ಅನುಕೂಲಕರವೆಂದೇ (ಅಂದಿನಂತೆಯೇ) ಕಂಡುಕೊಂಡಿದ್ದೇನೆ. ..ಓರ್ವ ವ್ಯಕ್ತಿಯ ಮನಸ್ಸಿನ ಗ್ರಹಿಕೆಗೆ ಹಾಗೂ ವೈಶಾಲ್ಯಗೊಳ್ಳುವದಕ್ಕೆ ಇವೆಲ್ಲವೂ ಪೂರಕ ಅಂಶಗಳೆಂದು ಕಂಡುಕೊಂಡಿದ್ದೇನೆ.

*

ನಾನು ಎಂಟು ವರ್ಷದವಳಿದ್ದಾಗ ಟೆನಿಸ್ ಆಡುವದನ್ನು ಪ್ರಾರಂಭಿಸಿದ್ದೆ ಎನ್ನುವದು ನೆನಪಿದೆ. ಅದೊಂದು ಉತ್ಸಾಹದ ಸಂಗತಿಯಾಗಿತ್ತು. ಆದರೆ ಯಾವುದೇ ಸಮಯಕ್ಕೆ ನನಗಿಂತ ಕಿರಿಯರಾದವರೊಡನೆ ನಾನು ಆಡಲು ಇಚ್ಛಿಸುತ್ತಿರಲಿಲ್ಲ. ಏಕೆಂದರೆ ಅವರ ಜೊತೆ ಆಡುವದರಿಂದ ಏನನ್ನೂ ಕಲಿಯಲಾಗುತ್ತಿರಲಿಲ್ಲ. (ಸಾಮಾನ್ಯವಾಗಿಯೇ ಅಲ್ಲಿ ಅವರನ್ನು ನಾನೇ ಸೋಲಿಸುತ್ತಿದ್ದೆ.) ಹೀಗಾಗಿ, ನಾನು ಯಾವಾಗಲೂ ಉತ್ತಮ ಆಟಗಾರರೊಡನೇ ಆಡಲು ಬಯಸುತ್ತಿದ್ದೆ. ಆ ಸಂಧರ್ಭದಲ್ಲಿ ಅವರೆಲ್ಲ ಅಚ್ಚರಿ ತುಂಬಿದ ದೃಷ್ಟಿಯಿಂದ ನನ್ನನ್ನು ನೋಡುತ್ತಿದ್ದರು. ಆದರೆ ಆಟದ ಕೊನೆಯ ಹಂತದಲ್ಲಿ ಮಾತ್ರ ನನೊಡನೆ ಆಡುತ್ತಿದ್ದರು. ಹಾಗೆಂದು ನಾನು ಯಾವತ್ತೂ ಅವರ ವಿರುದ್ಧ ಆಡಿ ಗೆದ್ದಿಲ್ಲ. ಆದರೆ ಅಲ್ಲಿ ಅಮೂಲ್ಯವಾದುದನ್ನು ಕಲಿತಿದ್ದೆನೆ.

*

ನನ್ನಷ್ಟಕ್ಕೆ ನಾನೇ ದೊಡ್ಡ ದೊಡ್ಡ ವ್ಯವಹರಣೆಗಳನ್ನು ರೂಪುಗೊಳಿಸಲು ಸಾಹಸಕ್ಕೆ ತೊಡಗಿಸಿಕೊಂಡಿದ್ದೆ. ಏಕೆಂದರೆ, ಅದು ಕೌಶಲ್ಯವನ್ನು ಒದಗಿಸುತ್ತದೆ, ವ್ಯಕ್ತಿಯ

ಚಲನವಲನಗಳನ್ನು ನಿಯಂತ್ರಿಸುತ್ತದೆ ಮತ್ತು ಹಿಂಸೆಯ ಅವಧಿಯಲ್ಲೂ ಸಹಿತ ಶಿಸ್ತಿನ ಕಾರ್ಯದಲ್ಲಿಯೇ ತೊಡಗುವಂತೆ ಹೇಳುತ್ತದೆ. ಈ ಮೂಲಕವೇ ಮುಂದೆ ಸಾಗುವದನ್ನು ನಾನು ಕಲಿತುಕೊಂಡಿದ್ದೇನೆ. ಅದೇ ರೀತಿಯಲ್ಲಿಯೇ ಗುಂಡು ಹಾರಿಸುವದನ್ನೂ ಕಲಿತುಕೊಂಡೆ. ಒಂದು ಪಿಸ್ತೂಲಿನ ಸಹಾಯದಿಂದ ಗುಂಡು ಹೊಡೆಯುವದನ್ನು ಕಲಿತುಕೊಂಡೆ. ಏಕೆಂದರೆ ಅದು ಒಂದು ನಿಶ್ಚಿತತೆಯನ್ನೂ (ಏಕಾಗ್ರತೆಯನ್ನೂ) ಮತ್ತು ಕೌಶಲ್ಯವನ್ನೂ ಹಾಗೂ ಖಚಿತ ದೃಷ್ಟಿಕೋನವನ್ನೂ ಕಲಿಸಿಕೊಡುವ ಒಂದು ಅಪ್ರತಿಮ ಹಂತವನ್ನು ಕೊಡುತ್ತದೆ. ಮೇಲಾಗಿ ಎಂತಹದೇ ಅಪಾಯದ ಮಧ್ಯದಲ್ಲಿಯೂ ಸಹಿತ ಪ್ರಶಾಂತರಾಗಿಯೇ ಇರುವಂತೆ ಬಾಧ್ಯತೆಯನ್ನೂ ರೂಪಿಸುತ್ತದೆ.

**– ಶ್ರೀಮಾತೆ: ಅವಳ ಅಲೌಕಿಕ ಸ್ಪರ್ಶ: 16, 19**

*

**ಪರಿಪೂರ್ಣತೆಯ ಎಡೆಗೆ ಮುಂದುವರಿಕೆ**

ಅಲ್ಲೊಂದು ವಿಷಯವಿತ್ತು. (ಆ ಸಮಯದಲ್ಲಿ ನಾನು ಆ ವಿಷಯದ ಬಗೆಗೆ ಅರಿವು ಹೊಂದಿರಲಿಲ್ಲ, ಅದು ಏಕೆ ಹಾಗಿತ್ತು ಎನ್ನುವದೂ ನನಗೆ ತಿಳಿದಿದ್ದಿಲ್ಲ, ಆದರೆ ಇದೀಗ ಗೊತ್ತಾಗಿದೆ.); ನಾನು ಏನು ಮಾಡಬೇಕೆಂದು ಬಯಸುತ್ತೇನೆಯೋ ಅದನ್ನು ಕಾರ್ಯಗತ ಮಾಡಬಲ್ಲೆ, ಆದರೆ ಕೆಲವು ಸಮಯದ ನಂತರದಲ್ಲಿ ಅಂದರೆ, ಆ ವಿಷಯದಲ್ಲಿ ಅನುಭವ ಹೊಂದಿದ ನಂತರದಲ್ಲಿ ಅದಕ್ಕಾಗಿಯೇ ಜೀವನವನ್ನು ಮುಡಿಪಾಗಿಡುವದು ಮುಖ್ಯವೆಂದು ಎಂದೂ ಕಂಡುಬರಲಿಲ್ಲ. ಹೀಗಾಗಿ ನಾನು ಬೇರೆಯದೇ ವಿಷಯಕ್ಕೆ ಸದಾ ಚಲಿಸಬೇಕಾಯಿತು, ಚಿತ್ರಕಲೆ, ಸಂಗೀತ, ವಿಜ್ಞಾನ, ಸಾಹಿತ್ಯ ... ಹೀಗೇ ಎಲ್ಲವನ್ನೂ ಒಳಗೊಂಡಿತ್ತು. ಜೊತೆಗೆ ಅದು ಯಾವಾಗಲೂ ಅಸಾಮಾನ್ಯವೆನ್ನುವಂತೆಯೇ ಸರಳ ವಿಷಯವಾಗಿತ್ತು. ಆದರೆ ತದನಂತರದಲ್ಲಿ ನಾನು ಅದರಿಂದ ಹೊರಬಂದೆ. ಹೀಗಾಗಿಯೇ ನನ್ನ ತಾಯಿ (ಅವಳು ಯಾವಾಗಲೂ ಅತ್ಯಂತ ಕಠೋರ ಸ್ವಭಾವದವಳೇ ಆಗಿದ್ದಳು) ಹೇಳುತ್ತಿದ್ದುದೇನೆಂದರೆ, "ನನ್ನ ಮಗಳು ಯಾವುದನ್ನಾದರೂ ಅಂತಿಮ ಹಂತದ ವರೆಗೆ ತೆಗೆದುಕೊಂಡು ಹೋಗಲು ಅಸಮರ್ಥಳೇ ಆಗಿದ್ದಾಳೆ". ಅದೇ ರೀತಿಯಲ್ಲಯೇ ಮುಂದುವರೆಯಿತು. ಅಂದರೆ ಯಾವುದನ್ನೂ ಅಂತಿಮ ಹಂತದ ವರೆಗೆ ಕಾಣುವದಕ್ಕೆ ಅಸಮರ್ಥಳಾಗಿಯೇ ಉಳಿದೆ... ಯಾವಾಗಲೂ

ಏನನ್ನಾದರೂ ಸ್ವಲ್ಪ ಸ್ವೀಕರಿಸುತ್ತ, ಮತ್ತೆ ಅದನ್ನೇ ಬಿಡುತ್ತಾ, ಮತ್ತೆ ಏನನ್ನಾದರೂ ಸ್ವೀಕರಿಸುತ್ತ... ಒಟ್ಟಿನಲ್ಲಿ ಅಸ್ಥಿರತೆಯಿಂದ ಕೂಡಿತ್ತು. ಯಾವಾಗಲೂ ಈ ರೀತಿ ಅಸ್ಥಿರತೆಯಿಂದ ಕೂಡಿದ್ದರೆ ಏನನ್ನೂ ಸಾಧಿಸಲು ಆಗುವದಿಲ್ಲ (ನಗು).

ನಿಜವಾಗಿಯೂ ಅದೊಂದು ಚಿಕ್ಕ ಮಕ್ಕಳು ಬರೆಯುವ ಕಾಪಿ ಪುಸ್ತಕದಂತೆ ಇತ್ತು. ಅಂದರೆ ಮತ್ತೆ ಮತ್ತೆ ಬರೆಯುವ ಮೂಲಕ, ಮತ್ತೂ, ಮತ್ತೂ ಉತ್ತಮವಾದುದನ್ನು ಕಾಣುವ, ಯಾವಾಗಲೂ ಉತ್ತಮವಾದುದನ್ನೇ ಕಾಣುವ ಕಾಪಿ ಪುಸ್ತಕದಂತೆ ಇತ್ತು. ಅದಕ್ಕೆ ಕೊನೆಯೆಂಬುವದೇ ಇಲ್ಲ. ಪ್ರಗತಿ ಹೊಂದುವ ಸಂವೇದನೆಗೆ, ಅದು ಪೂರ್ಣತೆಯ ಎಡೆಗೆ ಸಾಗುವ ಪ್ರಗತಿಗೆ ನಿರಂತರವಾದ ಚಲನೆಯಿರುತ್ತದೆ. ಗತಿ ಇರುತ್ತದೆ.

ನನ್ನ ಅಭಿಪ್ರಾಯದ ಪ್ರಕಾರ ಪರಿಪೂರ್ಣತೆ ಎನ್ನುವದು ಜನಸಾಮಾನ್ಯರು ಯೋಚಿಸುತ್ತಿರುವ "ಏನೋ ಒಂದು" ಎನ್ನುವ ಹಂತಕ್ಕಿಂತ ವಿಶೇಷವಾದ "ಏನೋ ಒಂದು ಅದಾಗಿತ್ತು". ಅದು ವರ್ಣನಾತೀತವಾದದ್ದು. ಆದರೆ ನಾನು ಅದನ್ನು ಎಲ್ಲೆಡೆಯಲ್ಲಿಯೂ, ಎಲ್ಲ ವಸ್ತುಗಳಲ್ಲಿಯೂ ಕಾಣಲು ಇಚ್ಛಿಸುತ್ತೇನೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜುಲೈ 26, 1967**

## ಉದಾತ್ತ ಸನ್ನದ್ಧತೆ ಮತ್ತು ವ್ಯಾಪಕ ಅವಕಾಶ

ಒಮ್ಮೆ ಬಹು ದಿನಗಳ ಹಿಂದೆ, ಶ್ರೀ ಅರವಿಂದರು ತಮ್ಮ ಬಗೆಗೇ ಅವರು ಹೇಳುತ್ತಿದ್ದಾಗ, ಅವರ ಬಾಲ್ಯ ಜೀವನದ ಬಗೆಗೆ ಹೇಳುತ್ತ, ಅವರ ಜನ್ಮದ ಉದ್ದೇಶವನ್ನು ತಿಳಿಸಿದ್ದರು. ಆಗ ನಾನು ಏಕೆ ಈ "ನಾನು" ಅಂದರೆ ವೈಯಕ್ತಿಕ ಜೀವಿಯು ಇಷ್ಟೊಂದು ಮಾಮೂಲಿ ರೀತಿಯಲ್ಲಿದೆ? ನಾನು ಏನನ್ನಾದರೂ ಮಾಡಬಲ್ಲೆ, ನಾನು ಏನನ್ನು ಮಾಡಲು ಪ್ರಯತ್ನಿಸಿದ್ದೇನೆಯೋ ಅದೆಲ್ಲವನ್ನೂ ಮಾಡಿದ್ದೇನೆ. ಆದರೆ ಅದೆಲ್ಲವೂ ಅತ್ಯುತ್ಕೃಷ್ಠ ಪಥದಲ್ಲಿ ಅಲ್ಲ; ಯಾವಾಗಲೂ ಈ ರೀತಿಯಲ್ಲಿ (ಸಾಮಾನ್ಯ ಸ್ತರದಲ್ಲಿ ಇರುತ್ತಿತ್ತು ಎನ್ನುವ ಆಂಗಿಕಾಭಿನಯದಲ್ಲಿ ತೋರಿಸುತ್ತಾ) ಏಕೆ ಇರುತ್ತಿತ್ತು ಎಂದು ಅವರಿಗೊಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಅವರು ನನಗೆ ನೀಡಿದ್ದ ಉತ್ತರ (ಅದನ್ನು ಅವರಿಂದ ದೊರೆತ ದಯೆ ಮತ್ತು ಸಹಾನುಭೂತಿಯಾಗಿತ್ತು), "ಏಕೆಂದರೆ, ಅದು ಉದಾತ್ತವಾದ ಸನ್ನದ್ಧತೆಯನ್ನು ಕೊಡುತ್ತದೆ, ಒಂದು ಉದಾತ್ತ ಸನ್ನದ್ಧತೆ ಮತ್ತು ಒಂದು ಸುವಿಶಾಲ ಅವಕಾಶವನ್ನೂ

ಒದಗಿಸುತ್ತದೆ. ಯಾರೇ ಆಗಲಿ ಒಂದು ವಿಷಯದಲ್ಲಿ ಮಾತ್ರವೇ ಕೇಂದ್ರೀಕರಿಸಿ–ಕೊಂಡಿರುತ್ತಾರೆ, ಇಲ್ಲವೇ ವಿಶೇಷ ಪರಿಣಿತಿಯನ್ನು ಹೊಂದಿರುತ್ತಾರೆ," ಎಂದಿದ್ದರು. ಅದೇ ನಾನು ಹೇಳಿರುವಂತೆ ಅದನ್ನು ಒಂದು ಮಗುವನ್ನು ಸಮಾಧಾನಗೊಳಿಸಲು ಮುದ್ದು ಮಾಡಿದಂತಿತ್ತು. ಆದರೆ ಇದೀಗ ನಾನು ಅರಿತುಕೊಂಡಿರುವದೇನೆಂದರೆ, – ಯಾವುದೇ ವಿಷಯಕ್ಕೂ ಅಪರಿವರ್ತ–ನೀಯವಾಗಿರದಂತೆ (ಸ್ಥಾಯೀ ಅವಸ್ಥೆಯಲ್ಲಿಯೇ) ಉಳಿಯವಂತೆ ಆಗಬಾರದು ಎನ್ನುವದನ್ನು ಮುಖ್ಯವಾಗಿ ಕಂಡುಕೊಂಡಿದ್ದೇನೆ. ಯಾವುದೂ ಸಹಿತ ಅನುಷಂಗಿಕ ಅಂಶ ಸಮೂಹದಿಂದ ನಿಗದಿತಗೊಂಡ ವ್ಯವಸ್ಥೆಯ ಚೌಕಟ್ಟು ಆಗಿರುವದಿಲ್ಲ, ನಿರ್ಣಾಯಕವೂ ಆಗಿರುವದಿಲ್ಲ. ಅಂದರೆ ಇದು ಸಾಕ್ಷಾತ್ಕಾರದ ಹಂತದಲ್ಲಿನ ಪರಿಪೂರ್ಣತೆಯ ಸಂವೇದನೆಯಾಗಿ ಒಂದು ಅಂತಿಮ ಬಿಂದುವನ್ನು ತಲುಪಿ, ಮತ್ತೆ ಮುಂದೆ ಸಾಗದ ಹಾಗೆ ಏಕೀಭವಿಸುವ ರೀತಿಯಲ್ಲಿ ಇರುವದಿಲ್ಲ. ಈ ಅಸಮರ್ಥತೆಯ ಸಂವೇದನೆಯು (ಯಾವುದು ಸಾಧಾರಣವಾದ ಮಧ್ಯಮಾವಸ್ಥೆಯಾಗಿರುವದೋ, ಯಾವುದು ಯಾವುದೇ ವಿನಾಯಿತಿ ಇಲ್ಲದ ಹಾಗೆ ಇರುವದೋ) ಯಾವಾಗಲೂ ನೀನು ಬಯಸುತ್ತಿರುವ (ಆ ಊರ್ಧ್ವದ ಅಭೀಪ್ಸೆಯನ್ನು ಆಂಗಿಕಾಭಿನಯದಲ್ಲಿ ತೋರಿಸುತ್ತಾ) ಮತ್ತೂ ಮತ್ತೂ ಉತ್ಕೃಷ್ಟತೆಯನ್ನು ಬಯಸುವದರಲ್ಲಿಯೇ ನಿನ್ನನ್ನು ಬಿಟ್ಟು ಬಿಡುತ್ತದೆ. ಹೀಗಾಗಿ ಈ ಸನ್ನದ್ಧತೆಯು ಅತ್ಯಾವಶ್ಯವಾಗಿದೆ. ಹೌದು ... ಸನ್ನದ್ಧತೆ.. ಸನ್ನದ್ಧತೆ.. ಅದೂ ಸುವಿಶಾಲವಾಗಿ; ಯಾವುದನ್ನೂ ಉಪಯೋಗಕ್ಕೆ ಬಾರದ್ದು, ಕೆಟ್ಟದ್ದು ಅಥವಾ ಕೀಳುತನದಿಂದ ತುಂಬಿದ್ದು ಎಂದು ತಿರಸ್ಕರಿಸುವದು ಬೇಡ, ಏನನ್ನೂ ತಿರಸ್ಕರಿಸಬೇಡ. ಯಾವುದನ್ನೇ ಆಗಲಿ ಅದೇ ಶ್ರೇಷ್ಠವೆಂದೂ ಸುಂದರವೆಂದೂ ಉದಾತ್ತಗೊಳಿಸಬೇಡ. ಯಾವಾಗಲೂ ಎಲ್ಲ ವಿಷಯಕ್ಕೂ ಮುಕ್ತವಾಗಿರಬೇಕು, ಮುಕ್ತತೆಯೇ ಸದಾ ಇರಲಿ.

ಒಂದು ಉದಾತ್ತ ಮನೋಭಾವವು ಈ ಸನ್ನದ್ಧತೆ, ಧರ್ಮಕ್ಷಮತೆ ಹಾಗೂ ಶರಣಾಗತಿಯಾಗುವದನ್ನು ಹೊಂದಿರಬೇಕಾಗಿದೆ. ಅದೊಂದು, ಏನೇ ಬಂದರೂ – ಅದು ನೈಸರ್ಗಿಕವಾದುದಾಗಿರಲಿ ಅಥವಾ ಸ್ವಾಭಾವಿಕವಾಗಿರುವದಾಗಲೀ ಯಾವುದೇ ಪರಿಶ್ರಮವಿಲ್ಲದೇ ಆ ವ್ಯವಸ್ಥೆಯು ತಂತಾನೆ ತನ್ನಲ್ಲಿ ಅಳವಡಿಸಿಕೊಳ್ಳುವ ಧರ್ಮಕ್ಷಮತೆಯಲ್ಲಿ ಅಭಿವ್ಯಕ್ತಗೊಳಿಸುವಲ್ಲಿಯಾಗಲಿ ಅದನ್ನು ಹಾಗೂ ಅದರ

ಪ್ರಭಾವವನ್ನೂ ಹೃದಯಪೂರ್ವಕವಾಗಿ ಸ್ವೀಕರಿಸುವ ಸ್ಥಿತಿಯಾಗಿರುತ್ತದೆ. ಇದು ಸರ್ವ ವಿಷಯಗಳಿಗೂ ಅನ್ವಯಿಸುತ್ತದೆ, ಬಹುಶಃ ಅಭಿಘಟನ ಕಲೆ(ಪ್ಲಾಸ್ಟಿಕ್ ಆರ್ಟ್)ಯಲ್ಲಾಗಲೀ, ಸಂಗೀತದಲ್ಲಾಗಲೀ, ಬರವಣಿಗೆಯಲ್ಲಾಗಲೀ ಎಲ್ಲೆಡೆಯಲ್ಲಿಯೂ ಇರುತ್ತದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಫೆಬ್ರವರಿ 18, 1967**

**ಇತಿಹಾಸದಲ್ಲಿ ನಿರೂಪಿತ ಅಸಂಗತಗಳು**

ನಾನು ಆಗ ಅಜಮಾಸು ಹತ್ತು–ಹನ್ನೆರಡು ವರ್ಷದ ಬಾಲೆಯಾಗಿದ್ದಾಗ, ಕೆಲವೊಂದು ಅಚ್ಚರಿದಾಯಕವಾದ ಘಟನೆಗಳನ್ನು ಕಂಡಿದ್ದೆ, ಅನುಭವಗಳನ್ನು ಹೊಂದಿದ್ದೆ. ಆಗ ಅವು ಏನು ಎನ್ನುವದು ನನಗೆ ತಿಳಿದಿರಲಿಲ್ಲ. ನನ್ನ ಹತ್ತಿರ ಕೆಲವು ಇತಿಹಾಸದ ಪುಸ್ತಕಗಳು ಇದ್ದವು. ಅದೂ ನಿಮಗೂ ತಿಳಿದಿದೆ. ಅಂದರೆ ಇತಿಹಾಸವನ್ನು ತಿಳಿಯುವ ಸಲುವಾಗಿ ನಿರೂಪಿಸಲ್ಪಟ್ಟ ಹಾಗೂ ಓದಲು ಕೊಟ್ಟ ಪುಸ್ತಕಗಳು ಅವು. ಆಯಿತು ಎಂದುಕೊಂಡು ಅದನ್ನು ಓದಿದ್ದೆ. ಆದರೆ ಇದ್ದಕ್ಕಿದ್ದಂತೆಯೇ ಆ ಪುಸ್ತಕವೂ ಪಾರದರ್ಶಕದಂತೆ ಕಾಣಲು ತೊಡಗಿತ್ತು. ಅಥವಾ ಆ ಮುದ್ರಿತ ಅಕ್ಷರಗಳೆಲ್ಲಾ ಪಾರದರ್ಶಕವಾಗಿ ಕಂಡುಬಂದವು. ಅವುಗಳ ಮೂಲಕವೇ ನಾನು ಇತರೇ ಶಬ್ದಗಳನ್ನೂ, ಧ್ವನಿಗಳನ್ನೂ ಹಾಗೂ ಚಿತ್ರಗಳನ್ನೂ ನೋಡಲು ಸಾಧ್ಯವಾಗಿತ್ತು. ಆಗ ನನಗೆ ಏನಾಗುತ್ತಿತ್ತು ಎನ್ನುವದರ ಬಗೆಗೆ ಯಾವುದೇ ಅಸ್ಪಷ್ಟ ವಿಚಾರವೂ ನನಗಾಗ ಇರಲಿಲ್ಲ! ಅದೊಂದು ನಿಸರ್ಗ ಸಹಜವಾಗಿಯೇ ನನಗೆ ಗೋಚರವಾಗುತ್ತಿತ್ತು. ಹಾಗೂ ಇದೇ ಅನುಭವವವೂ ಎಲ್ಲರಿಗೂ ಆಗುತ್ತದೆ ಎಂದೇ ನನ್ನ ವಿಶ್ವಾಸವೂ ಆಗಿತ್ತು. ನಾನು ಮತ್ತು ನನ್ನ ಸೋದರ ಇಬ್ಬರೂ ಅನ್ಯೋನ್ಯರಾಗಿದ್ದೆವು. ಎಷ್ಟೇ ಅಂದರೂ ನನಗಿಂತ ಅವನು ಕೇವಲ ಹತ್ತು ಹದಿನೆಂಟು ತಿಂಗಳು ದೊಡ್ಡವನಷ್ಟೇ ಆಗಿದ್ದನಲ್ಲವೇ? ಹೀಗಾಗಿ ನಾನು ಅವನಿಗೆ “ಈ ಮುದ್ರಿತ ಇತಿಹಾಸದಲ್ಲಿ ಬರೀ ಅರ್ಥಹೀನ ವಿಷಯವನ್ನೇ ತುಂಬಿದ್ದಾರೆ, ಅದು ಇರಬೇಕಾದ ರೀತಿಯಲ್ಲಿ ಇಲ್ಲವೇ ಇಲ್ಲ; ಅದು ಇದ್ದದ್ದು ಹಾಗೆ ಆಗಿತ್ತು..” ಎಂದಿದ್ದೆ. ಮತ್ತೆ ಹಲವು ಬಾರಿ ನಾನು ನೋಡಿದ ತಿದ್ದುಪಡಿಗಳಲ್ಲಿ, ಓರ್ವ ವ್ಯಕ್ತಿಯ ಬಗೆಗಾಗಲೀ ಅಥವಾ ಮತ್ತೊಬ್ಬರ ಬಗೆಗಾಗಲೀ ಬದಲಾವಣೆ ಹೊಂದಿ, ನಾನು ಕಂಡುಕೊಂಡ ರೀತಿಯಲ್ಲಿಯೇ

ವಿವರವಾಗಿ ಚಿತ್ರಿಸಲ್ಪಟ್ಟಿವೆ. ಮತ್ತೆ (ಇದೀಗ ನಾನು ಕಂಡುಕೊಂಡಂತೆ – ಹೌದು ನನಗೆ ಅಮೇಲಾಮೇಲೆ ಗೊತ್ತಾಯಿತು) ಸ್ಮರಣೆಗಳು ಎನ್ನುವದು ತಿಳಿಯಿತು. ಕೆಲವೊಂದು ಪ್ಯಾರಾಗಳ ವಿಷಯವಾಗಿಯೂ ಸಹಿತ ನಾನು ಈಗಲೂ ಹೇಳುವದೇನೆಂದರೆ – ಇದು ಎಂಥಾ ಮೂರ್ಖತನ! ಅದು ಆ ರೀತಿ ಇರಲೇ ಇಲ್ಲ. ಅದು ನಾನು ಹೇಳಿದ ರೀತಿಯಲ್ಲಿಯೇ ಇತ್ತು. ಅಲ್ಲಿ ನಿರೂಪಿತಗೊಂಡಂತೆ ಘಟನೆ ನಡೆದೇ ಇರಲಿಲ್ಲ. ಅದು ಬೇರೆ ರೀತಿಯಲ್ಲಿಯೇ ಘಟಿಸಿತ್ತು. ಆ ಪುಸ್ತಕವು ತಂತಾನೆ ನನ್ನೆದುರು ತೆರೆದುಕೊಂಡಿದೆ. ನಾನು ಅದನ್ನು ಒಂದು ಮಗುವಿನ ಕುತೂಹಲದಿಂದ ಓದಿದ್ದೇನೆ, ಓದುತ್ತಿದ್ದೇನೆ. ಇದ್ದಕ್ಕಿದ್ದಂತೆಯೇ ಅಲ್ಲಿ ವಿಶೇಷವಾದ ಒಂದು ಘಟನೆ ಘಟಿಸುವ ಮೂಲಕ, ಅದು ನನ್ನೊಳಗೆ ಏನನ್ನೋ ರೂಪಿಸುವದಾಗಿತ್ತು. ಆದಾಗ್ಯೂ ಅದು ಆ ಪುಸ್ತಕದಲ್ಲಿಯೇ ಇತ್ತು ಎಂದು ನಾನು ಈಗಲೂ ಯೋಚಿಸುತ್ತೇನೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜೂನ್ 30, 1962**

**ಸಾಮಾಜಿಕ ಜೀವನದ ಜಾಲ**

– ಅನುವಾದ: ಡಾ॥ ಬಿ.ಆರ್. ಭೀಡ

ನಾವು ಬೇರೆಯಾವುದರೆಡೆಗೋ ಹೋಗುತ್ತಿದ್ದೇವೆ. ಆದರೆ ನಮ್ಮ ನಿಜವಾದ ಗಮ್ಯ ಅದಲ್ಲ ಎಂದು ಯಾರಿಗೆ ಗೊತ್ತಿಲ್ಲವೋ ಅಥವಾ ಯಾರಿಗೆ ಅದನ್ನು ಗೊತ್ತುಮಾಡಿ ಕೊಟ್ಟಿಲ್ಲವೋ ಅಥವಾ ತಿಳಿಹೇಳಿಲ್ಲವೋ ಅಂತಹವರು ಯಾರೆಂಬುದನ್ನು ನಾನು ಬಹು ಚೆನ್ನಾಗಿ ಬಲ್ಲೆ...! ಈ ತೆರನಾದ ವ್ಯರ್ಥತೆ, ನಿರರ್ಥಕತೆ, ಮೂರ್ಖತನ, ಯಾವುದೇ ರೀತಿ ತೀವ್ರತೆ - ಯಾವುದೆಂದರೆ ಜೀವನ, ಸತ್ಯ, ಅಥವಾ ವ್ಯವಸ್ಥೆ, ಅಥವಾ ಆತ್ಮ , ಏನೂ ಅರಿವಿಲ್ಲದ ಸ್ಥಿತಿ... ಓಹ್ ತುಂಬಾ ದುರದೃಷ್ಟಕರ, ಹೇಯಾ.

ಇದೆಲ್ಲಾ ಆಲೋಚಿಸಿದಾಗ ನನಗ ಅನಿಸಿದ್ದು - ಇದು ಹೇಗೆ ಸಾಧ್ಯ?... ಈವರೆಗಿನ ನನ್ನ ಜೀವನದಲ್ಲಿ (ನಾನು ಈಗ ಬಾಹ್ಯ ಸಂಗತಿಗಳಿಂದ ಹೊರತಾಗಿದ್ದೇನೆ, ನಾನು ಬಾಹ್ಯ ಕೆಲಸಗಳನ್ನು ಮಾಡುತ್ತೇನೆ ಆದರೂ ತುಂಬಾ ಬಾಹ್ಯದಿಂದಲೇ...) ನನಗೆ ಆಗಲೇ ಅರಿವಿತ್ತು. ನಾನು ಇದೆನ್ನೆಲ್ಲಾ ಮಾಡುವಾಗ ತುಸು ಮಟ್ಟಿಗೆ ಈ ಸಾಮಾಜಿಕ ಬದುಕಿನ ಬಲೆಯಲ್ಲಿ ಇದ್ದೆನೆ. ಅದು ಹೇಗಿದೆ

ಅಂದರೆ ಅದು ಅಷ್ಟೇನೂ ಬಿಗಿ ಆಗಿಲ್ಲ, ತುಸು ನಿರಾಳವಾಗಿಯೇ ಇದೆ, ಆಗಬೇಕೆಂದರು ನೀವು ಆಚೆಗೆ ಹೋಗಿ ಸ್ವತಂತ್ರವಾಗಿ ಉಸಿರಾಡಿ ಬರಬಹುದು. ಆದರೆ ಇಲ್ಲಿ ನಾನು ಜನರಿಂದ ಹಾಗೂ ಶ್ರೀ ಅರವಿಂದರು ಹೇಳಿದಂತೆ ತಿಳಿದುಕೊಂಡಿದ್ದೇನೆಂದರೆ ಇದು ಸರ್ವಥಾ ಅಸಹನೀಯ (ಜಪಾನನಲ್ಲಿ ಕೂಡ ಇದು ಹಾಗೆ ಇದೆ. ತುಂಬಾ ಅಸಹನೀಯವಾಗಿದೆ) ಮತ್ತೆ ಮೇಲೆ ಈ ರೀತಿ ಹೇಳಬೇಕೆಂದರೆ ನೀವು ಇದನ್ನು ಬಹಳೆಂದರೆ ನಾಶಪಡಿಸಬಹುದು. ಅಲ್ಲಿರುವಾಗ ನೀವು ತುಸು ಗಾಳಿಯನ್ನು ಉಸಿರಾಡಬಹುದು ಆದರೆ ಅದು ತುಂಬಾ ಸಾಪೇಕ್ಷ, ಅದು ನಿಮ್ಮ ಕೈಯಲ್ಲಿಲ್ಲಾ. ಮತ್ತು ಈ ದಿನ ಮುಂಜಾನೆ ನನಗೆ ಆಶ್ಚರ್ಯವಾಯಿತು... (ಅನೇಕ ವರ್ಷಗಳ ಕಾಲ ನಾನು ಹೀಗೆಯೇ ಬದುಕಿದ್ದೇನೆ... ಹಲವು ವರ್ಷಗಳ ಕಾಲ..) ನನಗೆ ಅತೀವವಾಗಿ ಆಶ್ಚರ್ಯವಾಯಿತು! ಯಾವುದನ್ನು ಪೂರ್ಣವಾಗಿ ವಿರೋಧಿಸದೆ ನಾನು ಈ ರೀತಿ ಹೇಗೆ ಬದುಕಿದ್ದೆ? ನಾನು ಹಾಗೇ ಗಮನಿಸುತ್ತಿದ್ದೆ? ಮೇಲಕ್ಕೆ ನೋಡಿದೆ, ಇದರ ಮೇಲ್ಗಡೆಗೆ ನೋಡಿದೆ, ಇದರ ಮೇಲೆ... ನನಗೆ ಅತಿ ಮಧುರವಾದ ಚಂದದ ಬೆಳಕು ಕಂಡಿತು... ಆ ಬೆಳಕು ಎಷ್ಟು ಮಧುರವಾಗಿತ್ತೆಂದರೆ, ಎಷ್ಟರ ಮಟ್ಟಿಗೆ ನಿಜಪ್ರೇಮದಿಂದ ತುಂಬಿತ್ತೆಂದರೆ, ನಿಜವಾದ ಕರುಣೆ, ತುಂಬ ಹಿತಕರ, ಅತಿ ಹಿತಕರ.. ಸಮಾಧಾನ ಅನಂತ ಮಧುರತೆ ಸಮಾಧಾನ, ಬೆಳಕು, ಸೌಂದರ್ಯ, ಅನಂತ ಸಹನೆ, ಹಿಂದಿನದು ಇಲ್ಲ, ಮುಂದಿನದು ಇಲ್ಲಾ, ಮತ್ತೇನು ಇಲ್ಲಾ... ಎಷ್ಟು ಅದ್ಭುತವಾಗಿತ್ತು! ನನಗೆ ಅದು ಪೂರ್ಣ ಅನುಭವ ನೀಡಿತ್ತು. ನನಗೆ ನಾನೇ ಹೇಳಿಕೊಂಡೆ 'ಅದೇ ನನ್ನನ್ನು ಜೀವಿಸುವಂತೆ ಮಾಡಿದ್ದು, ಅದು ಇಲ್ಲದೇ ಬದುಕಲು ಸಾಧ್ಯವಿಲ್ಲ'. ಓಹ್.. ಸಾಧ್ಯವೇ ಆಗುತ್ತಿರಲಿಲ್ಲ - ಅದು ಇಲ್ಲದೇ ನಾನು ಮೂರು ದಿನ ಕೂಡ ಇರುತ್ತಿರಲಿಲ್ಲವೇನೋ! ಅದು ಇದೆ, ಅದು ಸದಾ ಕಾಲ ಇರುತ್ತದೆ. 'ತನ್ನ ಪ್ರಕಟಣೆಯ ಗಳಿಗೆಗಾಗಿ ಕಾಯುತ್ತಿರುತ್ತದೆ... ಅದನ್ನು ನಾವು ಒಳಗೆ ಬಿಟ್ಟುಕೊಳ್ಳಬೇಕು ಅಷ್ಟೇ.

ಈಗಲೂ, ಯಾವಾಗಲೂ, ಅದುವೇ – ತತ್! ಇಷ್ಟೇ ನಾನು ಇಲ್ಲಿ ಇದ್ದೇನೆ (ಶ್ರೀಮಾತೆ ತಮ್ಮ ತಲೆಯ ಮೇಲೆ ಕೈ ಮಾಡಿ ತೋರಿಸುತ್ತಾರೆ, ಇಲ್ಲಿ ಇದ್ದೇನೆ ಅದು ಬೇರೆ ವಿಷಯ.)

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ನವೆಂಬರ್ 15, 1960**

## ಜನ್ಮಜಾತ ಕೆಲ ಸಾಮರ್ಥ್ಯಗಳು

ನಾನು ತುಂಬ ಚಿಕ್ಕವಳಿದ್ದಾಗ, ನನಗಾಗ ಏನೂ ತಿಳಿಯುತ್ತಿರಲಿಲ್ಲ, ಒಂದೆರಡು ಬಾರಿ ಮೂರ್ಛೆ ಹೋಗಿದ್ದೆ; ಹೌದು ಅದು ಮೂರ್ಛೆಯೇ, ಆದರೆ ನಾನು ಆಗ ಸಂಪೂರ್ಣ ಪ್ರಜ್ಞಾಹೀನಳಾಗಿರಲಿಲ್ಲ. – ಪ್ರಜ್ಞೆ ಇತ್ತು. – ತುಸು ಅಭ್ಯಾಸವಾದ ಮೇಲೆ (ಮೂರ್ಛೆ ಹೋಗುವ ಅಭ್ಯಾಸ ಅಲ್ಲ), ಗೂಢವಿದ್ಯೆಯ ಅಭ್ಯಾಸವಾದ ಮೇಲೆ, ಮೂರ್ಛೆ ಹೋದರೂ ನನ್ನನ್ನು ನಾನು ನೋಡಬಲ್ಲವಳಾಗಿದ್ದೆ. ಅದಕ್ಕಿಂತ ಮೊದಲು ನನ್ನನ್ನು ನಾನು ನೋಡಿದ್ದೆ, ಆದರೆ ಅದೇನೆಂಬುದು ನನಗಾಗ ಗೊತ್ತಿರಲಿಲ್ಲ. ಅದರ ತಲೆ ಬುಡ ಕೂಡ ನನಗೆ ತಿಳಿಯುತ್ತಿರಲಿಲ್ಲ. ಆದರೆ ನನ್ನನ್ನು ನಾನು ಕಾಣುತ್ತಿದ್ದೆ. ಆನಂತರ ನಾನು ಯಾವಾಗ ಮೂರ್ಛೆ ಹೋದರೂ ನಾನು ಮಾಡುತ್ತಿದ್ದ ಮೊದಲ ಕೆಲಸವೆಂದರೆ ನನ್ನ ಶರೀರವು ಅಸ್ತವ್ಯಸ್ತ ರೀತಿಯಲ್ಲಿ ಬಿದ್ದಿರುವುದನ್ನು ನೋಡುವುದು. ಆಗ ನಾನು ತಕ್ಷಣ ಅತಿ ರಭಸವಾಗಿ ಅದರೊಳಗೆ ಪ್ರವೇಶಿಸಿಬಿಡುತ್ತಿದ್ದೆ. ಅಲ್ಲಿಗೆ ಎಲ್ಲವೂ ಮುಗಿದು ಹೋಗಿಬಿಡುವುದು. ಬಹುಶಃ ನಾನು ಕೆಲ ವಿಶೇಷ ಸಾಮರ್ಥ್ಯಗಳ ಜೊತೆಗೇ ಹುಟ್ಟಿದ್ದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಏಪ್ರಿಲ್ 20, 1963**

## ಶೋಕಿಸುತ್ತಾ ಕೂಡುವುದಲ್ಲ ಬದಲಾಗಿ ಸರಿಪಡಿಸುವುದು

ನಿಮಗೆ ಗೊತ್ತಿರುವ ಹಾಗೆ, ನಾನು ತೋರಿಕೆಗೆ ಎಲ್ಲ ಮಕ್ಕಳಂತೆ ಸಾಮಾನ್ಯಳಾಗಿಯೇ ಇದ್ದೆ, ಆದರೆ ನನ್ನನ್ನು ಸಂಭಾಳಿಸುವುದು ಕಷ್ಟಕರವಾಗಿತ್ತು, ಕಷ್ಟಕರ ಅಂದರೆ, ನನಗೆ ಊಟದಲ್ಲಿ ಆಸಕ್ತಿ ಇರಲಿಲ್ಲ, ಸಾಮಾನ್ಯ ಆಟೋಟಗಳಲ್ಲಿ ಆಸಕ್ತಿ ಇರಲಿಲ್ಲ, ಕುರುಕಲು ತಿಂಡಿಗಳಿಗಾಗಿ ಸ್ನೇಹಿತರ ಮನೆಗಳಿಗೆ ಹೋಗುವುದು ಇಷ್ಟವಾಗುತ್ತಿರಲಿಲ್ಲ, ಏಕೆಂದರೆ ಕೇಕ್ ತಿನ್ನುವುದು ನನಗೆ ಒಂಚೂರು ಇಷ್ಟವಾಗುತ್ತಿರಲಿಲ್ಲ. ಊಟದ ನಂತರ ಕುಡಿಯುವ ಸಿಹಿ ಪಾನೀಯ ಕೊಡದಿದ್ದರಂತೂ ನನಗೆ ಅತಿ ಹಾಯೆನಿಸುತ್ತಿತ್ತು. ಹಾಗೆಯೇ, ನಾನು ಕಲಿಯಲು ತುಂಬಾ ಹಠ ಮಾಡುತ್ತಿದ್ದೆ. ನಾನು ನಿರಾಕರಿಸುತ್ತಿದ್ದೆ. ನನಗೆ ಸ್ನಾನ ಮಾಡಿಸುವುದೂ ಕಠಿಣ, ನಾನು ಓರ್ವ ಇಂಗ್ಲಿಷ ಆಯಾಳ ಆರೈಕೆಯಲ್ಲಿದ್ದೆ. ಅಂದರೆ ತಣ್ಣೀರಿನ ಸ್ನಾನ – ನನ್ನ ಅಣ್ಣ ಅದನ್ನು ಬಲವಂತವಾಗಿ ತುಸು ಸಮಸ್ಯೆಯೊಂದಿಗೆ ತೆಗೆದುಕೊಳ್ಳುತ್ತಿದ್ದ. ಆನಂತರ, ಅದು ನನಗೆ ಒಳ್ಳೆಯದಲ್ಲ

ಎಂದು ಗೊತ್ತಾಯಿತು. (ವೈದ್ಯರು ಹಾಗೆ ಹೇಳಿದರು) ಆದರೆ ಅದು ಬಹಳ ದಿವಸಗಳ ನಂತರ. ನಿಮಗೀಗ ವಿಷಯ ಸ್ಪಷ್ಟವಾಗಿರಬೇಕು.

ಆದರೆ, ನನ್ನ ಸಂಬಂಧಿಕರೊಂದಿಗೆ, ಸಹ ಆಟಗಾರರೊಂದಿಗೆ, ಅಥವಾ ಸ್ನೇಹಿತರೊಂದಿಗೆ ತುಸು ತಕರಾರು ಆದಾಗಲೆಲ್ಲ ನನಗೆ ಬಹಳ ಹಿಂಸೆ ಆಗುವುದು, ಬಹಳ ಕೆಟ್ಟದಾಗಿ ಯೋಚನೆ ಬರುವುವು. ಎಲ್ಲಾ ರೀತಿಯ ಕೆಟ್ಟ ಆಲೋಚನೆ ಬಂದುಬಿಡುವುದು. (ನಾನು ಅತಿ ಸೂಕ್ಷ್ಮ ಮತ್ತು ಸಂವೇದನಾ–ಶೀಲಳಾದವಳು, ನಾನು ಅತಿ ಸಹಜವಾಗಿ, ದೈನಂದಿನ ಜೀವನದಲ್ಲಿನ ಎಲ್ಲಾ ಸನ್ನಿವೇಶಗಳೂ ನಿರಾಕರಿಸಿದ ಸೌಂದರ್ಯ ಮತ್ತು ಸಾಮರಸ್ಯಗಳ ಆದರ್ಶಗಳ ಬಗ್ಗೆ ನಾನು ಅತಿ ಸೂಕ್ಷ್ಮ ಸಂವೇದನಾಶೀಲತೆಯನ್ನು ಸಹಜವಾಗಿ ಬೆಳಸಿಕೊಂಡು ಬಂದಿದ್ದೆ) ... ಅಂತೆಯೇ ನನಗೆ ದುಃಖವಾದಾಗೆಲೆಲ್ಲಾ ನಾನು ನನ್ನ ತಂದೆ ತಾಯಿಗಳಿಗೆ ತಿಳಿಯದಂತೆ ಜಾಗ್ರತೆ ವಹಿಸುತ್ತಿದ್ದೆ. ಏಕೆಂದರೆ ನನ್ನ ತಂದೆ ಯಾವುದಕ್ಕೂ ಹ್ಞಾಹ್ಞೂ ಅನ್ನುತ್ತಿರಲಿಲ್ಲ. ನನ್ನ ತಾಯಿ ಬಯ್ಯುತ್ತಿದ್ದಳು – ಯಾವಾಗಲೂ ಆಕೆ ಮಾಡುತ್ತಿದ್ದ ಮೊದಲ ಕೆಲಸ ಅದುವೇ. ಅಂತೆಯೇ ನಾನು ನನ್ನ ಕೋಣೆಗೆ ಹೋಗಿ ಅಲ್ಲಿ ನನ್ನ ಸಣ್ಣ ಆರಾಮ ಖುರ್ಚಿಯಲ್ಲಿ ಕುಳಿತು ನನ್ನದೇ ಆದ ರೀತಿಯಲ್ಲಿ ಮನನ ಮಾಡಲು, ಅರ್ಥೈಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೆ. ಆಮೇಲೆ, ನನಗೆ ನೆನಪಿರುವಂತೆ ಕೆಲ ನಿರರ್ಥಕ ಪ್ರಯತ್ನಗಳ ನಂತರ ನನಗೆ ನಾನೇ ಹೇಳಿಕೊಳ್ಳುತ್ತಾ ಎದ್ದುಬಿಡುತ್ತಿದ್ದೆ. “ಇಲ್ಲಿ ನೋಡು, ನಿನಗೆ ದುಃಖವಾಗಲು ಕಾರಣ, ಇಂಥವರು ನಿನಗೆ ನಿಜವಾಗಿಯೂ ತುಂಬ ಕೆಟ್ಟದಾಗಿ ಮಾತನಾಡಿದರು ಅಂತ ತಾನೇ.. ಆದರೆ ಅದಕ್ಕಾಗಿ ನೀನೇಕೆ ಅಳುತ್ತಾ ಕೂಡಬೇಕು? ನಿನಗೆ ಅಷ್ಟೇಕೆ ದುಃಖವಾಗಬೇಕು? ಕೆಟ್ಟವನಾಗಿರುವ ವ್ಯಕ್ತಿ ಅವನು ತಾನೇ.. ನಿಜವಾಗಿ ಅವನು ಅಳುತ್ತಾ ಕೂಡಬೇಕು. ನೀನೇನೂ ಅವನಿಗೆ ಕೆಟ್ಟದ್ದನ್ನು ಮಾಡಿಲ್ಲವಲ್ಲ.. ನೀನೇನೂ ಅವನಿಗೆ ಕೆಟ್ಟದಾಗಿ ಬೈಯಲಿಲ್ಲವಲ್ಲ? ಅವನ ಜೊತೆ ಇಲ್ಲ ಅವಳ ಜೊತೆ ಜಗಳವಾಡಿದೆಯಾ? ಇಲ್ಲ ನೀನು ಏನೂ ಮಾಡಿಲ್ಲ, ಹೌದು ಕೆಟ್ಟನಿಸಬೇಕಾದರೆ ನೀನು ಏನಾದರೂ ಕೆಟ್ಟದ್ದನ್ನು ಮಾಡಿದ್ದರೆ ಮಾತ್ರ, ಆದರೆ.. “ಅಲ್ಲಿಗೆ ಆ ವಿಷಯ ಮುಕ್ತಾಯವಾಗಿ ಬಿಡುತ್ತಿತ್ತು. ನಾನು ಅಳು ನಿಲ್ಲಿಸಿಬಿಡುತ್ತಿದ್ದೆ. ಒಂದು ಸಣ್ಣ ಆಂತರಿಕ ಭಾವನಾ ಚಲನೆ, ಅಥವಾ “ನೀನೇನೂ ತಪ್ಪು ಮಾಡಿಲ್ಲ” ಎಂದು “ಏನೋ ಒಂದು” ಸಮಾಧಾನ ಮೂಡುತ್ತಿತ್ತು. ಅಲ್ಲಿಗೆ, ದುಃಖ ಮಾಯವಾಗಿ ಬಿಡುತ್ತಿತ್ತು.

ಈ "ಏನೋ ಒಂದು" ಎನ್ನುವುದಕ್ಕೆ ಇನ್ನೊಂದು ಪಾರ್ಶ್ವವೂ ಇತ್ತು: ಅದು ನನ್ನನ್ನು ಸದಾ ಗಮನಿಸುತ್ತಲೇ ಇರುತ್ತಿತ್ತು. ನಾನು ಒಂದು ಶಬ್ದ ಹೇಳಿದರೂ ಸಾಕು ಅಥವಾ ಒಂದು ಸನ್ನೆ ಮಾಡಿದರೂ ಸಾಕು, ನನ್ನ ಅಣ್ಣನನ್ನು ಗೇಲಿ ಮಾಡಿದರೂ ಕೂಡ, ಅಥವಾ ಇನ್ನೇನೇ ಮಾಡಿದರೂ, ಒಂದೇ ಒಂದು ಸಣ್ಣ ಕೆಟ್ಟ ಆಲೋಚನೆ ಮಾಡಿದರೂ ಸಾಕು, ಅದು (ಶ್ರೀಮಾತೆಯವರ ಧ್ವನಿ ತುಂಬ ಗಂಭೀರವಾಗುವುದು) "ನೋಡು, ತುಂಬ ಎಚ್ಚರದಿಂದಿರಬೇಕು "ಮೊದಮೊದಲು ನಾನು ಆ ಬಗ್ಗೆ ತುಸು ಗೊಣಗುತ್ತಿದ್ದೆ. ಆದರೆ ಬರುಬರುತ್ತ ನನಗದು ಒಂದು ಪಾಠ ಕಲಿಸಿತು. "ಶೋಕಿಸುತ್ತಾ ಕೊಡಬೇಡ. – ಸರಿಪಡಿಸು. "ಮತ್ತು ಎಲ್ಲವೂ ಸರಿಹೋದ ಮೇಲೆ. – ಎಲ್ಲವೂ ಆಮೇಲೆ ಯಾವಾಗಲೂ ಸರಿಹೋಗುತ್ತಲೇ ಇತ್ತು – ನಾನು ಹಾಗೆಯೇ ಮಾಡುತ್ತಿದ್ದೆ. ಅದೆಲ್ಲ. ಐದರಿಂದ ಏಳು ವಯಸ್ಸಿನ ಮಗುವಿನ ಬುದ್ಧಿಯ ಮಟ್ಟದ ಮಾತು.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜುಲೈ 25, 1962**

## ವಿಶ್ವಾತ್ಮಕವಾದ ಒಂದು ನಾದ

ಅದೊಂದು ನಾದ. ನನ್ನ ಮಟ್ಟಿಗೆ ತುಂಬ ಅಸಾಧಾರಣ ಶಕ್ತಿಯುಳ್ಳದ್ದು – ಅಸಾಧಾರಣವೂ ಹೌದು, ವಿಶ್ವಾತ್ಮಕವೂ ಹೌದು (ಅದು ಅತಿ ಮುಖ್ಯವಾದ ವಿಷಯ): ಅದು ನೀವು ಯಾವ ಭಾಷೆ ಮಾತನಾಡುತ್ತೀರಿ ಎಂಬುದರ ಮೇಲೆ ಸಂಬಂಧಪಟ್ಟಿಲ್ಲ, ನೀವು ಯಾವ ರೀತಿಯ ಶಿಕ್ಷಣ ಪಡೆದಿರುವಿರೋ ಅದರ ಮೇಲೆಯೂ – ನಿಮ್ಮಲ್ಲಿ ಅವಲಂಬಿಸಿಲ್ಲ, ನೀವೆಂಥ ವಾತಾವರಣದಲ್ಲಿರುವಿರೋ ಅದರ ಮೇಲೆ ಕೂಡ ಅವಲಂಬಿಸಿಲ್ಲ. ಆ ನಾದ, ನನಗೆ ಅದರ ಬಗ್ಗೆ ಏನೂ ಗೊತ್ತಿರಲಿಲ್ಲವಾದರೂ ನಾನು ಅದನ್ನು ಚಿಕ್ಕವಳಿದ್ದಾಗಿನಿಂದಲೇ ಉಚ್ಚರಿಸುತ್ತಿದ್ದೆ. (ಫ್ರೆಂಚ್ ಭಾಷೆಯಲ್ಲಿ ನಾವು "ಓಹ್" ಎಂದು ಹೇಗೆ ಅನ್ನುತ್ತೇವೆಂಬುದನ್ನು ನೀನು ಬಲ್ಲೆ; ಏನೂ ಗೊತ್ತಿರದಿದ್ದರೂ ನಾನು "ಓಂ" ಎಂದೇ ಹೇಳುತ್ತಿದ್ದೆ.) ಮತ್ತು ನಾನು ಆ ನಾದದ ಜೊತೆಗೆ ಎಲ್ಲಾ ರೀತಿಯ ಪ್ರಯೋಗಗಳನ್ನು ಮಾಡಿ ನೋಡಿದೆ – ಅದು ನಿಜವಾಗಿಯೂ ಅದ್ಭುತ, ಅತ್ಯದ್ಭುತ! ಅದು ನಿಜವಾಗಿಯೂ ಕಲ್ಪನಾತೀತ.

ಆ ರೀತಿ, ಇಂತಹದರ ಸುತ್ತ ನಿಮ್ಮ ಅಭೀಪ್ಸೆಗೆ ಅನುರೂಪವಾಗಿರುವ ಅಥವಾ ಸಂಬಂಧಪಟ್ಟ ಏನನ್ನಾದರೂ ಕಟ್ಟಲು ಮನಸ್ಸು ಮಾಡಿದರೆ, – ನಿಮ್ಮಲ್ಲಿ ನಿಮ್ಮ ಆತ್ಮದ ಸ್ಥಿತಿಯನ್ನು ಜಾಗೃತಗೊಳಿಸಬಲ್ಲ ವಿಶಿಷ್ಟ ನಾದ ಅಥವಾ ಶಬ್ದವನ್ನು ಪ್ರಯೋಗಿಸಲು ಬಯಸಿದರೆ – ಅದು ತುಂಬಾ ಒಳ್ಳೆಯದು.

ಯಾವುದೆಲ್ಲಾ ಸಾಂಪ್ರದಾಯಿಕವಾಗಿದೆಯೋ ಅದರ ಲಾಭ ಕೂಡ ಸಾಂಪ್ರದಾಯಿಕವಾಗಿ ಇದ್ದೇ ಇರುತ್ತದೆ, ಅದನ್ನು ಹೇಳಬೇಕಾಗಿಯೇ ಇಲ್ಲ, ಆದರೆ ಅದು ಅವಶ್ಯವಾಗಿ ತುಂಬಾ ಸೀಮಿತವಾಗಿರುತ್ತದೆ – ವೈಯಕ್ತಿಕವಾಗಿ ನನಗಂತೂ ಅದು ತುಂಬ, ಎಲ್ಲ ರಸವನ್ನು ಹಿಂಡಿ ತೆಗೆದ ಮೇಲೆ ಒಣಗಿ ಹೋಗಿರುವಂಥ ಅಥವಾ ಬಾಡಿಹೋಗಿರುವಂಥ ಕ್ಷೀಣವಾದ ಅನುಭವ ನೀಡುತ್ತದೆ. ಆದರೆ ಇಷ್ಟೇ, ನಿಮ್ಮೊಳಗೆ ಇರುವ ಆತ್ಮ–ಸ್ಥಿತಿಗೆ ಆ ಶಬ್ದ ಅಥವಾ ನಾದಗಲು ಸಹಜವಾಗಿ ತಾವಾಗಿಯೇ ಅನುರೂಪವಾಗಿದ್ದರೆ ಮಾತ್ರ ಹಾಗಾಗಲಿಕ್ಕಿಲ್ಲ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಸಪ್ಟೆಂಬರ್ 23, 1964**

ನಾನು ಆಗ ಫ್ರಾನ್ಸ್‌ನಲ್ಲಿದ್ದೆ, ಬಹುಶಃ ನನಗನಿಸುವಂತೆ ಅರವತ್ತು ವರ್ಷಗಳ ಹಿಂದೆ.

ಓರ್ವ ಫ್ರೆಂಚ್ ಮನುಷ್ಯ, ಆತ ಹಿಮಾಲಯದಿಂದ ಹಿಂತಿರುಗಿ ಬಂದವನು, ಅಲ್ಲೇ ಆತ ಕೆಲಕಾಲ ಇದ್ದು ಬಂದಾತ, ಆತ ಉಪನ್ಯಾಸ ನೀಡುತ್ತಿದ್ದ, ನಾನು ಆಗಾಗ ಕೇಳುತ್ತಿದ್ದೆ, ಅವನೊಂದು ಸಲ ಹೇಳಿದ, ಹಿಮಾಲಯದ ತೀರ ಆಳದಲ್ಲಿದ್ದಾಗ ಅವನೊಬ್ಬ ಸನ್ಯಾಸಿಯನ್ನು ನೋಡಿದ, ಅವನ ಬಗ್ಗೆ ಇವನಿಗೆ ಏನೂ ಗೊತ್ತಿರಲಿಲ್ಲ. ಆ ಸನ್ಯಾಸಿ ಇವನನ್ನು ಕಾಣಲು ಬಂದ, ಕೇವಲ "ಓ...ಮ್" ಎಂದಷ್ಟೇ ಹೇಳಿದ. ಅಷ್ಟಕ್ಕೇ ಇವನಲ್ಲಿ ಬದಲಾವಣೆ ಬಂದಿತು, ಇವನು ಸಂಪೂರ್ಣ ಬದಲಾಗಿಬಿಟ್ಟ.

ಹಾಗೆಯೇ, ಅವನು "ಓ...ಮ್" ಎಂದು ಹೇಳಿದಾಗ ನನ್ನಲ್ಲಿ ಕೂಡ ಅಂಥ ಬದಲಾವಣೆಯಾದ ಅನುಭವ ನನಗಾಯಿತು... ಸಾಕ್ಷಾತ್ ಪರಮಾತ್ಮನೇ ಓ...ಮ್ ಮೂಲಕ ಬರುತ್ತಿರುವ ಹಾಗೆ ಅನಿಸುತ್ತಿತ್ತು.

**– ಶ್ರೀಮಾತೆ: ಅವಳ ಅಲೌಕಿಕ ಸ್ಪರ್ಶ: 24**

## ವಾತಾವರಣದ ಬಗ್ಗೆ ಸಂವೇದನಾಶೀಲತೆ

ಚಿಕ್ಕಂದಿನಿಂದಲೂ ನಾನು ವಾತಾವರಣದ ಬಗ್ಗೆ ತುಂಬಾ ಸಂವೇದನಾ–ಶೀಲಳಾಗಿದ್ದೇನೆ: “ಗಾಳಿ” ಎಂದು ನಾನು ಕರೆಯಬಹುದೇನೊ! ಒಂದೊಂದಕ್ಕೂ ಅದರದೇ ಆದ ವಿಶಿಷ್ಟ ರುಚಿ, ವಿಶಿಷ್ಟ ಬಣ್ಣ, ವಿಶಿಷ್ಟ ಗುಣಧರ್ಮ ಇರುತ್ತದೆ, ನಾನು ಅವುಗಳನ್ನು ಸುಲಭವಾಗಿ ನಿಖರವಾಗಿ ಗುರುತಿಸಿ, ಕೆಲಸಲವಂತೂ “ಓಹ್, ಇದು ಇಂತಹದ್ದೇ...” (ನಾನಾಗ ತುಂಬಾ ಚಿಕ್ಕವಳಿದ್ದೆ) “ಇದು ಇಂತಹ ಪ್ರದೇಶದ ಗಾಳಿ, ಇದು ಆ ಪ್ರದೇಶದಿಂದ ಬಂದ ಗಾಳಿ” ಎಂದು ಹೇಳುತ್ತಿದ್ದೆ. ನಾನು ಪರಿಶುದ್ಧವಾದ ಗಾಳಿಯ ಬಗೆಗಂತೂ ತುಂಬಾ ಸಂವೇದನಾಶೀಲಳಾಗಿದ್ದೆ. ಅಂದರೆ, ಶವಗಳು ಕೊಳೆತು ನಾರುವ ವಾಸನೆ, ತುಂಬ ಕಿಕ್ಕಿರಿದ ಜನಸಂದಣಿಯಿಂದ ಬರುವ ಗಾಳಿ ಇವುಗಳ ಬಗ್ಗೆ ನಾನು ತುಂಬಾ ಸಂವೇದನಾಶೀಲಳಾಗಿದ್ದೆ. ಈ ಬಗ್ಗೆ ಅಂತೂ ನಾನು ತುಂಬಾ ತೀಕ್ಷ್ಣಳಾಗಿದ್ದೆ. ಉದಾಹರಣೆಗೆ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋದರೆ ನಾನು ಕಾಯಿಲೆಯಿಂದ ಸಂಪೂರ್ಣ ಗುಣಮುಖಳಾಗಿಬಿಡುತ್ತಿದ್ದೆ, ವಾತಾವರಣದ ಬದಲಾವಣೆಯಿಂದ! ನಾನು ಆಮೇಲೆ ಥಿಯಾನ್‌ರನ್ನು ಭೇಟಿಯಾದ ಮೇಲೆ ನನಗೆ ಇದರ ಅರಿವಾಯಿತು, ಅದೊಂದು ಅಭ್ಯಾಸದ ವಿಷಯವೇ ಆಗಿಬಿಟ್ಟಿತು. ಈಗಲೂ ಸಹ ಅದು ಅಭ್ಯಾಸದ ವಸ್ತುವಾಗಿಯೇ ಇದೆ. ಬಹುಶಃ ಕೆಲವು ದಿನಗಳ ಹಿಂದೆ, (ಕಾಲಕ್ಕೆ ಮಹತ್ವ ಇಲ್ಲವೆಂದು ನಾನು ಹೇಳುವದಿಲ್ಲ,) ಆದರೆ ಬಹಳ ದಿನಗಳ ಹಿಂದೆ ಏನೂ ಅಲ್ಲ, “ವಾತಾವರಣದಲ್ಲಿ ಏನೋ ಹೊಸ ಬದಲಾವಣೆ ಅನಿಸುತ್ತಿದೆ” ಎಂದು ನಾನು ಹೇಳಿದೆ. ಅದು ತುಂಬಾ ಅಸಮಾಧಾನಕರವಾಗಿತ್ತು, ಬಹಳ ವಿಪತ್ಕಾರಕವಾಗಿತ್ತು. ನನಗೆ (ನಾನು ಯಾರೆದುರಿಗೂ ಏನೂ ಹೇಳಲಿಲ್ಲ, ಅದು ಸಹಜ ಕೂಡ) ಅದು ತುಂಬಾ ಸೂಕ್ಷ್ಮವಾದ, ಭೌತಿಕವಾಗಿ ಅಲ್ಲ, ಆದರೆ ಪ್ರಾಣಿಕ ತರಂಗಗಳನ್ನು ಭೌತಿಕ ತರಂಗಗಳಿಂದ ಬೇರ್ಪಡಿಸುವ ಸಾಮರ್ಥ್ಯವುಳ್ಳದ್ದು ಎಂದು ಅನಿಸಿತು. – ಅಂದರೆ ಅತ್ಯಂತ ವಿಷಕಾರಕವಾಗಿತ್ತು.

ನಾನು ತಕ್ಷಣವೇ ಕೆಲಸ ಆರಂಭಿಸಿದೆ. (ಕೆಲ ಗಂಟೆಗಳವರೆಗೆ ಮಾಡಬೇಕಾಗಿ ಬಂದಿತು) ಇಡೀ ರಾತ್ರಿ ಅದನ್ನು ಎದುರಿಸಿ ಕೆಲಸ ಮಾಡಿದೆ. ಯಾವ ಉನ್ನತ ತರಂಗಗಳು ಅದನ್ನೆದುರಿಸಬಲ್ಲವು ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸಿದೆ. ಆ ವಾತಾವರಣವನ್ನು ಪರಿಶುದ್ಧಗೊಳಿಸುವಲ್ಲಿ ಯಶಸ್ವಿಯಾದ. ಆ ನೆನಪು ಮಾತ್ರ ನನ್ನಲ್ಲಿ ನಿಖರವಾಗಿ ಉಳಿದಿದೆ.

**ಕೃಪೆಯ ಆಶೀರ್ವಾದಗಳು, ಪುಟ 73**

## ಪ್ರಜ್ಞಾಯುಕ್ತ ನಿದ್ರೆ

ನಮಗೆಲ್ಲಾ ಗೊತ್ತಿರುವಂತೆ ಅಚೇತನದ ಆಳಗಳಲ್ಲಿಯೂ ಕೂಡ ದೈವೀ ಪ್ರಜ್ಞೆ ಇದೆ. ಆದರೆ ಹಾಗಿದ್ದರೂ ಸಹ ನಿದ್ರೆಯು ಪ್ರಜ್ಞಾಚ್ಯುತಿಯಂತೆ ತೋರುತ್ತದೆ. ಅನೇಕ ಜನರಂತೂ ಸಂಪೂರ್ಣವಾಗಿ ಅಚೇತನದಲ್ಲಿ ಕಳೆದೇ ಹೋಗಿ ಬಿಡುತ್ತಾರೆ, ನಿದ್ರೆಯಿಂದ ಎಚ್ಚರವಾದಾಗ ಮೊದಲಿಗಿಂತ ತುಂಬ ಜಡವಾಗಿರುತ್ತಾರೆ. ಆದರೆ ಏನು ಕಾರಣವೋ ಗೊತ್ತಿಲ್ಲ, ಬಹುಶಃ ಕೆಲಸದ ಒತ್ತಡದ ಕಾರಣವಿರಬಹುದು, ನನಗೆ ತಿಳಿದ ಮಟ್ಟಿಗೆ ನಾನೆಂದೂ ಸಂಪೂರ್ಣ ಪ್ರಜ್ಞೆ ಇಲ್ಲದ ನಿದ್ರೆಯನ್ನು ಮಾಡಿಯೇ ಇಲ್ಲ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಆಗಸ್ಟ್ 5, 1961**

ಅದು (ಪ್ರಜ್ಞಾಯುಕ್ತ ನಿದ್ರೆ ಮಾಡುವುದರಲ್ಲಿ) ರಾತ್ರಿಗಳನ್ನು ಕಳೆಯಲು ಇರುವ ತುಂಬ ಸಂತಸದ ಉಪಾಯ. ನೀವೊಂದು ಕಥೆ ಆರಂಭ ಮಾಡುತ್ತೀರಿ, ಆಮೇಲೆ, ನಿಮಗೆ ಎಚ್ಚರವಾದಾಗ, ಅದಕ್ಕೆ ಮಂಗಳ ಹಾಡಿ ಬಿಡುತ್ತೀರಿ, ಪುನಃ ನಿಮ್ಮ ಶರೀರದೊಳಗೆ ಬಂದು ಬಿಡುತ್ತೀರಿ. ಮರುದಿನ, ಅಥವಾ ಮರುರಾತ್ರಿ, ಅದೇ ಕಥೆಯನ್ನು ಹೇಳಿ ವಿವರಿಸುತ್ತೀರಿ, ಹಳೆಯ ಪುಟ ತೆಗೆದು ಹಳೆಯದನ್ನೇ ಪುನರಾವರ್ತಿಸುತ್ತೀರಿ. – ಎಲ್ಲವನ್ನೂ ಚೆನ್ನಾಗಿ ವ್ಯವಸ್ಥಿತವಾಗಿ ಹೊಂದಿಸುತ್ತೀರಿ. – ಎಲ್ಲವನ್ನೂ ಬಹು ಸುಂದರವಾಗಿ ಹೊಂದಿಸಬೇಕು ಯಾವಾಗ ನೀವು ಎಚ್ಚರಾಗುವ ಸಮಯ ಬರುತ್ತದೋ, ಆಗ ಪುನಃ ಹಿಂತಿರುಗಿ ಬರುವವರೆಗೆ ಶಾಂತವಾಗಿ ಕಾಯಿರಿ ಎಂದು ಹೇಳುವಿರಿ. ನಿಮ್ಮ ಶರೀರದೊಳಗೆ ನೀವು ಬಂದು ಬಿಡುತ್ತೀರಿ. ಇದೇ ರೀತಿ ನೀವು ಪ್ರತಿದಿನ ಸಂಜೆ ಮಾಡಿ ನೋಡಿ, ನೀವು ತುಂಬಾ ಚೆಂದವಾದ, ಅದ್ಭುತವಾದ ಕಾಲ್ಪನಿಕ ಕಥೆ ಬರೆಯಬಲ್ಲಿರಿ, ನೀವು ಎಚ್ಚರಾದ ಮೇಲೆ ಆ ಕಥೆಯನ್ನೆಲ್ಲ ಚೆನ್ನಾಗಿ ನೆನಪಿಟ್ಟುಕೊಳ್ಳಬಲ್ಲಿರಾದರೆ ಮಾತ್ರ!.. ನಾನು ಚಿಕ್ಕವಳಿದ್ದಾಗ ಇದನ್ನು "ತನಗೇ ತಾನೇ" ಕಥೆ ಹೇಳಿಕೊಳ್ಳುವಿಕೆ ತಲೆಯಲ್ಲಿಯೇ ನಡೆಯುವಂಥದು. ಅತಿ ತಾಜಾತನದಿಂದ ಕೂಡಿದ ಪ್ರದೇಶಕ್ಕೆ ಹೋಗಿ.. ಅಲ್ಲಿ ಅದ್ಭುತವಾದ ಕಥೆ ಹೆಣೆಯುತ್ತ ಕೂಡುವುದು. ಈರೀತಿ ನಿಮಗೆ ನೀವೇ ಕಥೆ ಹೇಳಿಕೊಳ್ಳುವುದು ಹೇಗೆಂಬುದನ್ನು ತಿಳಿದುಕೊಂಡಿರಾದರೆ, ಅದು ನಿಜವಾಗಿಯೂ ತುಂಬ ಸಮರಸ ಪೂರ್ಣ, ತುಂಬ ಶಕ್ತಿಯುತ ಹಾಗೂ ತುಂಬ

ಸುಸಂಘಟನಾತ್ಮಕ, ಆ ಕಥೆ ನಿಮ್ಮ ಜೀವನದಲ್ಲಿ ಸಾಕಾರಗೊಳ್ಳುವುದು – ನೀವದನ್ನು ಹೇಗೆ ರಚಿಸಿರುವಿರೋ ಸರಿಯಾಗಿ ಅದೇ ತೆರನಾಗಿ ಆಗಲಿಕ್ಕಿಲ್ಲ, ಆದರೆ ಭೌತಿಕವಾಗಿ ತುಸು ಬದಲಾವಣೆಯೊಂದಿಗೆ ಹಾಗೆಯೇ ಆಗುವುದು. ಹಾಗಾಗಲು ಒಂದು ವರ್ಷ ಹಿಡಿಯಬಹುದು, ಅಥವಾ ಕೆಲವರ್ಷಗಳೇ ಹಿಡಿಯಬಹುದು, ಆದರೆ ನಿಮ್ಮ ಕಥೆ ನಿಮ್ಮ ಬದುಕನ್ನು ಖಂಡಿತವಾಗಿಯೂ ರೂಪಿಸುವುದು.

**– ಶ್ರೀಮಾತೆ: ಅವಳ ಅಲೌಕಿಕ ಸ್ಪರ್ಶ 10**

## ಸಹಜ ಸಮಾಧಿ

ಇನ್ನೊಂದು ವಿಷಯ (ನಗುತ್ತಾ): ಕೆಲಸ ಮಾಡುತ್ತಿರುವಾಗ ಮಧ್ಯದಲ್ಲಿಯೇ ಅಥವಾ ಒಂದು ವಾಕ್ಯವನ್ನು ಹೇಳುತ್ತಿರುವಾಗ ನಡುವೆಯೇ ಅಥವಾ ಏನೇ ಮಾಡುತ್ತಿರಲಿ ಆದರೆ ನಡುವೆಯೇ, ಅಕಸ್ಮಾತ್ತಾಗಿ ಥಟ್ಟನೆ ಸಮಾಧಿ ಸ್ಥಿತಿಗೆ ಜಾರಿಬಿಡುತ್ತಿದ್ದೆ – ಯಾರಿಗೂ ಅದೇನೆಂದು ಗೊತ್ತಾಗುತ್ತಿರಲಿಲ್ಲ! ನಾನು ನಿದ್ರೆ ಹೋಗಿದ್ದೇನೆ ಎಂದೇ ಅವರೆಲ್ಲ ಭಾವಿಸುತ್ತಿದ್ದರು. ನಾನು ಮಾತ್ರ ಪ್ರಜ್ಞೆಯಿಂದಲೇ ಇರುತ್ತಿದ್ದೆ, ಒಂದು ಕೈ ಮೇಲೆ ಇರುತ್ತಿತ್ತು, ಅನೇಕ ಸಲ ಶಬ್ದದ ಮಧ್ಯದಲ್ಲಿಯೇ – ಮತ್ತು ಓಹ್! ಯಾರೂ ಇಲ್ಲ, ಯಾರಿಗೂ ಏನೂ ತಿಳಿಯುತ್ತಿರಲಿಲ್ಲ. ಬಾಹ್ಯದಲ್ಲಿ ಯಾರೂ ಇಲ್ಲ ಆದರೆ ಅಂತರಂಗದಲ್ಲಿ ಮಾತ್ರ ತೀವ್ರವಾದ, ಚೆಂದದ ಅನುಭವ. ನಾನು ದೊಡ್ಡವಳಾದ ಮೇಲೆಯೂ, ತಾರುಣ್ಯದಲ್ಲಿ ಕೂಡ ನನಗೆ ಅಂಥ ಅನುಭವ ಆಗಿದೆ.

ನನಗೆ ನೆನಪಿಗಿದೆ, ಒಂದು ಸಲ (ನಾನಾಗ ಬಹುಶಃ ಹತ್ತು ಹನ್ನೆರಡು ವರ್ಷದವಳಿರಬಹುದು) ನಮ್ಮ ತಂದೆತಾಯಿಯ ಮನೆಯಲ್ಲಿ ಮಧ್ಯಾಹ್ನದ ಮೇಜವಾನಿಗಾಗಿ ಸುಮಾರು ಒಂದು ಡಜನ್ ಜನ ಬಂದಿದ್ದರು, ಎಲ್ಲರೂ ರವಿವಾರದ ವಿಶೇಷ ಉಡುಗೆ ಧರಿಸಿ ಬಂದಿದ್ದರು – ಎಲ್ಲರೂ ಒಂದೇ ಕುಟುಂಬದ ಜನ, ಭೋಜನ ಕೂಟವಿತ್ತಲ್ಲ, ಅಂತೆಯೇ ನಿರ್ದಿಷ್ಟ ಪ್ರೊಟೋಕಾಲ್ ಅನುಸರಿಸಬೇಕಾಗಿತ್ತು. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಪ್ರತಿಯೊಬ್ಬನೂ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕಾಗಿತ್ತು. ನಾನು ಟೇಬಲ್‌ನ ಬಂದು ದಂಡೆಯಲ್ಲಿ ಕುಳಿತಿದ್ದೆ. ನನ್ನ ಮಗ್ಗುಲಲ್ಲಿ ನಮ್ಮ ಸೋದರ ಸಂಬಂಧಿ ಕುಳಿತಿದ್ದ. ಅವನ

ಮುಂದೆ ಕೆಲಕಾಲ ಲೌರೆಯ (ಫ್ರಾನ್ಸ್‌ನಲ್ಲಿರುವ ಪ್ರಸಿದ್ಧ ವಸ್ತು ಸಂಗ್ರಹಾಲಯ) ನಿರ್ದೇಶಕನಾಗಿದ್ದ, (ಅವನಲ್ಲಿ ಒಂದು ಕಲಾತ್ಮಕ ಕೌಶಲ್ಯವಿತ್ತು, ಅವನು ಸಮರ್ಥನಾದ ತರುಣ) ಎಲ್ಲರೂ ಸೇರಿದ್ದೆವಲ್ಲ, ನನಗೆ ನೆನಪಿದೆ, ಆ ವ್ಯಕ್ತಿಯ ವಾತಾವರಣದಲ್ಲಿ ಏನೋ ಒಂದು ವಿಶಿಷ್ಟವಾಗಿರುವುದನ್ನು ನಾನು ಗಮನಿಸುತ್ತಿದ್ದೆ. (ನನ್ನಲ್ಲಿ ಆಗಲೇ ಎಲ್ಲ ವಿಶಿಷ್ಟ ಶಕ್ತಿಗಳಿದ್ದರೂ ನನಗೆ ಗೂಢವಿದ್ಯೆಯ ಬಗ್ಗೆ ತಿಳುವಳಿಕೆ ಇರಲಿಲ್ಲ; ಯಾರಾದರೂ ನನ್ನನ್ನು ಕುರಿತು ಈ ಕಾಂತಿ ವಲಯಗಳ ಬಗ್ಗೆ ಮಾತನಾಡಿದರೇನೋ ...ಗೊತ್ತಿಲ್ಲ). ಆ ವ್ಯಕ್ತಿಯ ವಾತಾವರಣದಲ್ಲಿ ಏನೋ ಒಂದಯ ಬಗೆಯ ಸಂವೇದನೆ ಇರುವುದನ್ನು ನಾನು ಗಮನಿಸುತ್ತಿದ್ದೆ. ಆಗ.. ಇನ್ನೇನು ನಾನು ಫೋರ್ಕ್ ಬಾಯಿಯಲ್ಲಿ ಇಟ್ಟುಕೊಳ್ಳುವವಳು, ತಗೆದುಬಿಟ್ಟೆ! ಓಹ್.. ಏನೆಲ್ಲ ಬೈಗುಳ ತಿನ್ನಬೇಕಾಗಿ ಬಂತು! ಸರಿಯಾಗಿ ನಡೆದುಕೊಳ್ಳಲು ಬರದಿದ್ದರೆ ಟೇಬಲ್‌ಗೇ ಬರಬಾರದಾಗಿತ್ತೆಂದು ಬೈಸಿಕೊಂಡೆ. (ಶ್ರೀಮಾತೆ ಬಿದ್ದು ಬಿದ್ದು ನಗುತ್ತಾರೆ).

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಅಗಸ್ಟ 5, 1961**

## ದೇಹದ ಆಚೆಗೆ ಹೋಗುವುದು

... ಒಂದು ಸಲ, ಬಹು ದೀರ್ಘ ಕಾಲದವರೆಗೆ, ಅನೇಕ ತಿಂಗಳುಗಳವರೆಗೆ ನಾನು ಹಾಸಿಗೆ ಹಿಡಿದು ಮಲಗಿದೆ, ನನಗೆ ತುಂಬ ಬೇಸರವಾಗುತ್ತಿತ್ತು. – ನಾನೊಂದು ಪರೀಕ್ಷೆ ಮಾಡಿ ನೋಡೋಣವೆಂದುಕೊಂಡೆ. ನಾನು ಒಂದು ಕೋಣೆಯಲ್ಲಿದ್ದೆ, ಅದರ ಆ ದಂಡೆಗೆ ಹೊಂದಿಕೊಂಡಂತೆ ಇನ್ನೊಂದು ಸಣ್ಣ ಕೋಣೆ ಇತ್ತು, ಆ ಸಣ್ಣ ಕೋಣೆಯ ಆ ಬದಿಗೆ ಒಂದು ಸಣ್ಣ ಸೇತುವೆಯಂಥ ಕಟ್ಟಡವಿತ್ತು, ಅದರ ಮಧ್ಯದಲ್ಲಿ ಒಂದು ಸುಂದರವಾದ ದೊಡ್ಡ ಸ್ಟುಡಿಯೋ ಇತ್ತು. ಆ ಸೇತುವೆಯು ಅಲ್ಲಿರುವ ಸ್ಟುಡಿಯೋಕ್ಕೆ ಕರೆದೊಯ್ಯುವ ಮೆಟ್ಟಿಲು ಹಾಗೆ ಇತ್ತು.

ಕೋಣೆಯಲ್ಲಿ ಕುಳಿತು ಕುಳಿತು ಬೇಜಾರಾಗಿತ್ತಲ್ಲ, ಆದ್ದರಿಂದ ನಾನು ಆ ಸ್ಟುಡಿಯೋದಲ್ಲಿ ಏನು ನಡೆಯುತ್ತಿದೆ ನೋಡಿ ಬರೋಣವೆಂದುಕೊಂಡೆ. ಶಾಂತವಾಗಿ ಕುಳಿತುಕೊಳ್ಳುವುದು, ಕಣ್ಣುಗಳನ್ನು ಮುಚ್ಚಿಕೊಂಡು ನಿಧಾನವಾಗಿ ನನ್ನ ಪ್ರಜ್ಞೆಯನ್ನು ಅಲ್ಲಿಗೆ ಕಳಿಸುವ ಪ್ರಯತ್ನ ಮಾಡತೊಡಗಿದೆ, ಸ್ವಲ್ಪ ಸ್ವಲ್ಪ, ಸ್ವಲ್ಪ ಸ್ವಲ್ಪ. ಪ್ರತಿ ದಿನ – ನಾನು ಅದಕ್ಕಾಗಿ ನಿರ್ದಿಷ್ಟ ಸಮಯ ನಿಗದಿಪಡಿಸಿಕೊಂಡು ತಪ್ಪದೇ ಅಭ್ಯಾಸ ಮಾಡುತ್ತಬಂದೆ.

ಮೊದಲು ನೀವು ನಿಮ್ಮ ಕಲ್ಪನಾ ಶಕ್ತಿಯನ್ನು ಉಪಯೋಗಿಸುವಿರಿ, ಆ ಮೇಲೆ ಅದು ವಾಸ್ತವ ಸಂಗತಿಯಾಗಿ ಬಿಡುತ್ತದೆ. ಕೆಲ ಸಮಯದ ನಂತರ, ನನ್ನ ದೃಷ್ಟಿ ಭೌತಿಕವಾಗಿಯೇ ಚಲಿಸುತ್ತಿರುವ ಗಟ್ಟಿ ಅನುಭವ ಆಗತೊಡಗಿತು. ನಾನು ಅದನ್ನು ಅನುಸರಿಸಿ ನಡೆದೆ, ಆಗ ಅದುವರೆಗೂ ನನಗೆ ಗೊತ್ತೇ ಇರದ ಮೆಟ್ಟಿಲುಗಳ ಕೆಳಗಿನ ವಸ್ತುಗಳನ್ನು ನೋಡಲು ಸಾಧ್ಯವಾಗತೊಡಗಿತು. ಆನಂತರ ನಾನು ಖಚಿತಪಡಿಸಿಕೊಳ್ಳುತ್ತಿದ್ದೆ, ಸಂಜೆಗೆ ನಾನು "ಅದು ಹಾಗಿತ್ತೇ? ಇದು ಹೀಗಿತ್ತೇ?" ಎಂದು ಕೇಳುತ್ತಿದ್ದೆ. ಆದರೆ ಇಂಥ ಪ್ರತಿಯೊಂದಕ್ಕೂ ನೀವು ತಿಂಗಳಾನುಗಟ್ಟಲೆ ಆತೀವ ಸಹನೆಯಿಂದ ಅಭ್ಯಾಸ ಮಾಡಬೇಕಾಗುವುದು, ಒಂದು ರೀತಿಯ ಹಠದಿಂದ ಮಾಡಬೇಕಾಗುವುದು. ಒಂದೊಂದಾಗಿ ಎಲ್ಲ ಇಂದ್ರಿಯಗಳನ್ನು, ಶ್ರವಣ, ದರ್ಶನ ಹೀಗೆ ತೆಗೆದುಕೊಳ್ಳುತ್ತ ರುಚಿ, ವಾಸನೆ ಮತ್ತು ಸ್ಪರ್ಶಗಲ ಅತಿ ಸೂಕ್ಷ್ಮ ವಾಸ್ತವಿಕತೆಗಳನ್ನು ಕೂಡ ಗ್ರಹಿಸಬಹುದು.

**– ಶ್ರೀಮಾತೆ: ಅವಳ ಅಲೌಕಿಕ ಸ್ಪರ್ಶ: 15**

**ಅಪಘಾತಗಳು ಸಂಭವಿಸಲಾರವು**

ನಾನು ಆಗ ಒಂಬತ್ತು ಅಥವಾ ಹತ್ತು ವರ್ಷದವಳಿರಬೇಕು. ಫೌಂಟನ್‌ಬ್ಲೂ ಕಾಡಿನಲ್ಲಿ ಕೆಲ ಸ್ನೇಹಿತೆಯರ ಜೊತೆ ಓಡುತ್ತಿದ್ದೆ (ಈ ಕಥೆಯನ್ನು ಈ ಮೊದಲೇ ನಾನು ಹೇಳಿದ್ದೇನೆ) ಆ ಕಾಡು ತುಂಬ ದಟ್ಟವಾದುದು, ನೀವು ತುಂಬ ದೂರದವರೆಗೆ ನೋಡಲಾರಿರಿ. ಅಲ್ಲಿ ನಾವು ಓಡುತ್ತಿದ್ದೆವು, ವೇಗವನ್ನು ಹೆಚ್ಚಿಸುತ್ತ ಓಡುತ್ತಿದ್ದೆವು. ರಸ್ತೆಯ ಕೊನೆಯಂಚಿನಲ್ಲಿದ್ದ ಭಯಾನಕ ತೆಗ್ಗಿನ ಸಮೀಪ ಒಮ್ಮೆ ನಾನು ಬಂದುಬಿಟ್ಟಿದ್ದೆ. ನಾವಿದ್ದ ಜಾಗ ರಸ್ತೆಯಿಂದ ಸುಮಾರು ಹತ್ತು ಅಡಿ ಮೇಲಿತ್ತು. (ಒಂದು ಮಹಡಿಗಿಂತ ಹೆಚ್ಚು ಎತ್ತರ) ರಸ್ತೆಯ ಮೇಲೆಲ್ಲ ಬೆಣಚು ಕಲ್ಲು ಹೊಸದಾಗಿ ಹೊದಿಸಿದ್ದರು. ಅಂಥದರಲ್ಲಿ ನಾವು ಓಡುತ್ತಿದ್ದೇವೆ. ನಾನು ಎಲ್ಲರಿಗಿಂತ ಮುಂದಿದ್ದೆ, ಉಳಿದವರು ನನ್ನ ಹಿಂದೆ ಇದ್ದರು. ನಾನೆಷ್ಟು ವೇಗವಾಗಿ ಓಡುತ್ತಿದ್ದೆನೆಂದರೆ ಒಮ್ಮೆಲೇ ಥಟ್ಟನೇ ನಿಲ್ಲುವುದು ಸಾಧ್ಯವೇ ಇರಲಿಲ್ಲ. ಓಹ್..! ನಾನು ಗಾಳಿಯಲ್ಲಿ ತೇಲುತ್ತ ಹೋದಂತೆನಿಸಿತು. ನಾನು ಹತ್ತು ವರ್ಷದವಳಿದ್ದೆ, ಬಹಳೆಂದರೆ ಹನ್ನೆರಡು ಇದ್ದಿರಬಹುದು, ಯಾವುದೇ ರೀತಿಯ ಪವಾಡವಲ್ಲ, ಅದ್ಭುತವಲ್ಲ, ಊಹ್ಞೂ, ಏನೂ ಅಲ್ಲ – ನಾನು ಗಾಳಿಯಲ್ಲಿ ತೂರಿದಂತೆ

ಹಾರಿಬಿಟ್ಟೆ. ನನಗೆ, ಯಾವುದೋ ಶಕ್ತಿ ಕಾಪಾಡುತ್ತಿದೆ, ನನ್ನನ್ನು ಬೀಳದಂತೆ ಎತ್ತಿ ಹಿಡಿದಿದೆ ಎಂಬ ಅನುಭವ, ನಾನು ಅಕ್ಷರಶಃ ನೆಲದ ಮೇಲೆ ನಿಧಾನವಾಗಿ ಇಳಿದೆ, ರಸ್ತೆಯ ಉದ್ದಕ್ಕೂ ಹಾಸಿದ್ದ ಕಲ್ಲುಗಳ ಮೇಲೆ ನಿಂತೆ. ನಾನು ಎದ್ದು ನಿಂತುಕೊಂಡೆ (ನನಗದು ತುಂಬ ಸಹಜವೆನಿಸಿತು); ಯಾವುದೇ ಸಣ್ಣ ತರಚು ಗಾಯ ಕೂಡ ಇಲ್ಲ, ಧೂಳು ಕೂಡ ಮೆತ್ತಿಕೊಂಡಿಲ್ಲ, ಏನೂ ಇಲ್ಲ, ಎಲ್ಲವೂ ಸರಿಯಾಗೇ ಇತ್ತು. ನಾನು ನಿಧಾನವಾಗಿ ಕೆಳಗೆ ಬಿದ್ದೆ, ಎಲ್ಲರೂ ನನ್ನನ್ನು ನೋಡಲು ಓಡಿ ಬಂದರು. “ ಓಹ್, ನನಗೇನೂ ಆಗಿಲ್ಲ!” ಎಂದು ನಾನು ಹೇಳಿದೆ, ”ನಾನು ಆರಾಮಾಗಿದ್ದೇನೆ”– ನಾನು ಆ ವಿಷಯವನ್ನು ಅಲ್ಲಿಗೆ ಮರೆತೂಬಿಟ್ಟೆ. ಆದರೆ ಅದರ ಪ್ರಭಾವ ಮಾತ್ರ ಉಳಿಯಿತು. ನನ್ನನ್ನು ಎತ್ತಿಕೊಂಡೊಯ್ಯುತ್ತಿರುವ ಅನುಭವ (ನಿಧಾನವಾಗಿ ಬೀಳುವ, ಸೂರ್ಯನ ಕಿರಣಗಳು ಮರೆಯಾದ ನಂತರ ಉದುರುವ ಎಲೆಗಳಂತೆ): ನಾನು ಅಷ್ಟು ಸಾವಕಾಶವಾಗಿ ಬಿದ್ದೆ. ಇದಕ್ಕೆ ಭೌತಿಕ ಸಾಕ್ಷಿ ಕೂಡ ಅಲ್ಲಿತ್ತು, ಅದೇನೂ ಭ್ರಮೆಯಾಗಿರಲಿಲ್ಲ, ನನಗೆ ಒಂಚೂರೂ ತರಚು ಗಾಯ ಕೂಡಾಗಿರಲಿಲ್ಲ, ಇಡೀ ರಸ್ತೆಯನ್ನೆಲ್ಲ ಬೆಣಚು ಕಲ್ಲುಗಳಿಂದ ಹೊದಿಸಿದ್ದರು. (ಫ್ರಾನ್ಸನ ಕೆಂಪುಕಲ್ಲು ಚಪ್ಪಡಿಗಳನ್ನು ನೀವು ನೋಡಿದ್ದೀರಿ ತಾನೇ?) ನನಗೇನೂ ಆಗಿರಲಿಲ್ಲ, ಧೂಳು ಕೂಡ ಮೆತ್ತಿಕೊಂಡಿರಲಿಲ್ಲ.

ಆಗ ಆತ್ಮ ತುಂಬ ಜಾಗೃತವಾಗಿದ್ದಿತು, ತನ್ನೆಲ್ಲ ಶಕ್ತಿಯಿಂದ ಅದು ಈ ಜಗತ್ತಿನ ವ್ಯಾವಹಾರಿಕ ತಾರ್ಕಿಕ ಪರಿಣಾಮವನ್ನು ತಡೆಯಿತು – ಅಂತೆಯೇ ನನಗಾಗ ಅದು ಅತಿ ಸಹಜ ಸಂಗತಿ ಎಂಬಂತೆ ಭಾಸವಾಯಿತು. ನನಗಾಗ ಅನಿಸಿದ್ದೇನೆಂದರೆ, “ನನಗೆ ಯಾವುದೇ ರೀತಿಯ ಅಪಘಾತಗಳು ಸಂಭವಿಸಲಾರವು.”

ಆದರೆ ನಾನು ಆ ರೀತಿ ಒಗೆಯಲ್ಪಟ್ಟಿದ್ದೆನಲ್ಲ! ಅದರ ನೆನಪು, ಆ ಘಟನೆಯ ಸಂವೇದನೆಯ ನೆನಪು ನನ್ನಲ್ಲಿ ಆನಂತರವೂ ಬಹುಕಾಲ ಉಳಿಯಿತು. ಅದು ಹೇಗೆಂದರೆ ಒಂದು ಎಲೆ ಮೇಲಿನಿಂದ ಕೆಳಗೆ ಬೀಳುತ್ತಿರುವಂತೆ ಕೈ ಸನ್ನೆ ಮಾಡಿ ತೋರಿಸುತ್ತಾರೆ. ಸುಲಭವಾಗಿ, ಸರಳವಾಗಿ ನನ್ನನ್ನು ನೆಲದ ಮೇಲೆ ನಿಲ್ಲಿಸಿತು.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಮಾರ್ಚ್ 9, 1963**

**ರೆಕ್ಕೆಗಳ ಮೂಲಕ ಹಾರಿಹೋದಂತೆ..**

ಇನ್ನೊಂದು ಘಟನೆ (ಅದರಷ್ಟು ತೀವ್ರತರವಲ್ಲ), ಒಂದು ಸಲ ಒಂದು ಕೋಣೆಯಲ್ಲಿ, ಇಷ್ಟೇ ದೊಡ್ಡದಾದ, ವಿಶಾಲವಾದದ್ದು ಅಗಲವಾದದ್ದು, ನಮ್ಮ ಮನೆಯಲ್ಲಿದ್ದ ಅಲಕಾಂರಿಕ ಹಜಾರ ಅದು. ಕೆಲ ಸ್ನೇಹಿತರೆಲ್ಲ, ಸಣ್ಣವರು, ಬಂದಿದ್ದರು, ನಾವು ಆಟವಾಡುತ್ತಿದ್ದೆವು. "ನಿಮಗೆಲ್ಲ ನೃತ್ಯ ಮಾಡುವುದು ಹೇಗೆಂಬುದನ್ನು ಹೇಳಿಕೊಡುತ್ತೇನೆ" ಎಂದು ನಾನು ಅವರಿಗೆ ಹೇಳಿದೆ. ಒಂದು ಮೂಲೆಯಲ್ಲಿ ಹೋಗಿ ನಿಂತೆ, ಅಂದರೆ ಆ ಮೂಲೆಯಿಂದ ಇನ್ನೊಂದು ಎದುರು ಮೂಲೆಯವರೆಗೆ ಆದಷ್ಟು ಹೆಚ್ಚಿನ ಸ್ಥಳ ಸಿಕ್ಕುತ್ತದೆ. ನಾನು ಹೇಳಿದೆ "ಮಧ್ಯದಲ್ಲಿ ಒಂದೇ ಒಂದು ಹೆಜ್ಜೆ" ನಾನು ಹಾಗೆ ಮಾಡಿದೆ. (ನಾನು ಜಿಗಿಯುತ್ತಿದ್ದೇನೆಂದು ನನಗೆ ಅನ್ನಿಸಲೇ ಇಲ್ಲ, ಅದು ನೃತ್ಯ ಮಾಡುವ ರೀತಿಯಲ್ಲೇ, ಎಲ್ಲರೂ ನೃತ್ಯ ಮಾಡುವಾಗ ಮಾಡುತ್ತಾರಲ್ಲ ಹಾಗೆ) ನಾನು ಕಾಲು ಬೆರಳುಗಳ ತುದಿಯ ಮೇಲೆ ಲ್ಯಾಂಡ್ ಆಗಿ ಪುನಃ ಮತ್ತೊಂದು ಮೂಲೆಗೆ ಹಾರಿ ನಿಂತುಕೊಂಡೆ. ನೀವು ಹಾಗೆ ಮಾಡಲಾರಿರಿ, ಚಾಂಪಿಯನ್‌ಗಳು ಕೂಡ ಹಾಗೆ ಮಾಡುವುದು ಸಾಧ್ಯವಿಲ್ಲ. ಆ ಜಿಗಿತದ ಉದ್ದ ಎಲ್ಲ ರಿಕಾರ್ಡಗಳನ್ನೂ ಮೀರಿದ್ದು, ಏಕೆಂದರೆ ಆನಂತರ ನಾನು ಇಲ್ಲಿ, ಅಂದರೆ ಆಶ್ರಮದಲ್ಲಿ ದೈಹಿಕ ವ್ಯಾಯಾಮಗಳ ಅಭ್ಯಾಸವನ್ನು ಆರಂಭಮಾಡಿದ ಮೇಲೆ, ಅತ್ಯಂತ ಹೆಚ್ಚಿನ ಉದ್ದದ ಜಿಗಿತ ಯಾವುದೆಂದು ಕೇಳಿದೆ – ನನ್ನದು ಎಲ್ಲದಕ್ಕಿಂತ ಹೆಚ್ಚಿನದಾಗಿತ್ತು! ಅಲ್ಲದೇ ಅವರೆಲ್ಲ ಓಡಿಬರುತ್ತಿದ್ದರು, ನಿಮಗೆ ಗೊತ್ತಿದೆಯಲ್ಲ, ಓಡಿಬಂದು ಆ ಮೇಲೆ ಹಾರುತ್ತಾರೆ. ಆದರೆ ನಾನು ಹಾಗೆ ಓಡಿರಲಿಲ್ಲ, ಒಂದು ಮೂಲೆಯಲ್ಲಿ ನಿಂತಿದ್ದೆ, ಅಲ್ಲಿಂದಲೇ ಜಿಗಿದೆ. ಮೇಲೆ ಹಾರಿದೆ ("ಹಾಪ್" ಎಂದು ನನಗೆ ನಾನೇ ಹೇಳಿಕೊಂಡೆ, ಅದೂ ಯಾರಿಗೂ ಕೇಳದಂತೆ ನಿಶ್ಶಬ್ದವಾಗಿ), ಅಷ್ಟೇ – ಸುಯ್ಞ್ ! ನನ್ನ ಕಾಲ್ಬೆರಳುಗಳ ತುದಿಯ ಮೇಲೆ ಲ್ಯಾಂಡ ಆಗಿ, ಅವುಗಳನ್ನೇ ನೆಲಕ್ಕೆ ಒತ್ತಿ ಪುನಃ ಹಾರಿ ಮತ್ತೊಂದು ಮೂಲೆಗೆ ಹಾರಿ ನಿಂತ – ಸ್ಪಷ್ಟವಾಗಿ ಹೇಳಬೇಕೆಂದರೆ ನನ್ನನ್ನು ಹೊತ್ತು ಒಯ್ದಂತೆಯೇ!

ಇದೆಲ್ಲ ನಡೆದದ್ದು ಸುಮಾರು (ಹದಿಮೂರು ಅಥವಾ ಹದಿನಾಲ್ಕರ ವಯಸ್ಸಿನ ಮೊದಲು ಎಂಟರಿಂದ ಹದಿಮೂರು ಅಥವಾ ಹದಿನಾಲ್ಕು). ಇಂಥವೇ ಅನೇಕ ಜರುಗಿವೆ, ಎಲ್ಲವೂ ನನಗೆ ತುಂಬ ಸಹಜ, ಸಾಮಾನ್ಯವೆಂಬುವಂತೆಯೇ

ತೋರಿದೆ. ನಾನು ಏನಾದರೂ ಅದ್ಭುತವನ್ನು, ಪವಾಡ ಮಾಡುತ್ತಿದ್ದೇನೆ ಎಂದು ನನಗೆ ಯಾವತ್ತಿಗೊ ಅನಿಸಿಲ್ಲ. ಎಲ್ಲವೂ ಅತಿ ಸಹಜ, ನೈಸರ್ಗಿಕ.

ಇನ್ನೊಂದು ಘಟನೆ ನೆನಪಿದೆ, ಒಂದು ಸಲ, ಬೊಯಿಸ್ ದಿ ಬೋಲ್ಗ್ನ್ ಉದ್ಯಾನದ ಹುಲ್ಲಿನ ದಾರಿಗುಂಟ ಕಬ್ಬಿಣದ ರಿಂಗುಗಳನ್ನು ಹಾಕಿದ್ದರು, ನಾನು ಅವುಗಳ ಮೇಲೆ ನಡೆಯುತ್ತಿದೆ. ನಾನು ಅದೇ ಚಾಲೆಂಜ ನನ್ನ ಅಣ್ಣನಿಗೆ ಹಾಕಿದೆ (ನಮ್ಮ ನಡುವೆ ಹದಿನಾರು ತಿಂಗಳು ಅಂತರ, ಅವನು ದೊಡ್ಡವನು – ಅವನು ತುಂಬ ಸಾತ್ವಿಕ ನಡವಳಿಕೆಯವನು ಕೂಡ) ನಾನು ಅವನಿಗೆ ಕೇಳಿದೆ "ನೀನಿವುಗಳ ಮೇಲೆ ನಡೆಯಬಲ್ಲೆಯಾ?" ಅವನು "ನನ್ನನ್ನು ಬಿಟ್ಟುಬಿಡಮ್ಮ" ಎಂದು ಹೇಳಿಬಿಟ್ಟ, "ಅದೇನೂ ಅಷ್ಟು ಆಸಕ್ತಿಕರವಲ್ಲ", ನಾನು ಹೇಳಿದ "ಹಾಗಾದರೆ ಸುಮ್ಮನೆ ನೋಡು", ಅವುಗಳ ಮೇಲೆ ನಾನು ನಡೆಯಲಾರಂಭಿಸಿದೆ, ಅತ್ಯಂತ ಆರಾಮವಾಗಿ! ಇಡೀ ಜೀವನ ನಾನು ಅದರ ಅಭ್ಯಾಸ ಮಾಡಿರುವೆನೇನೋ ಎನ್ನುವ ರೀತಿಯಲ್ಲಿ. ಇದೂ ಸಹ ಅಂಥದೇ ಘಟನೆ, ನಾನು ತೂಕ ರಹಿತವಾದಂತೆ, ಹಗುರಾದಂತೆ ಅನಿಸುತ್ತಿತ್ತು.

ಸದಾ ಯಾರೋ ಹೊತ್ತೊಯ್ಯುತ್ತಿದ್ದಾರೆ ಎಂಬ ಅನುಭವವನ್ನು ಯಾವುದೋ ಶಕ್ತಿ ನನ್ನನ್ನು ಎತ್ತಿ ಹಿಡಿದಂತೆ, ಎತ್ತಿ ಮುಂದಕ್ಕೊಯ್ಯುತ್ತಿರುವಂತೆ, ಆಚಲನೆಯನ್ನು ನಾನು ಇವತ್ತಿಗೆ ಹೋಲಿಸಿ ನೋಡಿದರೆ… ಅದು ವಿಶಾಲವಾದ ರೆಕ್ಕೆ ಚಲನೆಯದ್ದು– ಅದೇ ರೀತಿಯ ಕಂಪನ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಮಾರ್ಚ್ 9, 1963**

**ಭೌತಿಕ ಪ್ರಕೃತಿಯ ವಾಗ್ದಾನ**

– ಅನುವಾದ: ಪ್ರೋ. ಕೆ. ವೀರಭದ್ರಪ್ಪ

ನಾನು ಚಿಕ್ಕವಳಾಗಿದ್ದಾಗ (ಸುಮಾರು ಹನ್ನೆರಡು ವಯಸ್ಸು) ನನಗೆ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಏನೂ ಗೊತ್ತಿರಲಿಲ್ಲ, ನನ್ನ ಕುಟುಂಬವು ಸಂಪೂರ್ಣವಾಗಿ ಭೌತಿಕ ಪರಿಸರದಲ್ಲಿ ಜೀವಿಸುತ್ತಿದ್ದರು; ಆದರೆ ಒಂದು ಸಲ, ನಾನು ಕನಸಿನಲ್ಲಿ ಏನೋ ನೋಡಿದೆ: ಒಬ್ಬ ವ್ಯಕ್ತಿ ನನ್ನಲ್ಲಿಗೆ ಬಂದರು, ಆಕೆ ಒಬ್ಬ ಹೆಂಗಸು ಅವಳು ನನಗೆ ಹೇಳಿದಳು, "ನೀನು ಏನು ಬಯಸುತ್ತೆಯೋ ಅದು ನಿನಗೆ ಹೇರಳವಾಗಿ ಸಿಗುತ್ತದೆ." ಅದು ಪ್ರಕೃತಿ, ಭೌತಿಕ ಪ್ರಕೃತಿ ಅದೇ ವ್ಯಕ್ತಿಯನ್ನು

ಆಮೇಲೆ ಬಹಳ ಸಲ ನೋಡಿದೆ. ಮತ್ತು ಅದು, ಸತ್ಯ, ಸಂಪೂರ್ಣವಾದ ಸತ್ಯ! (ಶ್ರೀಮಾತೆ ನಗುತ್ತಾ ಸುತ್ತಲಿನ ಗೊಂದಲಗಳನ್ನು ತೊರಿಸುತ್ತಾರೆ) ನಂತರ ಧೀಯಾನರನ್ನು ಕಂಡಾಗ ನನಗೆ ವಿವರಿಸಿದರು; ಆದರೆ ಆ ಸಮಯದಲ್ಲಿ ನನಗೆ ಏನೂ ಗೊತ್ತಿದ್ದಿಲ್ಲ, ನನ್ನ ಆಲೋಚನೆಯಿಂದಾದದ್ದಲ್ಲ. ನನಗೆ ಏನು ಗೊತ್ತಿರದೇ ಬಂದದ್ದು: "ನೀನು ಏನು ಬಯಸುತ್ತಿಯೋ ಅದು ನಿನಗೆ ಹೇರಳವಾಗಿ ಸಿಗುತ್ತದೆ." (ಶ್ರೀಮಾತೆ ನಗುತ್ತಾರೆ) ಅದು ಸತ್ಯ!

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜೂನ್ 3, 1970**

ನಾನು ಯುವತಿಯಾಗಿದ್ದಾಗ, ನಾನು ಟರ್ಕಿಯವರ ಹಾಗೆ ಬಡವಳಾಗಿದ್ದೆ, ಟರ್ಕಿ ಬಡತನದಷ್ಟು, ಕಲಾವಿದಳಾದ ನಾನು, ಕೆಲವೇಳೆ ಸಮಾಜದೊಳಗೆ ಹೋಗಬೇಕಾಗುತ್ತಿತ್ತು (ಕಲಾವಿದರು ಒತ್ತಾಯಕ್ಕೊಳಗಾಗಿ ಹಾಗೆ ಮಾಡಬೇಕಿತ್ತು). ನನ್ನಲ್ಲಿ ಬಣ್ಣ ಹಚ್ಚಿದ್ದ ಬಿರುಕು ಬಿಟ್ಟ ಬೂಟುಗಳಿದ್ದವು.. ಮತ್ತು ಅವು ಕಾಣಿಸಬಾರದೆಂದು ಬಣ್ಣ ಹಚ್ಚಿದೆ. ನಾನು ಯಾವ ಸ್ಥಿತಿಯಲ್ಲಿದ್ದೆನೆಂದು ನಿಮಗೆ ಹೇಳುತ್ತಿದ್ದೇನೆ. ಟರ್ಕಿಯವರ ಹಾಗೆ ಬಡವಳು. ಆಗ ಒಂದು ದಿನ, ನಾನು ಅಂಗಡಿಯ ಕಿಡಕಿಯಲ್ಲಿ, ಆಗ ಫ್ಯಾಷನಲ್ಲಿದ್ದ ಪಟ್ಟಿ ಹಚ್ಚಿ ಕಸೂತಿ ಮಾಡಿದ ಸುಂದರವಾದ ನಿಲುವಂಗಿ ನೊಡಿದೆ. (ನೆಲ ಬಳಿಯುವ ಉದ್ದವಾದ ನಿಲುವಂಗಿಗಳು ಆ ದಿನಗಳಲ್ಲಿ ಫ್ಯಾಷನ್ ಆಗಿದ್ದವು. ನನಲ್ಲಿ ಆ ತರಹದ ನಿಲುವಂಗಿ ಇರಲಿಲ್ಲ – ನಾನು ಉಪೇಕ್ಷಿಸುತ್ತಿದ್ದೆ, ಅದು ಬಹಳ ಸೂಕ್ಷ್ಮ ವಿಷಯವಾಗಿತ್ತು. ಆದರೆ ಪ್ರಕೃತಿ ನನಗೆ ಹೇಳಿದ್ದಳಲ್ಲಾ ನೀನು ಏನು ಬಯಸುತ್ತಿಯೋ ಅದು ನಿನಗೆ ಖಂಡಿತಾ ದೊರಕುತ್ತದೆಯೆಂದು, ನಾನು ಅದನ್ನು ಪ್ರಯೋಗಿಸಬಯಸಿದೆ) ಆದ ಕಾರಣ ನಾನು ಹೇಳಿದೆ" ಸರಿ, ನನಗೆ ಆ ತರಹದ ನಿಲುವಂಗಿ ಬೇಕು", ನನಗೆ ಐದು ಸಿಕ್ಕವು! ಅವು ಎಲ್ಲಾ ದಿಕ್ಕಿನಿಂದ ದೊರಕಿದವು! ಮತ್ತು ಅದು ಯಾವಾಗಲೂ ಹಾಗೆಯೇ ನಾನು ಯಾವಾಗಲೂ ಏನನ್ನೂ ಕೇಳುವುದಿಲ್ಲ, ಆದರೆ ಒಂದು ವೇಳೆ ಆಕಸ್ಮಾತ್ತಾಗಿ ನನಗೆ ನಾನೇ ಹೇಳಿಕೊಂಡರೆ, 'ಹುಂ, ಅದು ಇದ್ದರೆ ಚೆನ್ನಾಗಿರುತ್ತದೆ ಎಂದರೆ ಸಾಕು, ಬೆಟ್ಟದಷ್ಟು ಬಂದು ಬೀಳುತ್ತಿದ್ದವು!

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜೂನ್ 22, 1958**

## ಅಸಾಧ್ಯವೆನ್ನುವುದು ಏನೂ ಇಲ್ಲಾ

ಎಲ್ಲವೂ ಸಾಧ್ಯವೆಂದು ಪುರಾವೆ ಸಹಿತ ನನ್ನ ಜೀವನದಲ್ಲಿ ಎಲ್ಲಾ ಅನುಭವಗಳು ನನಗೆ ಮನದಟ್ಟಾಗಿವೆ. ಉದಾಹರಣೆಗೆ, ನನಗೆ 22 ವರ್ಷಗಳಾಗಿದ್ದಾಗ, ಒಂದು ರಾತ್ರಿ ಆ ರಾತ್ರಿ ಆ ಅನುಭವವಾದ ನಂತರ (ವಿವರಗಳು ನನಗೆ ಮರೆತುಹೋಗಿವೆ) ... ಆಗಿನ ಕಾಲದಲ್ಲಿ ಹೆಣ್ಣುಮಕ್ಕಳು ನೆಲಕ್ಕೆ ಸ್ಪರ್ಶವಾಗುವಷ್ಟು ಉದ್ದನೆಯ ಉಡುಗೆಗಳನ್ನು ತೊಡುತ್ತಿದ್ದರು (ನೆಲಗುಡಿಸಿದ ಹಾಗೆ ಸಂಕೇತಿಸಿದರು), ಮತ್ತು ನನ್ನ ಅನುಭವದಲ್ಲಿ ಆ ರಾತ್ರಿ, ನಾನು ಎತ್ತರವಾಗಿ ಬೆಳೆದಿದ್ದೆ ಅಂಗುಲ ಅಂತರ! ಇದರ ಅರ್ಥ ಏನೆಂದರೆ ಆ ರಾತ್ರಿಯ ಅನುಭವದ ನಂತರ ದೇಹವು ಒಂದು ಅಂಗುಲ ಬೆಳೆದಿತ್ತು. ನೀವು ನೋಡಿರಿ, ರಾತ್ರಿಯ ಅನುಭವದೊಂದಿಗೆ ನಾನು ನಿಜವಾಗಿ ಎತ್ತರವಾಗಿ ಬೆಳೆದಿದ್ದೆ (ನನಗೆ ವಿವರಗಳು ನೆನಪಿಲ್ಲಾ) ಮತ್ತು ಮುಂಜಾನೆ.. ಮತ್ತು ಅಂತಹ ಅನುಭವಗಳು ಭೌತಿಕವಾಗಿ ಪರಿಶೀಲಿಸಲ್ಪಟ್ಟವು. ಖಚಿತಗೊಳಿಸುವ ಸಲುವಾಗಿ, ಇಂತಹ ಅನುಭವಗಳು ಪುನಃ ಮತ್ತೆ ಮತ್ತೆ ಆಗದೆ ದೇಹಕ್ಕೆ ಮನವರಿಕೆಯಾಗಬೇಕು. ಆದ ಕಾರಣ ಯಾವುದೂ ಅಸಾಧ್ಯವಲ್ಲವೆಂದು ಅದಕ್ಕೆ ಗೊತ್ತಾಗುತ್ತದೆ. ಅಸಾಧ್ಯವೆಂಬುದು ಏನೂ ಇಲ್ಲವೆಂದು ಅದಕ್ಕೆ (ದೇಹಕ್ಕೆ) ಗೊತ್ತಾಗುತ್ತದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಫೆಬ್ರವರಿ 3, 1968**

## ಗೂಢವಿದ್ಯೆಯ ಬೇರುಗಳು

ನಾನು ಹನ್ನೆರಡು ವರ್ಷದವಳಿದ್ದಾಗ ಗೂಢವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದೆ. ಆದರೆ ನನಗೆ ಅಂಜಿಕೆಯಿರಲಿಲ್ಲ. ನಾನು ಯಾವುದಕ್ಕೂ ಅಂಜುತ್ತಿರಲಿಲ್ಲ. ಯಾರು ತಮ್ಮ ದೇಹದಿಂದ ಹೊರಹೋಗುತ್ತಾರೋ, ಆದರೆ ಒಂದು ತರಹ ಅಗ್ರಾಹ್ಯವಾದ ಎಳೆಯೊಂದಿಗೆ ಮೂಲದೊಂದಿಗೆ ಬಂಧಿಸಲ್ಪಟ್ಟಿರುತ್ತಾರೆ; ಎಳೆ ತುಂಡಾದರೆ ಎಲ್ಲಾ ಮುಗಿದಂತೆ. ಜೀವನ ಕೂಡ ಕೊನೆಗೊಳ್ಳುತ್ತದೆ. ಯಾರು ದೇಹದಿಂದ ಹೊರಹೋಗುತ್ತಾರೆಯೊ, ಯಾವ ಲೋಕದಲ್ಲಿ ಪ್ರವೇಶಿಸುತ್ತಾರೆಯೊ ಅದನ್ನು ಕಾಣತೊಡುಗುತ್ತಾರೆ. ಮತ್ತು ಸಾಮಾನ್ಯವಾಗಿ ಅವರು ಮೊದಲು ನೋಡುವ ದೃಶ್ಯಗಳು ಭಯಾನಕವಾಗಿರುತ್ತವೆ. ಕಾರಣವೇನೆಂದರೆ ಅವರಿಗೆ, ಖಾಲಿ ಗಾಳಿ ಅದರಲ್ಲಿ ಏನು ಇರುವುದಿಲ್ಲ, ಬಿಳಿ

ಅಥವಾ ನೀಲಿಯಾಗಿ ಕಾಣಿಸುತ್ತದೆ, ಅಲ್ಲಿ ಮೋಡಗಳು, ಸೂರ್ಯರಶ್ಮಿ ಮತ್ತು ಅದೆಲ್ಲಾ ಬಹಳ ಸುಂದರವಾಗಿ ಯಾವಾಗ ಬೇರೆ ಕಡೆ ದೃಷ್ಟಿಸುತ್ತಾರೆಯೋ ಆಗ ಆಸೆಯ ಶೇಷಗಳ ಅಸಂಖ್ಯ ಆಕಾರಗಳು ಅಥವಾ ಮಾನಸಿಕ ವಿರೂಪತೆಗಳು ಅದರೊಳಗೆ ರಾಶಿ ರಾಶಿಯಾಗಿ ನುಗ್ಗಿದ್ದನ್ನು ನೋಡುವರು, ಅದು ಅಷ್ಟು ಸುಮಧುರವಾಗಿರುವುದಿಲ್ಲ, ಕೆಲವು ಸಲ ಬಹಳ ಕುರೂಪ, ನಿಮ್ಮ ಮೇಲೆ ಆಕ್ರಮಣ ಮಾಡುತ್ತವೆ; ಅವು ಒಂದು ಒತ್ತಡ ಹೇರಿ ದಾಳಿ ಮಾಡುತ್ತವೆ; ಮತ್ತು ನೀವು ಹೆದರಿದರೆ, ಸಂಪೂರ್ಣವಾಗಿ ಭಯಾನಕವಾದ ರೂಪು ತಾಳುತ್ತವೆ. ಸ್ವಾಭಾವಿಕವಾಗಿ, ನೀವು ಅಳುಕದಿದ್ದರೆ, ನೀವು ಅವೆಲ್ಲವನ್ನು ಆರೋಗ್ಯಕರವಾದ ಕುತೂಹಲದೊಂದಿಗೆ ವೀಕ್ಷಿಸಿದರೆ ಇವೆಲ್ಲಾ ಯಾವುದೂ ಭಯಂಕರ ಅಲ್ಲವೆಂಬುದು ನಿಮ್ಮ ಗ್ರಹಿಕೆಗೆ ಬರುತ್ತದೆ.

**– ಶ್ರೀಮಾತೆ: ಅವಳ ಅಲೌಕಿಕ ಸ್ಪರ್ಶ: 13**

**ಭವ್ಯವಾದ ಬಂಗಾರದ ಉಡುಗೆ**

ಇಂತಹ ಒಂದು ಕಾಲದಲ್ಲಿ ನಾನು ದಿನಾ ರಾತ್ರಿಯಲ್ಲಿ ನನ್ನ ದೇಹದಿಂದ ಹೊರಬಂದು ಪ್ರಾರ್ಥನೆ ಮತ್ತು ಧ್ಯಾನದಲ್ಲಿ ಹೇಳಿದಂತೆ ಕೆಲಸ ಮಾಡುತ್ತಿದ್ದೆ. ಪ್ರತಿರಾತ್ರಿ ಯಾವಾಗ ಮನೆಯಲ್ಲಾ ಶಾಂತವಾಗಿರುತ್ತಿತ್ತೋ, ಆ ನಿರ್ದಿಷ್ಟ ಸಮಯದಲ್ಲಿ ನಾನು ದೇಹದಿಂದ ಹೊರಹೋಗುತ್ತಿದ್ದೆ ಮತ್ತು ಎಲ್ಲಾ ರೀತಿಯ ಅನುಭವಗಳನ್ನು ಹೊಂದುತ್ತಿದ್ದೆ, ಮತ್ತು ಕ್ರಮೇಣ ನನ್ನ ದೇಹವು ನಿದ್ರಾನಡಿಗೆಗೆ ಒಗ್ಗಿಕೊಂಡಿತು. (ಅದೇನೆಂದರೆ, ಸ್ಥಿತಿಯ ಪ್ರಜ್ಞೆ ಹೆಚ್ಚು, ಹೆಚ್ಚು ಪ್ರಜ್ಞಾಪೂರ್ವವಾಯಿತು, ಸಂಪರ್ಕ ಮಾತ್ರ ಸದೃಢವಾಗಿ ಪ್ರತಿಷ್ಠಾಪಿಸಲ್ಪಟ್ಟಿತು). ನನಗೆ ನಿದ್ದೆಯಲ್ಲಿಯೇ ನಡಿಯುವ ಹವ್ಯಾಸವಾಗಿಬಿಟ್ಟಿತ್ತು. ಆದರೆ ಸಾಮಾನ್ಯವಾದ ನಿದ್ರಾನಡಿಗೆಯವರ ತರಹವಲ್ಲ; ನಾನು ಎದ್ದು, ಮೇಜಿನ ಡ್ರಾ ತೆಗೆಯುತ್ತಿದ್ದೆ ಒಂದು ಕಾಗದದ ತುಂಡನ್ನು ತೆಗೆದುಕೊಂಡು ಕವಿತೆಗಳನ್ನು ಬರೆಯುತ್ತಿದ್ದೆ. ಹೌದು, ಕವಿತೆಗಳನ್ನು – ನಾನು, ಆದರೆ ನನ್ನಲ್ಲಿ ಕವಯಿತ್ರಿ ಇದ್ದಿಲ್ಲ! ನಾನು ಯಾವ ವಿಷಯ–ವಸ್ತುಗಳನ್ನು ಬಿಡುತ್ತಿರಲಿಲ್ಲಾ, ನಂತರ ಬಹಳ ಪ್ರಜ್ಞಾಯುತಳಾಗಿ ಎಲ್ಲವನ್ನು ಮೇಜಿನೊಳಕ್ಕೆ ಇಟ್ಟು ಬೀಗ ಹಾಕಿ ಹಾಸಿಗೆಗೆ ಮರಳುತ್ತಿದ್ದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಅಗಸ್ಟ 5, 1961**

ಸುಮಾರು ನಾನು ಹದಿಮೂರು ವರ್ಷದವಳಷ್ಟು ಚಿಕ್ಕವಳಿದ್ದಾಗ, ಸುಮಾರು ಒಂದು ವರ್ಷ, ದಿನಾರಾತ್ರಿ ನಾನು ಹಾಸಿಗೆಗೆ ಹೋದ ಕೂಡಲೆ, ನನಗನ್ನಿಸುತ್ತಾ ಇದ್ದದ್ದು, ನಾನು ನನ್ನ ದೇಹದಿಂದ ಹೊರಬಂದು, ಮನೆ ಮೇಲೆ ನಂತರ ನಗರದ ಮೇಲೆ, ಇನ್ನು ಎತ್ತರಕ್ಕೆ ಸೀದಾ ಬೆಳೆದು ನಿಲ್ಲುತ್ತಿದ್ದೆ. ನಾನು ನನಗಿಂತ ಉದ್ದವಾದ ಅದ್ಭುತವಾದ ಬಂಗಾರದ ಉಡುಗೆ ತೊಟ್ಟಿದ್ದು ನನಗೆ ಕಾಣಿಸುತ್ತಿತ್ತು. ಮತ್ತು ನಾನು ಎತ್ತರೆತ್ತರಕ್ಕೆ ಬೆಳೆದ ಹಾಗೆ ಉಡುಗೆಯೂ ಸಹಿತ ನನ್ನ ಸುತ್ತಾ ದೊಡ್ಡದಾಗಿ ಹಿಗ್ಗುತ್ತಾ ಇಡೀ ನಗರವನ್ನೇ ಆವರಿಸುವಂತಹ ಭಾವಣೆಯಾಗುತ್ತಿತ್ತು. ಆಗ ಗಂಡಸರು, ಹೆಂಗಸರು, ಮಕ್ಕಳು, ವೃದ್ಧರು, ರೋಗಿಗಳು, ದುರದೃಷ್ಟವಂತರು ಎಲ್ಲಾ ದಿಕ್ಕಿನಿಂದ ಬಂದು ನಿಲ್ಲುವದನ್ನು ನಾನು ನೋಡುತ್ತಿದ್ದೆ; ಹರಡಿದ ನಿಲುವಂಗಿಯಲ್ಲಿ ಅವರು ಬಂದು ಸೇರಿ, ಸಹಾಯಕ್ಕಾಗಿ ಬೇಡುತ್ತಿದ್ದರು. ತಮ್ಮ ಕಷ್ಟಗಳನ್ನು ದುಃಖಗಳನ್ನು, ಬಳಲಿಕೆಗಳನ್ನು ಹೇಳುತ್ತಿದ್ದರು. ಇದಕ್ಕುತ್ತರವಾಗಿ ಎನ್ನುವಂತೆ ನನ್ನ ಉಡುಗೆ ಮೃದುವಾಗಿ ಮತ್ತು ಜೀವಂತವಾಗಿ ಪ್ರತಿಯೊಬ್ಬರತ್ತ ತೆರಳುತ್ತಿತ್ತು ಮತ್ತು ಯಾವಾಗ ಅವರು ಅದನ್ನು ಸ್ಪರ್ಶಿಸುತ್ತಿದ್ದರೋ ಅವರಿಗೆ ನೆಮ್ಮದಿ ಪಡೆಯುತ್ತಿದ್ದರು ಅಥವಾ ಗುಣಮುಖರಾಗುತ್ತಿದ್ದರು ಮತ್ತು ಹೆಚ್ಚಿನ ಸಂತೋಷದಿಂದ ಮತ್ತು ಸದೃಢರಾಗಿ ತಮ್ಮ ದೇಹಗಳಿಗೆ ತೆರಳುತ್ತಿದ್ದರು. ಬೇರೆ ಯಾವುದೂ ನನಗೇ ಸುಂದರವಾಗಿ ಕಾಣಿಸುತ್ತಿದ್ದಿಲ್ಲ, ನನಗೆ ಬೇರೆ ಯಾವುದು ಇಷ್ಟು ಸಂತೋಷ ಕೊಡುತ್ತಿದ್ದಿಲ್ಲ ಮತ್ತು ಹಗಲಿನ ಎಲ್ಲಾ ಚಟುವಟಿಕೆಗಳು ಮಂದ ಮತ್ತು ಬಣ್ಣವಿಲ್ಲದ ಹಾಗೆ ಮತ್ತು ಯಾವುದೇ ಜೀವಂತಿಕೆ ಇಲ್ಲದ ಹಾಗೆ, ರಾತ್ರಿಯ ಚಟುವಟಿಕೆ ಮಾತ್ರ ನಿಜವಾದ ಜೀವನ ಅನ್ನಿಸುತ್ತಿತ್ತು. ಕೆಲವು ಸಲ ನಾನು ಎತ್ತರಕ್ಕೆ ಬೆಳೆಯುವಾಗ, ನನ್ನ ಎಡಕ್ಕೆ ಒಬ್ಬ ವೃದ್ಧವ್ಯಕ್ತಿ ಶಾಂತತೆ ಮತ್ತು ಗಂಭೀರತೆಯೊಂದಿಗೆ ನನ್ನ ಕಡೆಗೆ ದಯೆಯಿಂದ ಮತ್ತು ಪ್ರೇಮದಿಂದ ನೋಡುತ್ತಾ, ತನ್ನ ಸಾನಿಧ್ಯದಿಂದ ನನ್ನನ್ನು ಹುರಿದುಂಬಿ–ಸುತ್ತಿದ್ದನು. ಅವನು ಉದ್ದವಾದ ಕಪ್ಪು ನೇರಳೆ ಬಣ್ಣದ ಉಡುಗೆ ತೊಟ್ಟಿದ್ದನು – ಇದೇ ಅವನ ವ್ಯಕ್ತಿತ್ವ – ನನಗೆ ನಂತರ ಅವನ ಬಗ್ಗೆ ಗೊತ್ತಾಯಿತು. ಅವನು ದುಃಖಗಳ ಮನುಷ್ಯ ಎಂದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/81**

**ನೀನು ಅದೇ ಆಗಿರುವೆ**

ನಾನು ಹನ್ನೊಂದು ಅಥವಾ ಹನ್ನೆರಡು ವರ್ಷದವಳಿದ್ದಾಗ ನನ್ನ ತಾಯಿ ಕಾಡಿನ ಅಂಚಿನಲ್ಲಿ ಒಂದು ಮನೆಯನ್ನು ಬಾಡಿಗೆಗೆ ಹೊಂದಿದ್ದಳು. ನಾವು ಪಟ್ಟಣಕ್ಕೆ ಹೋಗಬೇಕಾಗಿರಲಿಲ್ಲ. ನಾನು ಒಬ್ಬಳೇ ಕಾಡಿನಲ್ಲಿ ಕುಳಿತುಕೊಳ್ಳುತ್ತಿದ್ದೆ, ಹಗಲುಗನಸಿನಲ್ಲಿ ಕಳೆದುಹೋಗುತ್ತಿದ್ದೆ. ಒಂದು ದಿನ (ಇದು ಹಲವು ಸಲ ಆಗಿದೆ) ಕೆಲವು ಅಳಿಲುಗಳು, ಕೆಲವು ಪಕ್ಷಿಗಳು ಮತ್ತು (ಶ್ರೀಮಾತೆ ಕಣ್ಣುಗಳನ್ನಗಲಿಸಿ) ಜಿಂಕೆ ಕೂಡ ನೊಡುತ್ತಾ ಇದ್ದರೆ ಎಷ್ಟು ಚೆಂದ, ಕಣ್ಣುಬಿಟ್ಟು ನೋಡುತ್ತಾ ಇದ್ದರೆ ಆಕರ್ಷಕವಾಗಿದ್ದವು - ಅವು ದಿಕ್ಕಪಾಲಾಗಿ ಓಡಿಹೋಗುತ್ತಿದ್ದವು.

ಆ ಮೇಲೆ ನಾನು ಥಿಯಾನ್‌ರನ್ನು ಭೇಟಿ ಮಾಡಿದಾಗ ಈ ಎಲ್ಲಾ ನೆನೆಪುಗಳು ಮರುಕಳಿಸಿದವು. ಸುಮಾರು 20 ವರ್ಷದವಳಿದ್ದಾಗ ಅಂದರೆ 10 ವರ್ಷದ ನಂತರ ಥೀಯಾನ್‌ರನ್ನು ಭೇಟಿ ಮಾಡಿದಾಗ ಈ ಎಲ್ಲಾ ವಿಷಯಗಳ ಬಗ್ಗೆ ನಾನು ವಿವರಿಸಲ್ಪಟ್ಟೆ. ಆಗ ನನಗೆ ತಿಳಿಯಿತು. ನನಗೆ ಆಗ ಎಲ್ಲದರ ಬಗ್ಗೆ ನೆನಪು ಬಂತು. ಮತ್ತು ನಾನು ಆಲೋಚಿಸಿದೆ "ಹೀಗೋ..." ಶ್ರೀಮತಿ ಥಿಯಾನ್‌ರವರು ನನಗೆ ಹೇಳಿದರು "ಓಹ್! ನನಗೆ ಗೊತ್ತು. ನೀನು ಅದೇ ಆಗಿರುವೆ ಅದರ ಮುದ್ರೆ ನಿನ್ನ ಮೇಲೆ ಇದೆ". ಆಕೆ ಏನು ಹೇಳಿದಳು ಎಂದು ಆಲೋಚಿಸಿದೆ. ಮತ್ತು ನನಗೆ ಅದು ಸರಿ ಅನಿಸಿತು. ಈ ಎಲ್ಲಾ ಅನುಭವಗಳಿಂದ ನನಗೆನಿಸಿದ್ದೇನೆಂದರೆ ಕಾಣದ ವ್ಯಕ್ತಿಗಳು ನನ್ನನ್ನು ನೋಡಿಕೊಳ್ಳುತ್ತಿದ್ದರು. (ಶ್ರೀಮಾತೆ ನಗುತ್ತಾರೆ).

ಕುತೂಹಲಕಾರಿ ವಿಷಯವೇನೆಂದರೆ ಇವು ಯಾವು ಮಾನಸಿಕ–ವಾಗಿರಲಿಲ್ಲ. ಎಲ್ಲಾ ವಿಷಯಗಳ ಇರುವಿಕೆಯ ಬಗ್ಗೆ ನನಗೆ ಗೊತ್ತಿರಲಿಲ್ಲ, ಧ್ಯಾನವೆಂದರೆ ಏನು ಗೊತ್ತಿರಲಿಲ್ಲ - ಧ್ಯಾನವೆಂದರೆ ಏನೆಂದು ಗೊತ್ತಿರದೆ ನಾನು ಧ್ಯಾನ ಮಾಡುತ್ತಿದ್ದೆ. ಖಂಡಿತವಾಗಿಯೂ ನನಗೆ ಗೊತ್ತಿರಲಿಲ್ಲ. ಸಂಪೂರ್ಣವಾಗಿ ಗೊತ್ತಿರಲಿಲ್ಲ, ನನ್ನ ತಾಯಿ ಇದರ ಬಗ್ಗೆ ನಿಷೇಧ ವಿಧಿಸಿದ್ದಳು. ಆ ವಿಷಯಗಳನ್ನು ಮುಟ್ಟಲೇಬಾರದು ಇಲ್ಲವಾದರೆ ಅವು ನಮ್ಮನ್ನು ಸೆಳೆದು ಒಯ್ಯುತ್ತವೆ ಎನ್ನುತ್ತಿದ್ದಳು!

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಮಾರ್ಚ್ 9, 1963**

## ಎಲ್ಲದರಲ್ಲೂ ಉನ್ನತ ಪರಿಣಿತಿ

ಅವರದು (ಶ್ರೀಮಾತೆ) ಅವರು ನಾಚಿಕೆ ಸ್ವಭಾವ ವಸ್ತುತಃ ತಮ್ಮ ವೈಯಕ್ತಿಕ ಸಾಮರ್ಥ್ಯದ ಬಗ್ಗೆ ವಿಶ್ವಾಸ ಇರಲಿಲ್ಲ. (ಆದರೂ ಸಂದರ್ಭ ಬಂದರೆ ಎಂಥ ಕೆಲಸವನ್ನಾದರೂ ಮಾಡುವಂತೆ ಇದ್ದರು) 20 ಅಥವಾ 21 ವಯಸ್ಸಿನವರೆಗೆ ನಾನು ಬಹಳ ಮಾತನಾಡುತ್ತಿದ್ದೆ, ಭಾಷಣದಂತದ್ದು ಇಲ್ಲವೇ ಇಲ್ಲ. ನಾನು ಸಂವಾದಗಳಲ್ಲಿ ಭಾಗವಹಿಸುತ್ತಿರಲಿಲ್ಲ, ನಾನು ಸುಮ್ಮನೆ ಕೇಳುತ್ತಿದ್ದೆ. ಮಾತು ಸ್ವಲ್ಪವೇ ಆಡುತ್ತಿದ್ದೆ ಆಗ ಪ್ಯಾರಿಸ್‌ನಲ್ಲಿದ್ದ ಅಬ್ದುಲ್‌ಬಹಾ (ಬಹಾಯ್) ಅವರ ಸಂಪರ್ಕಕ್ಕೆ ಬಂದು ಒಂದು ತರಹದ ಆತ್ಮೀಯತೆ ಬೆಳೆಯಿತು. ನನಗೆ ಇಷ್ಟವಿದ್ದ ಕಾರಣ ಅವರ ಸಭೆಗಳಿಗೆ ಹೋಗುತ್ತಿದ್ದೆ. ಒಂದು ದಿನ ನಾನು ಅವರ ಕೋಣೆಯಲ್ಲಿದ್ದಾಗ ನನಗೆ ಅವರು ಹೇಳಿದರು "ನನಗೆ ಹುಷಾರಿಲ್ಲ, ನನಗೆ ಮಾತನಾಡಲು ಆಗುವುದಿಲ್ಲ, ಹೋಗು, ನನ್ನ ಪರವಾಗಿ ನೀನು ಮಾತನಾಡು". ನಾನು ಹೇಳಿದೆ "ನಾನು..! ನನಗೆ ಮಾತನಾಡಲು ಬರುವುದಿಲ್ಲ". ಅವರು ಉತ್ತರಿಸಿದರು. "ನೀನು ಸುಮ್ಮನೆ ಅಲ್ಲಿಗೆ ಹೋಗು, ಶಾಂತವಾಗಿ ಕುಳಿತುಕೋ ಏಕಾಗ್ರತೆ ಹೊಂದು. ಮತ್ತು ನೀನು ಏನು ಹೇಳಬಯಸುವಿಯೋ ಅದು ನಿನಗೆ ತಾನಾಗಿಯೇ ಬರುತ್ತದೆ. ಹೋಗು ಅದನ್ನು ಮಾಡು ನಿನಗೆ ಗೊತ್ತಾಗುತ್ತದೆ." ಸರಿ, ಆ ಮೇಲೆ (ನಗುತ್ತಾ) ಅವರು ಹೇಳಿದ್ದ ಹಾಗೆ ಮಾಡಿದೆ. ಅಲ್ಲಿ 30 ರಿಂದ 40 ಜನರು ಇದ್ದರು ನಾನು ಹೋಗಿ ಅವರ ಮಧ್ಯೆ ಕುಳಿತೆ, ಸುಮ್ಮನೆ ಇದ್ದೆ ಮತ್ತು ನಂತರ.. ನಾನು ಹಾಗೇ ಕುಳಿತೇ, ಆಲೋಚನೆ ಇಲ್ಲದೇ, ಏನೂ ಇಲ್ಲದೇ ಮತ್ತು ಇದ್ದಕ್ಕಿದ್ದಂತೆ ಮಾತನಾಡಲು ಆರಂಭಿಸಿದೆ. ಸುಮಾರು ಅರ್ಧಗಂಟೆ ಮಾತನಾಡಿದೆ (ನಾನು ಏನು ಮಾತನಾಡಿದೆ ಎಂಬುದು ನನಗೆ ಗೊತ್ತಿಲ್ಲ) ಮತ್ತೆ ಅದು ಮುಗಿದ ನಂತರ ಅವರೆಲ್ಲಾ ಹೆಚ್ಚು ಸಂತೋಷಗೊಂಡರು. ನಾನು ಅಬ್ದುಲ್‌ಬಹಾರನ್ನು ಕಂಡಾಗ ಅವರು ಹೇಳಿದರು "ನೀನು ಬಹಳ ಪ್ರಶಂಸನೀಯವಾಗಿ ಮಾತನಾಡಿದೆ." ನಾನೆಂದೆ "ಅದು ನಾನಲ್ಲ". ಮತ್ತು ಆ ದಿನದಿಂದ (ನಾನು ಅವರಿಂದ ಶಹಭಾಷ್‌ಗಿರಿ ಪಡೆದೆ. ನಿಮಗೆ ಅರ್ಥವಾಯಿತೆ?) ನಾನು ಹಾಗೇ ಇರುತ್ತಿದ್ದೆ ಏಕಾಗ್ರವಾಗಿ, ಎಲ್ಲವೂ ಬರುತ್ತಿತ್ತು. ವಿಶೇಷವಾಗಿ "ನಾನು" ಎಂಬ ಸಂವೇದನೆ ಕಳೆದು ಹೋಗಬೇಕು – ಅದೇ ಎಲ್ಲದರಲ್ಲಿಯೂ ವಿಶೇಷ ಪರಿಣಿತಿ, ಎಲ್ಲದಕ್ಕೂ, ಏನೇ ಮಾಡಲಿ: ಚಿತ್ರಕಲೆಯಾಗಲಿ,.. (ನಾನು ಚಿತ್ರಕಲೆ, ಮೂರ್ತಿ ಮಾಡುವುದು, ಮನೆವಿನ್ಯಾಸ, ಸಂಗೀತ ಕಲೆ ಅಭ್ಯಾಸ ಮಾಡುತ್ತಿದ್ದೆ), ಎಲ್ಲದಕ್ಕೂ "ನಾ" ಎಂಬ

ಸಂವೇದನೆ ಹೋದರೆ ನೀನಾಗ ನಿನ್ನನ್ನು ಈ ಕಲೆಗಳಿಗೆ ತೆರೆದುಕೊಳ್ಳುತ್ತಿಯಾ.. ಅವುಗಳ ಜ್ಞಾನಕ್ಕೂ.. (ಮೂರ್ತಿ ಮಾಡುವುದು, ಚಿತ್ರಕಲೆ, ಇತ್ಯಾದಿ). ಅದು ಅಗತ್ಯವಾಗಿ ವ್ಯಕ್ತಿಗಳಿಂದಲ್ಲ, ಆದರೆ ವಸ್ತುವಿನಲ್ಲಿನ ಚೈತನ್ಯ ನಿನ್ನನು ಉಪಯೋಗಿಸುತ್ತದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಫೆಬ್ರವರಿ 18, 1967**



ದೈವವು ಮನುಷ್ಯ ರೂಪ ಧರಿಸುತ್ತದೆ, ಮನುಷ್ಯರ ಬಾಹ್ಯ ಸ್ವಭಾವವನ್ನೇ ಧರಿಸಿ, ಮನುಷ್ಯರಲ್ಲಿ ಹೇಗೆ ದಾರಿ ನಡೆಯಬೇಕು ಎಂಬುದನ್ನು ತೋರಿಸಿಕೊಡುತ್ತದೆ. ಆದರೆ ತನ್ನ ದೈವತ್ವವನ್ನು ಅದು ಕಳೆದುಕೊಳ್ಳುವುದಿಲ್ಲ. ಅಲ್ಲಾಗುತ್ತಿರುವ ಪ್ರಕಟಣೆ, ಮನುಷ್ಯ ದೇವನಾಗಿ ಬದಲಾಗುವುದಿಲ್ಲ, ಅಲ್ಲಾಗುತ್ತಿರುವುದು ಬೆಳೆಯುತ್ತಿರುವ ದೈವೀ ಪ್ರಜ್ಞೆಯ ಪ್ರಕಟಣೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/384** **– ಶ್ರೀಮಾತೆ**

*

*ಶ್ರೀಮಾತೆ, ನೀವು ಚಿಕ್ಕವರಿದ್ದಾಗ, ನಿಮ್ಮ ಬಾಲ್ಯವಸ್ಥೆಯಲ್ಲಿ ನೀವು ದೈವಿ ಅವತಾರವೆಂದು ಗೊತ್ತಿತ್ತೆ?*

ಹೌದು ನನಗೆ ಅರಿವಿತ್ತು.

**– ಶ್ರೀಮಾತೆ: ಅವಳ ಅಲೌಕಿಕ ಸ್ಪರ್ಶ: 4**

**ಧಾರ್ಮಿಕ ಸಂವೇದಗಳು**

ನನಗೆ ಧಾರ್ಮಿಕ ಸಂವೇದನೆ ಇರಲಿಲ್ಲ – ನಿಮಗೆ ಗೊತ್ತಿದೆ, ಜನರು ಇದರ ಬಗ್ಗೆ ಏನನ್ನುತ್ತಾರೆ.. ಅವರಿಗೆ ಧರ್ಮದಲ್ಲಿ ಏನಿದೆ ವಿಶೇಷವಾಗಿ ಯುರೋಪಿನಲ್ಲಿ ನಾನು ಇಂಗ್ಲೀಷ ಶಬ್ದವನ್ನು ಮಾತ್ರ ನೋಡುತ್ತೇನೆ; ಒಂದು ರೀತಿಯ ಸಂಭ್ರಮ – ಭಯ ಇದು ನನ್ನನ್ನು ಯಾವಾಗಲೂ ನಗುವಂತೆ ಮಾಡುತ್ತದೆ. ಆದರೆ ಇದರ ಹಿಂದೆ ಏನಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಇದರ ಹಿಂದೆ ಸಾನ್ನಿಧ್ಯವಿದೆ.

ನನಗೆ ಈಗಲೂ ನೆನಪಿನಲ್ಲಿರುವ ಸಂಗತಿ ಎಂದರೆ, ಒಂದು ಸಲ ಚರ್ಚಿನೊಳಗೆ ಹೋದಾಗ (ನಾನದನ್ನು ಹೆಸರಿಸುವುದಿಲ್ಲ) ಮತ್ತು ಅದು ಸಂವಾದ ಪ್ರದೇಶವಾಗಿತ್ತು ಅದು ಹಬ್ಬದ ದಿನವಾಗಿಲ್ಲದ ಕಾರಣ ಖಾಲಿಯಿತ್ತು. ಒಬ್ಬಿಬ್ಬರು ಪ್ರಾರ್ಥನೆ ಮಾಡುತ್ತಿದ್ದರು. ನಾನೊಂದು ಬದಿಗೆ ಹೋಗಿ ಕುಳಿತೆ. ಅಲ್ಲೊಬ್ಬರು ಪ್ರಾರ್ಥಿಸುತ್ತಿದ್ದರು. ಅವರು ಬಹಳ ದುಃಖದಲ್ಲಿದ್ದಾರೆಂದು ಕಾಣಿಸುತ್ತಿತ್ತು. ಅವಳು ಪ್ರಾರ್ಥಿಸುತ್ತಿದ್ದುದು ಯಾರದ್ದೆಂದು ಗೊತ್ತಾಗಲಿಲ್ಲ, ಕ್ರೈಸ್ತನದೊ, ಕುಮಾರಿಯದ್ದೋ ಅಥವಾ ಸಂತನದೋ, ಒಟ್ಟಿನಲ್ಲಿ ನನಗೆ ಯಾವುದು ಕಲ್ಪನೆಗೆ ಬರಲಿಲ್ಲಾ. ಮತ್ತು ಓಹ್! ಇದ್ದಕ್ಕಿದ್ದಂತೆ ಪುತ್ಥಳಿಯ ಸ್ಥಳದಲ್ಲಿ ಒಂದು ಭಯಂಕರ ವಿಷಕಾರಿ ಜೇಡವನ್ನು ನೋಡಿದೆ. ನಿಮಗೆ ಗೊತ್ತು ಆದರೆ (ಸನ್ನೆ ಮಾಡುತ್ತಾ) ಬಹಳ ದೊಡ್ಡದು! ಇಗರ್ಜಿಯ ಒಂದು ಗೋಡೆಯನ್ನು ಅದು ಆವರಿಸಿತ್ತು. ಮತ್ತು ಅದು ಅಲ್ಲಿಗೆ ಬಂದವರ ಪ್ರಾಣಿಕ ಶಕ್ತಿಗಳನ್ನು ನುಂಗಲು ಹೊಂಚು ಹಾಕಿ ಕಾಯುತ್ತಿತ್ತು ಅದು ಹೃದಯ ವಿದ್ರಾವಕವಾಗಿತ್ತು. ನನಗೆ ನಾನು ಹೇಳಿಕೊಂಡೆ "ಓಹ್ ಈ ಜನರು, ಇಲ್ಲೊಬ್ಬ ದುಃಖಿ ಹೆಣ್ಣು ಸಮಾಧಾನ ಬಯಸಿ ಬಂದಿದ್ದಾಳೆ, ಅವಳಲ್ಲಿ ಪ್ರಾರ್ಥನೆ ಮಾಡುತ್ತಿದ್ದಾಳೆ, ಅಳುತ್ತಿದ್ದಾಳೆ ಸಮಾಧಾನ ಸಿಗುತ್ತದೆಯೆಂಬ ಭರವಸೆ ಹೊಂದಿದ್ದಾಳೆ. ಸಹಾನುಭೂತಿ ಸಿಗುತ್ತದೆಂಬ ಪ್ರಜ್ಞೆಗೆ ಮುಟ್ಟದೆ, ಅವಳ ಪ್ರಾರ್ಥನೆಗಳೆಲ್ಲವೂ ಈ ರಾಕ್ಷಸಕ್ಕೆ ಆಹಾರವಾಗುತ್ತದಲ್ಲಾ!

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಏಪ್ರಿಲ್ 29, 1961**

## ದೇವರೆಂದರೆ ಯಾರು

ಯಾರೊಬ್ಬರು ಕೇಳಿದರು "ದೇವರೆಂದರೆ ಯಾರು?" ಅದಕ್ಕೆ ನಾನು ಉತ್ತರಿಸಿದೆ ("ದೇವರು" ಎಂಬ ಶಬ್ದ ತೆಗೆದುಕೊಂಡು): ತನ್ನನ್ನು ಮೀರಿದ ತನಗಿಂತ ಪ್ರಾಬಲ್ಯ ಹೊಂದಿರುವುದಕ್ಕೆ ಮಾನವನೇ ಕೊಟ್ಟ ಹೆಸರೇ ಇದು, ಯಾವುದು ತನಗೆ ತಿಳಿದಿಲ್ಲವೋ ಆದರೆ ಅದಕ್ಕೇ ಬದ್ಧವಾಗಿದ್ದೇವೆ "ಎಲ್ಲವೂ ಅವನನ್ನು ಅವಲಂಬಿಸಿದೆ ಅನ್ನುವುದಕ್ಕಿಂತ ಅದು ಯಾವುದು ಅವನನ್ನು ಮೀರಿ ಇಲ್ಲ", ಮತ್ತೆ ಬುದ್ದಿವಂತಿಕೆಯ ದೃಷ್ಟಿಕೋನದಿಂದ "ಅದು ಎಲ್ಲಾ" ಎನ್ನುವುದೇ ಚರ್ಚಾಸ್ಪದ ವಿಚಾರ. ನನ್ನ ಅರ್ಥದಲ್ಲಿ "ಏನೋ ಒಂದು" ಅನಿರ್ದಿಷ್ಟವಾದ, ವಿವರಿಸಲಾಗದ ಏನೋ ಒಂದು – ಇದೆ, ಮತ್ತು ಮನುಷ್ಯನೋ ಅದರ ಪ್ರಾಬಲ್ಯವನ್ನು ಮನಗಂಡಿದ್ದಾನೆ. ಅದು ಎಲ್ಲಾ ತಿಳುವಳಿಕೆಗಳನ್ನು ಮೀರಿದ ಮತ್ತು ಅವನಿಗಿಂತ ಪ್ರಾಬಲ್ಯವಾದದ್ದು ಮತ್ತು ಆ ಮೇಲೆ ಧರ್ಮಗಳು ಅದಕ್ಕೊಂದು ಹೆಸರು ಕೊಟ್ಟವು; ಮನುಷ್ಯ ಅದನ್ನು "ದೇವರು" ಎಂದ. ಫ್ರೆಂಚರು " ಡಿಯು" ಎಂದರು. ಆಂಗ್ಲರು "ಗಾಡ್" ಮತ್ತೊಂದು ಭಾಷೆಯಲ್ಲಿ ಮತ್ತೊಂದರಿಂದ; ಆದರೆ ಎಲ್ಲವೂ ಒಂದೇ.

ನಾನು ಬೇಕೆಂತಲೇ ಯಾವುದೇ ಅರ್ಥ ಕೊಡುತ್ತಿಲ್ಲ ಏಕೆಂದರೆ ಜೀವನದುದ್ದಕ್ಕೂ ಅನುಭವಿಸುವ ಅನಿಸಿಕೆ ಏನೆಂದರೆ ಅದು ಒಂದು ಶಬ್ದ ಮಾತ್ರ, ಮತ್ತು ಆ ಶಬ್ದದ ಹಿಂದೆ ಜನರೆಲ್ಲಾ ಅನಪೇಕ್ಷಿತ ಅರ್ಥಗಳನ್ನು ರೂಪಿಸಿಕೊಳ್ಳುತ್ತಾರೆ.. ಇದು ದೇವರ ಬಗ್ಗೆ ಇರುವ ಊಹೆ "ಒಬ್ಬನೆ ಆತನೊಬ್ಬನೆ", ಆದರೆ ಅವರು ಹೇಗೆ ಅನಾತೊಲೆ ಪ್ರಾನ್ಸ ಹೇಳಿದ ಹಾಗೆ (ನಾನು ಅಂದುಕೊಂಡಂತೆ ದಿ ರಿವೋಲ್ಟ್ ಆಫ್ ಎಂಜಿಲ್ಸನಲ್ಲಿ): ದೇವರು ಒಬ್ಬನೆ ಒಂಟಿಯಾಗಿ ಇರಬಯಸುತ್ತಾನೆ, ಇದರಿಂದಾಗಿ ನಾನೊಬ್ಬಳು ಸಂಪೂರ್ಣ ನಾಸ್ತಿಕಳಾದೆ ನಾನು ಹೇಳುತ್ತೇನೆ, ನಾನು ಒಬ್ಬನೆ, ಒಬ್ಬನೆ ಸರ್ವಶಕ್ತ ಎಂದು ಯಾರು ಹೇಳಿದರೂ ನಾನು ಅವರನ್ನು ಒಪ್ಪುತ್ತಿರಲಿಲ್ಲಾ. ಅವನು ನಿಜವಾಗಿ ಒಬ್ಬನೆ ಒಬ್ಬ ಸರ್ವಶಕ್ತನಾಗಿದ್ದರೂ ಕೂಡ, ಅವನಿಗೇ ಅದನ್ನು ಘೋಷಿಸುವ ಹಕ್ಕಿಲ್ಲ! ಈ ರೀತಿ ನನ್ನ ಮನಸ್ಸಿನಲ್ಲಿತ್ತು. ನಾನು ಗಂಟೆಗಟ್ಟಲೆ ಇದರ ಮೇಲೆ ಮಾತನಾಡಬಲ್ಲೆ, ಯಾವ ರೀತಿ ಎಲ್ಲ ಧರ್ಮದಲ್ಲಿ ಈ ಸಮಸ್ಯೆಯನ್ನು ನಿಭಾಯಿಸಿದ್ದಾರೆಂದು ತಿಳಿಸಬಲ್ಲೆ.

ಯಾವುದೇ ರೀತಿಯ, ವಸ್ತುನಿಷ್ಠ ಅರ್ಥವನ್ನು ನಾನಿಲ್ಲಿ ಹೇಳದೇನೆ ಮತ್ತು ಬೇರೆ ದಿನಗಳಲ್ಲಿ "ಯಾವುದು ದೈವೀ"? ಎನ್ನುದರ ಬಗೆಗೆ ನಾನಿಲ್ಲಿ "ಅದರ

ಬಗ್ಗೆ" ಸಂವೇದಿಸಲು ಪ್ರಯತ್ನಿಸಿದ್ದೆನೆ, ಇಲ್ಲಿ ನಾನು ಪೊಳ್ಳಾದ, ಭಯಾನಕವಾದ ಅರ್ಥದ ಬಗ್ಗೆ ಮಾತನಾಡುವದನ್ನು ವಿರೋಧಿಸುತ್ತಿದ್ದೇನೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜೂನ್ 7, 1967**

**ಸಂಗೀತದೊಂದಿಗೆ ಅಭೀಪ್ಸೆ ಹೆಚ್ಚಳ**

ಪ್ಯಾರಿಸ್‌ನಲ್ಲಿ ಯಹೂದಿ ದೇವಾಲಯಗಳಲ್ಲಿ ಬಹಳ ಸುಂದರವಾಗಿ ಸಂಗೀತ ನುಡಿಸುತ್ತಾರೆ; ಓಹ್! ಎಂತಹ ಸುಂದರ ಸಂಗೀತ! ನನಗೆ ಮೊದಲ ಸಲ ಒಂದು ದೇವಾಲಯದಲ್ಲಿ ಇದರ ಅನುಭವವಾಯಿತು. ಅದೊಂದು ಮದುವೆ. ಸಂಗೀತ ಅದ್ಭುತವಾಗಿತ್ತು ಸೆಂಟ್ಸ–ಸೇನ್ಸ್, ಆ ಮೇಲೆ ನಾನು ತಿಳಿದುಕೊಂಡೆ; ಆರ್ಗನ ಸಂಗೀತ, ಎರಡನೇ ಅತ್ಯುತ್ತಮ ಆರ್ಗನ ಸಂಗೀತ ತಂಡ ಪ್ಯಾರಿಸನಲ್ಲಿ – ಅದ್ಭುತವಾದ ಸಂಗೀತ ವೃಂದ. ನನಗಾಗ ಹದಿನಾಲ್ಕು ವರ್ಷ. ನನ್ನ ತಾಯಿಯೊಂದಿಗೆ ಎತ್ತರದ ಗ್ಯಾಲರಿಯಲ್ಲಿ ಕುಳಿತು ಸಂಗೀತ ಆಸ್ವಾದಿಸುತ್ತಿದ್ದೆ. ಯಾವುದೇ ವಿನ್ಯಾಸವಿರದ ಬಿಳಿಯ ಗಾಜಿನ ಕಿಡಕಿಯಲ್ಲಿ ನೋಡುತ್ತಿದ್ದೆ. ಸಂಗೀತ ನನ್ನನ್ನು ಎತ್ತರಕ್ಕೆ ಕೊಂಡೊಯ್ದಿತ್ತು. ನಾನಾಗ ಕಿಡಕಿಯ ಗಾಜಿನಲ್ಲಿ ದೃಷ್ಟಿಸುತ್ತಿದ್ದೆ. ಆಕಾಸ್ಮಾತ್ತಾಗಿ ಕಿಡಕಿಯಿಂದ ಮಿಂಚಿನಂತಹ ಬೆಳಕು ಬಂದಿತು, ಮಿಂಚಿನಂತೆ ಬಂದು, ಅದು ನನ್ನ ತೆರೆದ ಕಿಡಕಿಗಳಲ್ಲಿ ಪ್ರವೇಶಿಸಿತು. ಅದು ಈ ರೀತಿ ಬಂತು (ಸನ್ನೆ) ಮತ್ತು ಆ ಮೇಲೆ ನನ್ನಲ್ಲಿ ವೈಶಾಲ್ಯತೆ ಮತ್ತು ಹೆಚ್ಚಿನ ಶಕ್ತಿಯನ್ನು ಸಂವೇದಿಸಿದೆ.. ಇದು ಕೆಲವು ದಿನ ನನ್ನಲ್ಲಿತ್ತು.

ಖಂಡಿತವಾಗಿ ನನ್ನ ತಾಯಿಯು ಕೇವಲ ವಾಸ್ತವಾದಿಯಾಗಿರಲಿಲ್ಲ, ದೇವರೆ ಧನ್ಯವಾದ, ಕಾಣದವುಗಳ ಬಗ್ಗೆ ಅವಳ ಮುಂದೆ ಮಾತನಾಡಲು ಸಾಧ್ಯವಿರಲಿಲ್ಲ. ಅವೆಲ್ಲವೂ ಮಿದುಳಿನಲ್ಲಿನ ವ್ಯತ್ಯಾಸವೆಂದು ಹೇಳುತ್ತಿದ್ದಳು. ಯಾವುದು ಕಾಣಿಸುತ್ತದೆಯೋ ಸ್ಪರ್ಶಕ್ಕೂ ಸಿಗುತ್ತದೆಯೋ ಅದನ್ನು ಮಾತ್ರ ನಂಬುತ್ತಿದ್ದಳು. ಆದರೆ ಇದು ದೈವೀ ಕೃಪೆ, – ನನಗೆ ಏನನ್ನು ಹೇಳಲು ಅವಕಾಶವಿರುವುದಿಲ್ಲ, ನನ್ನ ಅನುಭವ ನನ್ನಲ್ಲಿಯೇ ಉಳಿಯಿತು. ಆದರೆ ಅದು ಇದೇ ಮೊದಲ ಸಲ ಸಂಪರ್ಕಕ್ಕೆ ಬಂದಿತ್ತು.. ಆ ಮೇಲೆ ನನಗೆ ತಿಳಿಯಿತು ಅದೊಂದು ಭೂತಕಾಲದ್ದು ಹೌದು. ಸಂಗೀತದೊಂದಿಗೆ ಅಭೀಪ್ಸೆ ಹೆಚ್ಚಿದಾಗ ನನ್ನೊಳಗೆ ಬಂದು ಸೇರಿತ್ತು.

ಆದರೆ ನನಗೆ ವಿರಳವಾಗಿ, ಚರ್ಚೆಗಳಲ್ಲಿ ಈ ರೀತಿಯ ಅನುಭವಗಳಾಗಿವೆ, ವಿರುದ್ಧವಾಗಿ ನನಗೆ ನೋವಿನ ಅನುಭವಗಳು ಬಹಳ ಸಲ ಆಗಿವೆ. ಮನುಷ್ಯನ

ಸಮಾಧಾನಕ್ಕಾಗಿ ಪ್ರಯತ್ನ ಪಡುವಾಗ, ದೈವೀ ಸಹಾನುಭೂತಿ.. ಕೆಟ್ಟ ಕೈಗಳಿಗೆ ಬಲಿಯಾದ ಅನುಭವವೂ ಇವೆ.

ನನಗೆ ಬಹಳ ಕೆಟ್ಟದಾದ ಅನುಭವ ವೆನ್ನಿಸನಲ್ಲೂ ಆಯಿತು (ಕ್ಯಾಥೆಡ್ರೆಲ್ ಬಹಳ ಸುಂದರವಾಗಿತ್ತು – ಅದ್ಭುತವಾಗಿತ್ತು.) ನನಗೆ ಈಗಲೂ ನೆನಪಿದೆ, ನಾನು ಚಿತ್ರಕಲೆಯಲ್ಲಿ ನಿರತಳಾಗಿದ್ದೆ. ಅವರು ನನಗೊಂದು ಮೂಲೆಯಲ್ಲಿ ಬರೆಯಲು ಅನುವು ಮಾಡಿಕೊಟ್ಟಿದ್ದರು – ಮತ್ತು ನನ್ನ ಸಮೀಪ ಪಶ್ಚಾತ್ತಾಪಗೊಳಪಟ್ಟ ಬಡಹೆಣ್ಣು ಮಂಡಿಯೂರಿ ದುಃಖದಲ್ಲಿ ಕುಳಿತಿದ್ದಳು – ಭಯಂಕರ ಅಪರಾಧಿ ಮನೋಭಾವ! ಬಹಳ ಕರುಣಾಜನಕ, ಅವಳು ಅಳುತ್ತಾ ಇದ್ದಳು; ಆ ಮೇಲೆ ಪೂಜಾರಿ ಬರುವುದು ನೋಡಿದೆ, ಒಹ್ ರಾಕ್ಷಸನ ಹಾಗೆ; ಕಠಿಣ ಹೃದಯದ ರಾಕ್ಷಸ! ಅವನು ಒಳಗೆ ಹೋಗಿ ಅವನು ಕಬ್ಬಿಣದ ಸಲಾಕೆ ತರಹದ್ದೇನೋ ತಂದ. ಬಡಹೆಣ್ಣು ದುಃಖಿಸುತ್ತಿದ್ದಳು. ಆದರೆ ಆ ಇನ್ನೊಂದು ಧ್ವನಿ ಕಠೋರ, ಒರಟು. ಅದು ನನಗೆ ತಡೆದುಕೊಳ್ಳಲಾಗಲಿಲ್ಲ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಏಪ್ರಿಲ್ 29, 1961**

## ದಿವ್ಯತ್ವದ ಚಿರಂತನ ಅಸ್ತಿತ್ವ

ನಾನು ತೀವ್ರತರದಲ್ಲಿಯೇ ವಿರೋಧಾಭಾಸಗಳನ್ನು ಕಂಡಿದ್ದೇನೆ! ಒಂದು ಘಟನೆ ಮಾತ್ರ ನನ್ನ ಬಾಲ್ಯದಿಂದಲೂ ಮುಂದುವರೆದುಕೊಂಡೇ ಬಂದಿದೆ. (ನಾನು ಪ್ರತಿಬಾರಿ ಗಮನಿಸಿದಾಗಲೂ ಮತ್ತೂ ಮತ್ತೂ ಅದು ಹೇಗೆ ಮುಂದುವರೆಯುತ್ತಿದೆ ಎನ್ನುವದನ್ನು ಕಾಣುತ್ತಿದ್ದೇನೆ.) ಈ ದಿವ್ಯತ್ವದ ಅಸ್ತಿತ್ವವು – ಅದು ಯಾರೋ ಓರ್ವ ವ್ಯಕ್ತಿಯಲ್ಲಿ, ಅವಳ ಬಾಹ್ಯ ಜೀವನದಲ್ಲಿ ಅತ್ಯಂತ ಸ್ಪಷ್ಟವಾಗಿ ಹೇಳಿದ್ದು, "ದೇವರು?". ಇದು ಎಂತಹ ಮೂರ್ಖತನದ ಮಾತು! ದೇವರ ಅಸ್ತಿತ್ವವೇ ಇಲ್ಲ! ಹೀಗಾಗಿ ನೀನು ಇದನ್ನು ಅರಿತುಕೊಳ್ಳಬೇಕಿದೆ, ಅದಕ್ಕಾಗಿಯೇ ನೀನು ಈ ದೃಶ್ಯಗಳನ್ನು ಕಾಣುತ್ತಿದ್ದೀಯಾ.

ಇದೊಂದು ಅದ್ಭುತ, ಅದ್ಭುತದ ದಯೆಯಾಗಿದೆ ಎನ್ನುವದು ನಿನಗೆ ಗೊತ್ತಿರಲಿ, ಅದೂ ಚಿರಂತನವಾಗಿ ಅನುಭವವನ್ನು ಹೊಂದಲು ಇರುವ ಅತ್ಯದ್ಭುತ ವ್ಯವಸ್ಥೆಯಾಗಿದೆ. ಅಷ್ಟೇ ಶಕ್ತಿಪೂರ್ಣತೆಯಿಂದಲೂ ಕೂಡಿದೆ. ಸರ್ವಸ್ವವನ್ನೂ

ಎದುರಿಸುವ ಸಾಮರ್ಥ್ಯವನ್ನು ಹೊಂದಿರುವ "ಏನೋ ಒಂದು ವಿಶೇಷ"ದಂತೆ ಇದೆ; ಇದೇ ಉಪಸ್ಥಿತಿಯಾಗಿದೆ. ಮತ್ತೆ ನನ್ನ ಬಹಿರ್–ಪ್ರಜ್ಞೆಯಲ್ಲಿ, ಒಟ್ಟಂದದಲ್ಲಿ ಎಲ್ಲವನ್ನೂ ಅಪಲಾಪಗೊಳಿಸಲಾಗಿದೆ. ತೀರ ಇತ್ತೀಚಿಗೆ, "ಒಳ್ಳೆಯದು, ದೇವರು ಇದ್ದಾನೆ, ಆದರೆ ಅವನು ನಿಜವಾಗಿಯೂ ಪರಮ ನೀಚನಾಗಿದ್ದಾನೆ" ಎಂದು ಹೇಳಲು ಪ್ರಾರಂಭಿಸಿದ್ದೆ. ಆದರೆ ಅವನೊಬ್ಬ ನತದೃಷ್ಟ. ಹೀಗಾಗಿ ನಮ್ಮನ್ನು ಸೃಷ್ಟಿಸಿದ ಈ ಸೃಷ್ಟಿಕರ್ತನಿಂದ ನಾನು ಏನನ್ನೂ ಬಯಸುವದಿಲ್ಲ... ನಿಮಗೆ ಗೊತ್ತಿದೆಯೇ? ಆ ದೇವರು ಸ್ವರ್ಗದಲ್ಲಿ ಗಂಭೀರ ಶಾಂತ ಮುದ್ರೆಯಲ್ಲಿ ಕುಳಿತುಕೊಂಡು, ಲೋಕವನ್ನು ಸೃಷ್ಟಿಸುತ್ತಾ, ಅದನ್ನೇ ದೃಷ್ಟಿಸುತ್ತಾ, ನೋಡುತ್ತಲೇ ಮನೋರಂಜನೆ ತೆಗೆದುಕೊಳ್ಳುತ್ತಿದ್ದಾನೆ. ಮತ್ತೆ ಮೇಲಾಗಿ ಘೋಷಿಸಿಸುತ್ತಿರುವದು ಮಾತ್ರ, "ಓಹ್..ಎಷ್ಟು ಅಚ್ಚುಕಟ್ಟಾಗಿ ಮಾಡಲಾಗಿದೆ." ಅದಕ್ಕೇ ನಾನು ಹೇಳಿದ್ದು, ದೈತ್ಯನ ಸಂಗಡ ನಾನು ಏನೂ ಮಾಡಲು ಇಚ್ಛಿಸುವದಿಲ್ಲ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಏಪ್ರಿಲ್ 29, 1961**

## ದಿವ್ಯತ್ವದೊಡನೆ ನಿಶ್ಚಲವಾದ ಹಾಗೂ ಚೈತನ್ಯಪೂರ್ಣ ಸಂಯೋಗ

ನಾನು ಇದನ್ನು ಆ ದಿನದಂದು ನಿರೂಪಿಸುತ್ತಿದ್ದೆನು. (ಅದು ಪ್ರಾಯಃ ಜನ್ಮದಿನವಾಗಿತ್ತು ಎಂದು ತೋರುತ್ತದೆ.) ಅದರ ಬಗೆಗೆ ಖಚಿತವಾಗಿ ವಿವರಗಳು ನನಗೆ ಈಗ ನೆನಪಿಲ್ಲ. ಅಜಮಾಸು ಹದಿನೆಂಟು–ಇಪ್ಪತ್ತು ವರ್ಷದ ಅವಧಿಯಲ್ಲಿ ಅದನ್ನು ಕೇಳಿದ್ದೆ. ಆಗ ನಾನು ಈ ದಿವ್ಯತ್ವದ ಅಸ್ತಿತ್ವದೊಡನೆ ನಿಶ್ಚಲವಾದ ಹಾಗೂ ಚೈತನ್ಯಪೂರ್ಣವಾದ ಸಾಂಗತ್ಯವನ್ನು ಹೊಂದಿದ್ದೆ. ಅದನ್ನು ನಾನು ಏಕಾಂಗಿಯಾಗಿಯೇ ಅನುಭಾವಿಸಿದ್ದೆ. ಅದಕ್ಕೆ ಬೇರೆ ಯಾರೊಬ್ಬರ ಸಹಾಯದ ಅವಶ್ಯಕತೆಯೂ ಇರಲಿಲ್ಲ. ಪುಸ್ತಕಗಳೂ ಸಹಿತ ಇರಲಿಲ್ಲ. ಯಾವಾಗ ನಾನು ವಿವೇಕಾನಂದರ "ರಾಜಯೋಗ"ದ ಪುಸ್ತಕವನ್ನು ಓದಲು ಅವಕಾಶ ದೊರೆಯಿತೋ, ಅದು ನಿಜವಾಗಿಯೂ ಒಂದು ಅಚ್ಚರಿದಾಯಕ ಸಂಗತಿಯಾಗಿತ್ತು. ಯಾರೋ ಒಬ್ಬರು ಈ ವಿಷಯಕ್ಕೆ ನನಗೆ ವಿವರಣೆಯನ್ನು ಕೊಡುತ್ತಿರುವಂತೆ ರೂಪಿಸಿರುವ ಹಾಗೇಯೇ ಇತ್ತು. ಕೇವಲ ಕೆಲವೇ ತಿಂಗಳುಗಳಲ್ಲಿ ನಾನು ಅದನ್ನು ಹೃದ್ಗತ ಮಾಡಿಕೊಳ್ಳಲು ಸಾಧ್ಯವಾಯಿತು. ಅದು ಇನ್ನುಳಿದವರಿಗೆ ಪ್ರಾಯಶಃ ಅನೇಕ ವರ್ಷಗಳ ಕಾಲವೇ ಬೇಕಾದೀತೇನೋ.

ನಾನು ಓರ್ವ ವ್ಯಕ್ತಿಯನ್ನು (ಅವರು 20–21 ವರ್ಷದ ವ್ಯಕ್ತಿ) ಭೇಟಿಯಾಗಿದ್ದೆ. ಅವರು ಮೂಲತಃ ಭಾರತೀಯರಾಗಿದ್ದು ಯುರೋಪ ದೇಶಕ್ಕೆ ಬಂದಿದ್ದರು. ಅವರು ನನಗೆ ಭಗವದ್ಗೀತೆಯ ಬಗೆಗೆ ಹೇಳಿದ್ದರು. ಅದರ ಫ್ರೆಂಚ್ ಅನುವಾದ ಲಭ್ಯವಿತ್ತು. ಆದರೆ ಅದು ಅಷ್ಟೊಂದು ಪೂರ್ಣತೆಯಿಂದ ಕೂಡಿರಲಿಲ್ಲ – (ಅಂದರೆ ಅನುವಾದ ಸಮಂಜಸವಾಗಿರಲಿಲ್ಲವೆಂದೇ ನನ್ನ ಅನಿಸಿಕೆ). ಅದನ್ನು ಓದಲು ಅವರು ನನಗೆ ಸಲಹೆ ನೀಡಿದ್ದರು. ನಂತರದಲ್ಲಿ ಅವರು ನನಗೊಂದು ಸೂತ್ರವನ್ನೂ ಕೊಟ್ಟರು (ಅದು ಅವರದೇ ಸೂತ್ರ, ಅದು ಅವರೇ ರೂಪಿಸಿದ ಸೂತ್ರವಾಗಿತ್ತು). "ಗೀತೆಯನ್ನು ಓದು" ಎಂದು ಮತ್ತೆ ನನಗೆ ತಿಳಿಸಿದ್ದರು. "ಕೃಷ್ಣನು ಪರಿವ್ಯಾಪ್ತವಾಗಿರುವ ದೇವರ ಪ್ರತಿಮೆಯಾಗಿದ್ದಾನೆ. ಹಾಗೂ ಅಂತರ್ಗತನಾಗಿಯೇ ಇರುತ್ತಾನೆ ಎನ್ನುವದನ್ನೂ ಅರಿತುಕೊಳ್ಳಲು ಗೀತೆಯನ್ನು ಓದು" ಎಂದಿದ್ದರು. ಹೌದು, ಅದೇ ಎಲ್ಲವೂ ಆಗಿದೆ. "ಈ ಜ್ಞಾನದಿಂದಲೇ ನೀನು ಅದನ್ನು ಓದು – ಕೃಷ್ಣನು ಈ ಸರ್ವವ್ಯಾಪ್ತಿತ್ವವನ್ನೇ ಪ್ರತಿನಿಧಿಸುತ್ತಿದ್ದಾನೆ. ಹಾಗೂ ಅವನು ಇಲ್ಲಿ ಅಂತರ್ಗತನಾಗಿ, ನಿಹಿತವಾಗಿಯೇ ದೇವರಾಗಿದ್ದಾನೆ." ಎಂದಿದ್ದರು. ಹೌದು.. ಒಂದೇ ಒಂದು ತಿಂಗಳು ಅವಧಿಯಲ್ಲಿ ಎಲ್ಲವೂ ದೃಷ್ಟಾಂತವಾಯಿತು.

ಯಾವಾಗ ನಾನು ಇದನ್ನು ಕಂಡುಕೊಂಡೆನೋ – ಯಾರೂ ಅದನ್ನು ನನಗೆ ಹೇಳಿಕೊಡಲಿಲ್ಲ – ಅದನ್ನು ನನ್ನ ಸ್ವಂತ ಅನುಭವದಿಂದಲೇ ಪಡೆದುಕೊಂಡಿದ್ದೇನೆ. ಈ ಮೂಲಕ ನಾನು ಅರ್ಥೈಸಿಕೊಂಡಿದ್ದೇನೆಂದರೆ, ನನ್ನಲ್ಲಿಯೇ ನನ್ನನ್ನು ಶೋಧಿಸಿಕೊಳ್ಳುವ ಕಾರ್ಯ ಅದಾಗಿತ್ತು. ಹೀಗಾಗಿಯೇ, ಅದು ಜಗತ್ತಿನಲ್ಲಿ ಎಲ್ಲವೂ ಅತ್ಯಂತ ಪ್ರಮುಖವಾದ ವಿಷಯವಾಗಿಯೇ ಅಸ್ತಿತ್ವ ಪಡೆದುಕೊಂಡಿತು. ಇದು ಸರ್ವ ವಿಷಯದ ಮೇಲೂ ಪ್ರಾಧಾನ್ಯತೆಯನ್ನು ಗಳಿಸಿಕೊಂಡಿತು.

ನಾನು ಈಗಾಗಲೇ ನಿಮಗೆ ತಿಳಿಸಿರುವಂತೆ, ಯಾವುದೇ ಪುಸ್ತಕವನ್ನು ಓದಿದಾಗ ಅಥವಾ ಯಾವುದೇ ವ್ಯಕ್ತಿಯನ್ನು ಭೇಟಿಯಾಗುವ ಸಂದರ್ಭವಿದ್ದಾಗಲೆಲ್ಲ, ಅಲ್ಲೆಲ್ಲ ಒಂದು ಸ್ವಲ್ಪ ಸುಳಿವು ಸಿಗುವ ಮಾತುಗಳನ್ನೇ ಹೇಳಿದ್ದರು. ನೀನು ಈ ರೀತಿ ಮಾಡಿದರೆ ನಿನಗೆ ನಿನ್ನ ಪಥವು ಗೋಚರಿಸುತ್ತದೆ. ಅದನ್ನು ಸರಿಯೆಂದು ನಾನು ಒಂದು ಬಿರುಗಾಳಿಯೋಪಾದಿಯಲ್ಲಿಯೇ ಪರಿವರ್ತಿಸಿಕೊಂಡೆ ... ಹೀಗಾಗಿ ನನಗೆ ಯಾವುದೂ ಅಡೆತಡೆಗಳನ್ನು ಒಡ್ಡಲು ಸಾಧ್ಯವಾಗಲಿಲ್ಲ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಅಗಸ್ಟ 25, 1954**

## ಪರಿಪೂರ್ಣ ವಿನಮ್ರತೆ

ವಿನಮ್ರತೆ .. ಹೌದು, ಪರಿಪೂರ್ಣ ವಿನಮ್ರತೆಯೇ ಎಲ್ಲ ಸಾಕ್ಷಾತ್ಕಾರಕ್ಕೆ ಅವಶ್ಯವಿರುವ ನಿಬಂಧನೆಯಾಗಿದೆ. ಮನಸ್ಸು ಯಾವಾಗಲೂ ಒಂದು ವಿಷಯಕ್ಕೆ ಅಂಟಿಕೊಂಡೇ ಇರುತ್ತದೆ. ಅದು ತನಗೆ ಸರ್ವಸ್ವವೂ ತಿಳಿದಿದೆ ಎಂದು ಯೋಚಿಸುತ್ತದೆ. ಪ್ರತಿಯೊಂದನ್ನೂ ಅರ್ಥೈಸಿಕೊಂಡಿದ್ದೇನೆ ಎಂದುಕೊಳ್ಳುತ್ತದೆ. ಒಂದು ವೇಳೆ ಇದು ಒಂದು ಕಾರಣಕ್ಕಾಗಿ ಅಂದರೆ ಶ್ರೇಷ್ಠತೆಗೊಳ್ಳುವ ಕಾರಣಕ್ಕಾಗಿ ಕರ್ಮಕ್ಕೆ ತೊಡಗಲು ಸದಾ ಸನ್ನದ್ಧಗೊಂಡಿತೆಂದರೆ, – ಅದು ಭಾವನಾತ್ಮಕವಾದ ಹಂತದಲ್ಲಿ ಸೇವೆಗಿಳಿದರೆ, ಆಗ ಅದು ಮತ್ತೂ ಅಹಂಭಾವ ತುಂಬಿ, ದುರಾಗ್ರಹಿಯಾಗುತ್ತದೆ. ಹೀಗಾಗಿ ಅಲ್ಲೊಂದು ಶಕ್ತಿ ಇದೆ ಎನ್ನುವದನ್ನು ಕಾಣುವದು ಬಹುತೇಕ ಸಾಧ್ಯವಿಲ್ಲದ ಮಾತಾಗುತ್ತದೆ. ಇದರ ಉದಾತ್ತ ಸಂಕಲ್ಪಗಳಿಂದ ಮತ್ತು ಪರೋಪಕಾರೀ ಗುಣಗಳಿಂದ ಅಥವಾ ಇತರೇ ಭಾವಗಳ ಮೇಲೆ, ಮತ್ತೂ ಮತ್ತೂ ಆ ತದುತ್ತರದ ಮೇಲೆ ಇರಿಸಬೇಕಾಗುತ್ತದೆ. ಇದಕ್ಕೆ ವಿನಮ್ರತೆಯೇ ಒಂದು ಪರಿಹಾರ ಸೂತ್ರವಾಗಿದೆ. ಯಾವುದೇ ಮತಗಳು ರೂಪಿಸಿರುವ ವಿನಮ್ರತೆಯನ್ನು ಕುರಿತು, ಅಂದರೆ ಅವನದೇ ಸೃಷ್ಟಿಯಾಗಿರುವ ಜೀವ–ಜಂತುಗಳನ್ನು ಕುಬ್ಜರನ್ನಾಗಿಸಿ, ಅವನ ಮೊಣಕಾಲುಗಳ ಕೆಳಗೇ ಇರಿಸುವದರ ಕುರಿತು ಏನನ್ನೂ ಹೇಳುತ್ತಿಲ್ಲ. ನಾನಿನ್ನೂ ಮಗುವಾಗಿದ್ದಾಗ, ಈ ತೆರನಾದ ವಿನಮ್ರತೆಯ ಪಾಠ ನನ್ನನ್ನು ದಂಗೆಯೇಳುವಂತೆ ಮಾಡಿದ್ದವು. ಅದಕ್ಕಿಂತ ಹೆಚ್ಚಾಗಿ ನಾನು ದೇವರಲ್ಲಿ ವಿಶ್ವಾಸವಿಡುವದನ್ನು ನಿರಾಕರಿಸಿದ್ದೆ. ಏಕೆಂದರೆ ಅದು ಸೃಷ್ಟಿಯ ಜೀವ–ಜಂತುಗಳನ್ನು ಕುಬ್ಜಗೊಳಿಸುವ ವಿಧಾನವಾಗಿತ್ತು. ಆ ರೀತಿಯ ವಿನಮ್ರತೆಯನ್ನು ನಾನು ಎಂದಿಗೂ ಬಯಸುವದಿಲ್ಲ. ಆದರೆ ಯಾರಿಗೆ ಯಾವುದರ ಬಗೆಗೆ ಏನೂ ತಿಳಿದಿಲ್ಲವೋ ಅದನ್ನು ಗುರುತಿಸುವ(ಅಧಿಕೃತಗೊಳಿಸುವ)ದನ್ನಾಗಲೀ, ಹೌದು... ಏನೇನೂ ಗೊತ್ತಿರುವದಿಲ್ಲದ ಹಂತದಲ್ಲಿ ಅದನ್ನು ಗುರುತಿಸುವ ಹಂತದಲ್ಲಿ ಮತ್ತೆ ಇದೀಗ ನಮಗೆ ಕಂಡುಬರುತ್ತಿರುವ ಹಾಗೂ ಅದೇ ಸತ್ಯಸ್ಯಸತ್ಯವೆಂದು ಪರಿಭಾವಿಸಿಕೊಂಡಿರುವದಕ್ಕಿಂತ ಆಚೆ ಆಚೆ ಆಚೇಯೇ ಮತ್ತೂ ಮತ್ತೂ ಏನೋ ವಿಶೇಷವಾದದ್ದು ಇರಬಹುದು. ಅದು ಶ್ರೇಷ್ಠವಾದದ್ದು; ಅದು ನಿರ್ಲಿಪ್ತವಾದದ್ದು ಇದೆ. ಅದನ್ನು ಗುರುತಿಸುವ ಕಾರ್ಯವಾಗಬೇಕಾಗಿದೆ.

ನಿಜವಾದ ವಿನಮ್ರತೆ ಎಂದರೆ, ಆ ಪರಮ ದೇವನಲ್ಲಿ ಸತತವಾಗಿಯೂ ಆರಾಧಿಸುವ ಹಾಗೂ ಸರ್ವಸ್ವವನ್ನೂ ಅವನ ಸಮಕ್ಷಮದಲ್ಲಿ ಸಲ್ಲಿಸುವ ಕ್ರಿಯೆಯಾಗಿದೆ. ಯಾವಾಗ ನಾನು ಒಂದು ಆಧಾರ ಭೂಮಿಕೆಯನ್ನು ಸ್ವೀಕರಿಸುತ್ತೇನೆಯೋ, (ನನ್ನ ಸಾಧನೆಯಲ್ಲಿ ಇಂತಹ ಹಲವು ಸಂಗತಿಗಳಿವೆ), ಆಗ, ತತ್–ಕ್ಷಣದಲ್ಲಿಯೇ ಅತೀ ಸಹಜವಾಗಿ ನನ್ನಿಂದ ಬರುವ ಪ್ರತಿಕ್ರಿಯೆ – ಅದು ಒಂದು ಸ್ಪ್ರಿಂಗಿನಂತೆಯೇ ಒಮ್ಮೇಲೇ "ಅವನೆಡೆಗೆ" ಎಂದೇ ಚಿಮ್ಮುತ್ತದೆ. ಈ ಮೂಲಕ ಹೇಳಲಿಚ್ಛಿಸುವದೇನೆಂದರೆ, "ನೀನೇ ಸರ್ವಶಕ್ತ! ಒಡೆಯನೂ ಆಗಿದ್ದೀಯಾ." ಆದರೆ ವಿನಮ್ರತೆಯು ಇಲ್ಲದೇನೇ ಏನನ್ನೂ ಕಂಡುಕೊಳ್ಳ–ಲಾಗುವದಿಲ್ಲ. ಮತ್ತೂ ಹೇಳುವದೆಂದರೆ "ನಾನು" ಮಾತ್ರ ನನ್ನಲ್ಲಿಯೇ ಅರಿತುಕೊಂಡರೆ, ಆದರೆ ವಾಸ್ತವದಲ್ಲಿ "ನಾನು" ಎಂದರೆ, "ಈ ದೇಹದ ಅಂತರಂಗದಲ್ಲಿ ಇರುವ ದೇವರೇ ಆಗಿದ್ದಾನೆ". ಏಕೆಂದರೆ ದೇಹವು ಅವನ ಉಪಕರಣವಾಗಿದೆ. ಈ ತೆರನಾದ ವಿನಮ್ರತೆಯಿಂದ ಬದುಕಲು ಯಾವಾಗ ಸಾಧ್ಯವಾಗುತ್ತದೆಯೋ, ಆಗ ಅದು ನಿಮ್ಮನ್ನು ಸಾಕ್ಷಾತ್ಕಾರದ ಸಮೀಪಕ್ಕೆ ಒಯ್ಯುತ್ತದೆ. ಇದೇ ಇದರ ನಿಬಂಧನೆ. ಇದು ಪ್ರಾರಂಭಿಕ ಹಂತದ ಸ್ಥಿತಿ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಡಿಸೆಂಬರ್ 21, 1957**

## ಮಾನವನಲ್ಲಿ ಇರುವ ದಿವ್ಯಜ್ಯೋತಿ

ಅಭೀಪ್ಸೆ ಎನ್ನುವದು ಚೈತ್ಯಜೀವಿಯ ಅಭಿವ್ಯಕ್ತಿಯಾಗಿರುತ್ತದೆ. ಇದು ನಮ್ಮದೇ ಅಂಶವಾಗಿದ್ದು ಆ ದಿವ್ಯತ್ವದ ಕೇಂದ್ರದ ಸುತ್ತಲೂ ಸಂಘಟಿತಗೊಂಡಿರುತ್ತದೆ. ಒಂದು ಸೂಕ್ಷ್ಮಾತಿಸೂಕ್ಷ್ಮ ದಿವ್ಯಜ್ಯೋತಿಯು ಮಾನವನ ಹೃದಯಾಂತರಾಳದಲ್ಲಿ ಇರುತ್ತದೆ. ಇಂತಹ ದಿವ್ಯಜ್ಯೋತಿಯು ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದಲ್ಲಿಯೂ ಇದ್ದೇ ಇರುತ್ತದೆ ಎನ್ನುವ ವಿಷಯ ನಿಮಗೆ ತಿಳಿದಿರಲಿ. ಅದು ಮತ್ತೆ ಮತ್ತೆ ಸೂಕ್ಷ್ಮವಾಗಿ, ಪುನರಾವತಾರಗೊಳ್ಳುತ್ತ, ಕರ್ಮಗಳ ಮೂಲಕವೇ ಆಗಮಿಸುತ್ತದೆ. ಒಬ್ಬ ಜೀವಿಯು ಅದರ ಸುತ್ತಲೂ ಆಕಾರ ಪಡೆದುಕೊಳ್ಳುತ್ತಾನೆ. ಇದನ್ನೇ ಆ 'ಚೈತ್ಯಾತ್ಮ'ವೆಂದು ಕರೆದದ್ದು. ಯಾವಾಗ ಈ ಚೈತ್ಯಾತ್ಮವು ತನ್ನ ಪರಿಪೂರ್ಣ ಪ್ರಗತಿಯನ್ನು (ವಿಕಸನವನ್ನು) ಪಡೆದುಕೊಳ್ಳುತ್ತದೆಯೋ, ಆಗ ಅದು ಒಂದು ಶರೀರ ರೂಪದಲ್ಲಿ ಅಥವಾ ಬೇರಾವುದೇ ರೂಪದಲ್ಲಿ ಆತ್ಮದ ವೈಯಕ್ತಿಕ

ಪೋಷಾಕು ಆಗಿಯೇ ಆಗಮಿಸುತ್ತದೆ. ಆತ್ಮವೆನ್ನುವದು ಆ ಪರಮ ದೇವನ ಅಂಶಾಂಶವಾಗಿದೆ. ಜೀವವು ವ್ಯಕ್ತಿಗತವಾಗಿ ರೂಪು ಪಡೆದಿರುವ ಪರಮ ದೇವನಾಗಿದ್ದಾನೆ. ಕೇವಲ ಏಕೈಕವಾದ ಮಹತ್– ಅದ್ವಿತೀಯನಾಗಿದ್ದು, ಅಲ್ಲಿ ಒಂದೇ ಜೀವವು ಇರುತ್ತದೆ. ಆದರೆ ಅದರ ಲಕ್ಷಾಂತರ ರೂಪಾಂತರಗಳು ಇಲ್ಲಿ ಪ್ರಕಟಗೊಳ್ಳುತ್ತವೆ. ಈ ಜೀವನವು ಆ ದಿವ್ಯತ್ವದ ಸ್ಫುಲಿಂಗದಂತೆ ಅಪರಿವರ್ತ–ನೀಯವಾಗಿ, ಶಾಶ್ವತವಾಗಿ ಮತ್ತು ಅನಂತವಾಗಿಯೇ (ಆಯಾಮದ ಸಂಭವಕ್ಕಿಂತ ಅನಂತತೆಯಲ್ಲಿ) ತನ್ನನ್ನೇ ತಾನು ಕ್ರಿಯೆಗೊಳಿಸಿಕೊಳ್ಳುತ್ತದೆ. ಹೀಗಾಗಿ, ಎಲ್ಲ ಪುನರಾವತಾರಗಳ ಮೂಲಕ, ಅವನು ಆ ದಿವ್ಯತ್ವದ ಪ್ರಭಾವದಿಂದ, ಜೀವವು ಏನನ್ನೇ ಸ್ವೀಕರಿಸಿರಲಿ ಅಥವಾ ಪ್ರತಿಕ್ರಿಯಿಸಿರಲಿ, ಉತ್ತರೋತ್ತರವಾಗಿ ಸಘನಗೊಂಡಿದ್ದರೂ, ಅದು ಮತ್ತೂ ಮತ್ತೂ ಹೆಚ್ಚಾಗಿ ಚೈತನ್ಯಶೀಲವಾಗುತ್ತ, ಅದಕ್ಕಿಂತಲೂ ಮತ್ತೂ ಸುಸಂಘಟಿತಗೊಳ್ಳುತ್ತ ಬರುತ್ತದೆ. ಅಂತಿಮವಾಗಿ, ಸಂಪೂರ್ಣವಾಗಿ ಚೈತನ್ಯಯುಕ್ತ ಜೀವಾತ್ಮವಾಗಿ ರೂಪು ತಳೆಯುತ್ತದೆ. ಜೊತೆಗೆ ತನಗೆ ತಾನೇ ಒಡೆಯನಾಗಿ, ಆ ದಿವ್ಯದ ಇಚ್ಛಾಶಕ್ತಿಯಂತೆಯೇ ಚಲಿಸುತ್ತದೆ. ಹೀಗಾಗಿ ಇಲ್ಲಿ ಹೇಳಬೇಕಾಗಿರುವದೇನೆಂದರೆ, ಅದು ಆ ಸರ್ವೋಚ್ಚ ನೆಲೆಯ ವೈಯಕ್ತಿಕ ಅಭಿವ್ಯಕ್ತಿಯಾಗಿರುತ್ತದೆ. ಇದನ್ನೇ ನಾವು "ಚೈತ್ಯಾತ್ಮ" ಎನ್ನುವದು.

ಇದನ್ನು ಸರಳೀಕರಿಸಿ ಹೇಳುವದೆಂದರೆ, ಯಾರು ಯೋಗವನ್ನು ದೈನಂದಿನ ಉಸಿರಾಗಿಸಿಕೊಂಡಿದ್ದಾರೋ ಅವರು ಪರಿಪೂರ್ಣವಾಗಿ ವಿಕಸನಗೊಂಡ ಹಾಗೂ ಆ ದಿವ್ಯ ಕಾರ್ಯವನ್ನು ಅನುಷ್ಠಾನಿಸುವ ಸಲುವಾಗಿ ಮತ್ತೆ ಜನಿಸಿ ಬಂದಿರುವ "ಚೈತ್ಯಾತ್ಮ" ರೂಪವಾಗುತ್ತಾರೆ. ಅಥವಾ ಚೈತ್ಯಾತ್ಮನು ತನ್ನ ರೂಪಾಂತರದ ಅಂತಿಮ ಬಿಂದುವಿನಲ್ಲಿ ಇದ್ದು, ತನ್ನ ಪ್ರಗತಿಯನ್ನು ಪರಿಪೂರ್ಣಗೊಳಿಸಲು ಅವತಾರವೆತ್ತಿ ಬಂದವನಾಗಿರುತ್ತಾನೆ. ಇದೇ ಅಭೀಪ್ಸೆಯಾಗಿರುತ್ತದೆ. ಇದೇ ಆ ಸಂಪರ್ಕದ ಸಂಗತಿಯಾಗಿರುತ್ತದೆ.

ಆದ್ದರಿಂದ ಯಾವಾಗ ನಿಮ್ಮ ಚೈತ್ಯಾತ್ಮದ ಬಗೆಗೆ ಪ್ರಜ್ಞಾಪೂರ್ವಕವಾಗಿ ಇರುವ ಬಗೆಗೆ ಕೇಳಲ್ಪಟ್ಟಾಗ, ಅದು ಬಾಹ್ಯದ ಅಂಶಗಳಲ್ಲಿ ರೂಹುಗೊಂಡಿರುವ ಪ್ರಕೃತಿಯಿಂದ ರೂಪುಗೊಂಡಿರುವ ಆ ದಿವ್ಯ ಅಸ್ತಿತ್ವದ ಜೊತೆಗೆ ಈ ಚೈತ್ಯಾತ್ಮದ ಮೂಲಕ ಸಂಪರ್ಕ ಸಾಧಿಸಬೇಕು ಎಂದರ್ಥ. ಹೀಗಾಗುತ್ತಲೇ ಆ ಚೈತ್ಯವು ಆ ಸರ್ವಸ್ವದ ಹೊಣೆಗಾರಿಕೆಯನ್ನು ತೆಗೆದುಕೊಳ್ಳುತ್ತದೆ. ಏಕೆಂದರೆ, ಅದು ಆಂತರ್ಯದ

ಮಾರ್ಗದರ್ಶಿಯಾಗಿದೆ. ಹೌದು.. ಖಂಡಿತವಾಗಿಯೂ ಆಂತರ್ಯದ ಮಾರ್ಗದರ್ಶಿ. ನಾನು ಚಿಕ್ಕ ಮಗುವಾಗಿದ್ದಾಗಲೇ, ಈ "ವ್ಯಕ್ತಿಯು" (ಅಂದರೆ ಯಾವುದೇ ಭೌತಿಕ ವ್ಯಕ್ತಿಯಲ್ಲ, ಆದರೆ ಕೆಲವು ಪ್ರಜ್ಞಾಪೂರ್ವಕ ಹಾಗೂ ಹೃದಯದ ಇಚ್ಛೆಯಂತೆಯೇ ಇರುವ ಅಭಿವ್ಯಕ್ತಿ) ನಿಜವಾಗಿಯೂ ಚೈತ್ಯದ ಅಸ್ತಿತ್ವದಲ್ಲಿ ಇದ್ದನು. ಅದೇ ಹಿಂದೆ ಮತ್ತೂ ಏನೋ ಇತ್ತು. ಆದರೆ ಅದೊಂದು ಅಪರೂಪದಲ್ಲಿಯೇ ಅತ್ಯಪರೂಪದ ಪ್ರಸಂಗವಾಗಿತ್ತು. ಯಾರಿಗೆ ಉದ್ದೇಶ–ಪೂರ್ವಕವಾಗಿಯೇ ಈ ಪುನರವತಾರವು ಘಟಿಸಿದೆಯೋ ಅವರೆಲ್ಲರಿಗೂ ನನಗೆ ಆದ ಅನುಭವಗಳೇ ಆಗಿರುತ್ತವೆ. ಈ ಚೈತ್ಯಾತ್ಮವೇ ನಿಮಗೆ ಮಾರ್ಗದರ್ಶಿ. ನಿಮ್ಮ ಜೀವನವನ್ನು ನಡೆಸುತ್ತಾನೆ. ನೀವು ಇದನ್ನು ಮುಕ್ತವಾಗಿ ಸ್ವೀಕರಿಸಿದಲ್ಲಿ, ಎಲ್ಲಾ ಸಂದರ್ಭಗಳೂ ಸುವ್ಯವಸ್ಥೆಗೊಂಡೇ ಆಗಮಿಸುತ್ತವೆ. ಇದು ನಿಜವಾಗಿಯೂ ಆಶ್ಚರ್ಯಕರ ವಿಷಯವಾಗಿದೆ! ನಾನು ಇದನ್ನು ಕಲಿತಿದ್ದೇನೆ. ಇದು ಕೇವಲ ನನ್ನ ಸ್ವಂತಕ್ಕಾಗಿ ಮಾತ್ರವಲ್ಲ. ಇನ್ನುಳಿದ ಹಲ–ಕೆಲವರು ಅಂದರೆ ಯಾರು ಚೈತ್ಯಾತ್ಮದ ಬಗೆಗೆ ಪ್ರಜ್ಞೆ ಹೊಂದಿದ್ದಾರೋ ಅವರೆಲ್ಲರಿಗೂ, ಈ ಸುವ್ಯವಸ್ಥಿತದಂತೆಯೇ ರೂಪುಗೊಳ್ಳುತ್ತದೆ. ಆದರೆ ಇಲ್ಲಿ ಮುಖ್ಯವಾದ ಸಂಗತಿ ಎಂದರೆ, ನಮ್ಮ ವೈಯಕ್ತಿಕ ಅಹಂಭಾವಪೂರಿತ ತೃಪ್ತಿಗಳಿಗೆ ಮಾತ್ರ ಇದು ಅನ್ವಯಿಸುವದಿಲ್ಲ. ಆದಾಗ್ಯೂ ಇದು ನಿಮ್ಮ ವಿಕಸನದ ತುರೀಯ ಹಂತವನ್ನು, ಸಾಕ್ಷಾತ್ಕಾರವನ್ನು ತೋರಿಸುತ್ತದೆ. ಮತ್ತೆ ಜೀವನದ ಎಲ್ಲ ಸಂದರ್ಭಗಳಲ್ಲಿಯೂ, ಯಾವುದನ್ನು ನೀವು "ಪ್ರಳಯಾಂತಕಗಳು" ಎಂದುಕೊಳ್ಳುತ್ತೀರೋ, ಅಂತಹ ಎಲ್ಲ ಸಂದರ್ಭಗಳಲ್ಲಿಯೂ ಸಹಿತ ನಿಮ್ಮನ್ನು ಅದರ ಹಿಡಿತದಿಂದ ಎಷ್ಟು ದೂರ ಸಾಧ್ಯವೋ ಅಷ್ಟು ದೂರದಲ್ಲಿ, ಅದೂ ತ್ವರಿತಗತಿಯಲ್ಲಿ ಪಾರಾಗಲು ಶಕ್ತಿಯನ್ನು ಒದಗಿಸುತ್ತದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜುಲೈ 25, 1962**

**ಮುಕ್ತರಾಗಿಯೇ ಜನಿಸಿರಿ**

ಇಲ್ಲಿರುವ ಮುಖ್ಯ ಪ್ರಶ್ನೆ ಎಂದರೆ, "ಈ ಚೈತನ್ಯವೆನ್ನುವದು ದಿವ್ಯತ್ವದ ಉನ್ಮನೀ ಮನೋಭಾವಗೊಳಿಸುವಿಕೆಯಾಗಿದೆಯೇ?" ಇದಕ್ಕಿಂತ ಬೇರೆ ಏನೂ ಇರುವದು ಸಾಧ್ಯವಿಲ್ಲ. ಬಹುತೇಕ ಜನರು, ಯಾರು ಯಾರು ತಮ್ಮ ಮನೋಭೂಮಿಕೆಯಲ್ಲಿ ಅನುಭವಗಳನ್ನು ಹೊಂದಿದ್ದಾರೋ, ಅದು ಸಾಪೇಕ್ಷವಾಗಿ

ಅತ್ಯಂತ ಸರಳವಾದದ್ದೇ ಆಗಿರುತ್ತದೆ. ಇದು ಅತ್ಯಂತ ಸರಳಾತಿಸರಳವಾಗಿದೆ. ಅಹಂಕಾರದಿಂದ ರೂಪುಗೊಂಡಿರುವ ಚೌಕಟ್ಟುಗಳನ್ನು ನಿರ್ನಾಮಗೊಳಿಸಬೇಕು. ಅಪರಿಮಿತವಾದ ವ್ಯಾಪ್ತಿಗಳಿಸಲು ಭಾವಾಭಾವದ ಸುಸಂಗತವಾದ ನಾದವನ್ನು ಅನುಸರಿಸುತ್ತಾ ಸಾಗಬೇಕು.

ಮಾನಸಿಕವಾಗಿ, ಇದು ಅತಿ ಸುಲಭವಾಗಿದೆ. ಅತೀ ಮುಖ್ಯವಾಗಿ ನೀನು ನಿನ್ನನ್ನು ನಿನ್ನಿಂದಲೇ ಸೆಳೆದುಕೊಂಡರೆ, ಆ ವಿಶಾಲತೆಯ ಅನುಭವವನ್ನು ಗಳಿಸಬೇಕೆಂದರೆ, ಮೊಟ್ಟಮೊದಲು ಮನಸ್ಸು ಪರಿವರ್ತನೆಗೆ ಒಳಗಾಗಲೇ–ಬೇಕಾಗುತ್ತದೆ. ಆ ವ್ಯಕ್ತಿಯು ಸಂಪೂರ್ಣವಾಗಿ ಪೂರ್ಣ–ಸಂಘಟನೆಯಲ್ಲಿಯೇ ಇರಬೇಕಾಗುತ್ತದೆ. ಯಾವುದೇ ವಿನಾಯತಿಯೂ ಇಲ್ಲಿ ಇರುವದಿಲ್ಲ. ಇಂತಹ ಆಧಾರಭೂತ ಸಂಗತಿಗಳಿಂದ ಸಿದ್ಧಗೊಳ್ಳದ ಯಾವುದೇ ಓರ್ವ ಭೋಗಾಕಾಂಕ್ಷಿಯು ಆತಂಕದಲ್ಲಿಯೇ ತೃಪ್ತನಾಗಬೇಕಾಗುತ್ತದೆ. ಯಾರು ಯಾರು ಈ ವಿಷಯದಲ್ಲಿ ಅಲ್ಪಾತಿ ಅಲ್ಪ ಅನುಭವದಿಂದಲೇ ಬೆಳೆದಿದ್ದಾರೋ, ಅಂತಹ ಬಡಜೀವಿಗಳು "ಇದರೊಡನೆ" ನೀರಾಟವನ್ನು ಆಡಲು ಹೋಗಬಾರದು. ಅವರು ಆತಂಕಿತರಾಗಿಯೇ ಉಳಿಯುತ್ತಾರೆ! ಒಂದು ವೇಳೆ ಈ ದಿವ್ಯತ್ವದ ದಯೆಯಿಂದಲೇ ಅದು ಘಟಿಸುತ್ತಿದ್ದಲ್ಲಿ, ಆವಾಗ ನೀವು ಖಂಡಿತವಾಗಿ – ನನ್ನದೇ ಸೂಕ್ಷ್ಮವೆಂದು ಸದ್ಯ ಪುನರವತಾರದಲ್ಲಿ ಇರುವ ಚೈತ್ಯಾತ್ಮವೆಂದು, ಮುಕ್ತವಾಗಿಯೇ ಹಾಗೂ ಜಯಪ್ರದವಾಗಿಯೇ ಅವತರಿಸಿದ್ದೇನೆ ಎಂದು ಹೇಳಬಹುದು.

ಇದು ಈ ವಿಶಾಲವಾದ ಜಗತ್ತಿನಲ್ಲಿ ಯಾವ ಕಾಲಕ್ಕೂ ಯಾವುದಕ್ಕೂ ಅಂಜಿಲ್ಲ. ಅತ್ಯಂತ ಆಕರ್ಷಕವಾದ ಅನುಭವಗಳೂ ಒಂದು ಹಂತದಲ್ಲಿ ಮಕ್ಕಳಾಟಿಕೆಯಂತೆ ಇದ್ದವು. ಆದರೆ ಯಾವಾಗ ನಾನು ಈ ಅನುಭವಗಳನ್ನು ಅನುಭವಿಸಿದ್ದೇನೆಯೋ, ಆಗ ಅವು ನನಗೆ ತುಂಬ ರೋಚಕವಾಗಿ ಕಂಡಿದ್ದವು. ಆಸಕ್ತಿದಾಯಕವಾಗಿದ್ದವು. ಕೆಲವು ವಾರಗಳ ಕಾಲ ನಾನು ತುಂಬ ಉತ್ತೇಜಿತಳಾಗಿ ಅಲ್ಲಿಯೇ ಇರಲು ಬಯಸಿದ್ದೆ. ಅದೊಂದು ಘಟನೆ... ಅದನ್ನು ಈಗಾಗಲೆ ನಿಮಗೆ ಒಮ್ಮೆ ಹೇಳಿದ್ದೇನೆ. (ಪ್ರಾಯಃ ಕೆಲವು ಸಮಯದ ಹಿಂದೆ, ಅಂದರೆ ಎರಡು ವರ್ಷದ ಹಿಂದೆ ಇರಬಹುದು). ಆಗ ನಾನು ಹೇಳಿದ್ದಂತೆಯೇ, ನಾನು "ಈ ಭೂಮಂಡಳದ ಮೇಲೆ ಕುಳಿತಂತೆ" ಕಾಣುತ್ತಿತ್ತು. ಅಂದರೆ ಈ ಭೂಮ ಜಗತ್ತಿನ

ಸಾಕ್ಷಾತ್ಕಾರವಾಗಿತ್ತು. ಅದು ಕೊಟ್ಟಿರುವ ರೋಚಕತೆಯಾದರೂ ಎಂತಹದು! ಅದನ್ನೇ ಅಪರೂಪದ ಘಟನೆಯ ಬಗೆಗೆ ವಿವರಿಸಲು ನನಗೆ ಎಂದಿಗೂ ಸಾಧ್ಯವಿಲ್ಲ. ಅದನ್ನು ನಾನು ಎಲ್ಲಿಯೂ ಹೇಳಿಯೂ ಇಲ್ಲ. ಆದರೆ ಆ ಅತ್ಯಪರೂದ ಘಟನೆಯಲ್ಲಿಯೂ ಒಂದು ಅತ್ಯಾಕರ್ಷಕವಾದ ಸಾಹಸದ ಮುಂದುವರಿಕೆಯನ್ನು ಕಂಡಿದ್ದೇನೆ.

ನಾನು ಸ್ವಯಂ ಇಚ್ಛೆಯಿಂದಲೇ ಎಲ್ಲವನ್ನೂ ಪರಿತ್ಯಜಿಸಿ, ಅಂದರೆ ಮತ್ತೂ ಮುಂದೆ ಸಾಗುವದರ ಸಲುವಾಗಿ, ಎಲ್ಲವನ್ನೂ ತ್ಯಜಿಸಿದ್ದೇನೆ. ಯಾವಾಗ ನಾನು ಇದನ್ನು ಕೈಕೊಂಡೆನೋ, ಆಗ ಇಲ್ಲಿ ಈ ಭಾರತೀಯರು "ಅವನು ತನ್ನ ಅನುಭವಗಳನ್ನೆಲ್ಲವನ್ನೂ ಸಮರ್ಪಿಸಿಕೊಂಡನು" ಎಂದು ಹೇಳುತ್ತಿರುವದರ ಅಂತರಾರ್ಥ ಹೊಳೆಯಿತು. ಅದಕ್ಕಿಂತ ಮೊದಲು ನನಗೆ ಎಂದಿಗೂ ಇದರ ಮತಿತಾರ್ಥ ತಿಳಿದಿರಲಿಲ್ಲ. ಯಾವಾಗ ನಾನು ಅದನ್ನು ಅನುಷ್ಠಾನಿಸಲು ಸಮರ್ಪಿಸಿಕೊಂಡೆನೋ, ಆಗ ಸಂಪೂರ್ಣವಾಗಿ ಮನೋಗತವಾಯಿತು. "ಇಲ್ಲ", "ಇಲ್ಲ", ನಾನು ಇಲ್ಲಿಯೇ ಸ್ಥಗಿತಗೊಳ್ಳಲು ಇಚ್ಛಿಸುವದಿಲ್ಲ. ನಾನು ಸರ್ವಸ್ವವನ್ನೂ ನಿನಗೆ ಬಿಟ್ಟುಕೊಡುತ್ತೇನೆ, ನಾನು ಆ ತುರೀಯದವರೆಗೂ ಸಾಗಬೇಕು". ಹೀಗಾದಾಗಲೇ ಅದರ ಅರ್ಥ ಏನೆಂದು ನನಗೆ ಚೆನ್ನಾಗಿ ಮನವರಿಕೆಯಾಗಿತ್ತು.

ನಾನು ಅದನ್ನೇ ಬಲವಾಗಿ ಆಧರಿಸಿಕೊಂಡೆ... ಓ.. ನಾನೂ ಸಹಿತ ಆ ಜಗತ್-ಪ್ರಸಿದ್ಧ ಘಟನೆಗಳಿಂದಾದ ಹಂತದಲ್ಲಿ ಒಂದಾಗಿದ್ದೆ. ಈ ಭೂ-ಬದುಕಿನ ಇತಿಹಾಸವನ್ನು ಸಂಪೂರ್ಣ ಪರಿವರ್ತಿಸಿಬಿಟ್ಟಿದ್ದೇನೆ. ಅಗಾಧವಾದ ಶಕ್ತಿಯಾಗಿತ್ತು ಅದು! ಹೌದು, ಪರಮಾತಿಪರಮ ಅಗಾಧತೆಯಲ್ಲಿತ್ತು. ಇಲ್ಲಿಯವರೆಗೂ ಸ್ಪಂದಗೊಳ್ಳದೇ ಇತ್ತು.. ಆದರೆ ಅದು ಒಂದು ಅಂತಿಮ ನಿಲುಗಡೆಯ ತಾಣವಾಗಿತ್ತು. ಅದನ್ನು ಒಪ್ಪಿಕೊಂಡು, ಆ ಅನುಭಾವವನ್ನು ಸ್ವೀಕರಿಸಿಕೊಂಡು, ಅದೇ ಅಂತಿಮವೆಂದು ನಿರ್ಧರಿಸಿ ನಾನು ಮುಂದುವರೆದಿದ್ದೆ.

**– ಶ್ರೀಮಾತೆ: ಶಿಷ್ಯರೊಡನೆ ಸಂವಾದ, ಜನವರಿ 12, 1962**

ದೇವಾನುದೇವ ಗಣಗಳಾ ಊರ್ಧ್ವ ಸಂಕೇತಗಳಲಿ ಈಗ
ಬುವಿಹೃದಯದಳಲು ಜೊತೆ ಅವಳ ಕ್ರಂದಕಿಂದೀಗ ತೋಷ ರಾಗ,
ನಮ್ಮದೇ ಅನ್ಯ ಲೋಕದಿಂದೀಗ ಆ ಬೃಹತ್ ಉದಿಸಿ ಬಂದು
ಮೃಣ್ಮಯದ  ಗೋಜು ಗದ್ದಲದಲಿಂದು ಶಾಂತತೆಯ ಸಾಂತವಿಂದು

ನಿರ್ವಿಕಲ್ಪದಲಿ ಆ ಗುಹ್ಯ–ನಾದವನು ಶೋಧಗೊಂಡಿತಿಲ್ಲಿ
ಬಲದುಂಬಿ ಬಂದ ಆಂತರ್ಯ ಸಲಿಲ ವಿಸ್ಮೃತಿಯ ಮಣ್ಣಿನಲ್ಲಿ;
ಬೆಳಗಿತ್ತು ಜ್ಯೋತಿ, ಪಾವಿತ್ರ್ಯ ಘನದ ರೂಪದಲಿ ಉದಿತಗೊಂಡು
ಮಧ್ಯಸ್ಥನಂತೆ  ತಾ ಜ್ಯೋತಿಕಿರಣ ಬುವಿ ಸ್ಪರ್ಶ ಸ್ಪಂದವಿಂದು

ಈ ಮನುಜ ಮನದ, ಆ ದೇವ ಘನದ ಮಧ್ಯ ಆಖಾತ ಸೇತುಬಂಧ
ನಮ್ಮ ಭಂಗುರವ ಅಜ್ಞಾತದೊಡನೆ ಕಾಂತಿಯಲಿ ಬೆಸೆದು ಬಂಧ;
ಅದರ ಅಮರತ್ವದಾ ಮೂಲವೀಗ ಜಾಗೃತಿಗೆ ಪ್ರಾಣಗೊಂಡು
ಸ್ವರ್ಗವನು ಸಹಿತ ಅನುಸ್ಪಂದದಲ್ಲಿ ಮಾನವನ ರೂಪಕಿಂದು

ಪರಿಪೂರ್ಣಗೊಳದ ಈ ಬುವಿಯ ಅಚ್ಚಿನೊಳಗೆ ಅವತರಣಗೊಂಡು
ಮೃತಜೀವಜಾಲಕೀ ಇಳಿತವೆಂದು ದುಃಖಿಸದೇ ಬಂದುದಿಂದು
ಘನಶಾಂತ ಸುಪ್ತ ವಿಸ್ತಾರದಕ್ಷಿಗಳಲೀಗ ಸರ್ವ ದೃಷ್ಟಿ
ಚೈತನ್ಯದಲ್ಲಿ ಸಮ್ಮಿಲನಗೊಳಲು ಸರ್ವಾತಿಸರ್ವ ಸೃಷ್ಟಿ.

**Savitri, p. (ಸಾವಿತ್ರಿ ಪುಟ) 353** **– ಶ್ರೀ ಅರವಿಂದರು**



ನಿಷ್ಕಂಪದಧರಗಳು, ಮತ್ತೆ ಸುಪ್ತ–ಅಭಿವ್ಯಕ್ತಿ ರೆಕ್ಕೆ–ಕಾಂತಿ,
ಅತಿಚೇತನೀಯ ನಿರ್ಮಾಯ–ಸುಪ್ತಿ, ಗವಸಾಗಿ ವದನ–ಕಾಂತಿ,
ಸರ್ವಜ್ಞ ದೃಷ್ಟಿಯಲ್ಲಿರುವ ಅಕ್ಷಿಗಳಿಗೀಗ ರೆಪ್ಪೆ–ರಕ್ಷೆ
ತಲ್ಲೀಯ ಲಯದಿ ಸಂರಚನೆಗೊಳುವ ಸೃಷ್ಟಾರ–ದೃಷ್ಟ–ಕಕ್ಷೆ.

[ಸಾವಿತ್ರಿ ಪದ್ಯಾನುವಾದ; ದಳ 1 ರೇಣು 3 ಪುಟ 44]

**RNI No. 22511/1971**
No. of Pages **64 + 4 (Cov. Page)**
KAR Reg No : RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till : 31-12-2020
Licensed to Post at BG PSO, Mysore Road, Bengaluru - 560 026

ತಲುಪಿ ಸಂದೇಹಾತ್ಮಕ ಮೇಣಪರಿಚಿತ ಭೂಗೋಲಮಂ
ಸ್ಮರಿಸುತಲಿ ಶಿಶು-ಬಾಲೆ ವೊಳವೊಳಗೆನೆ ಸುದೂರ ಗೃಹಮಂ
ಜೀವಿಸಿರ್ದಳ್ ಸುರಕ್ಷಿತಮವಳಾತ್ಮದ ದೀಪ್ತ ಕಕ್ಷದೋಳ್,
ಏಕಾಕಿ ತಾನ್ ಮನುಕುಲದ ನಡುವೆ ನಿಜ ದೈವೀಯ ಪರಿಯೋಳ್.
ಸುಸಹಜಮಾಗಿತ್ತವಳ ಶೈಶವ-ಗತಿವಿಧಿಯೊಳುಮೊಂದು
ಬೆಳಕಿನಾ ನಿಕಟತೆಯು ದೂರಮಾಗಿರ್ದ ಪೃಥಿವಿಗಿದುವರಂ
ಅನುಭೂತಿಗಳುಂ ಪಾಲ್ಪಡೆಬಹುದಾಗಿರ್ದ ಶಾಶ್ವತದ ಮಾತ್ರಂ
ವಿಚಾರ ಸರಣಿಯಂ ಸ್ವಾಭಾವಿಕಂ ಮೇಣ್ ಸ್ವದೇಶಿಯವು ಸುರರ್ಗೆ ತಾಂ
ನಿರಪೇಕ್ಷದಂತಿರ್ದೊಡಂ ಸ್ವ-ಊರ್ಧ್ವ-ಉಡ್ಡಯನದೊಳೆಮಗ್ನ ಚಿತ್ತಳ್
ನೆಲೆಸಿರ್ದುದವಳ ಪ್ರಕೃತಿ ಮಗುಳ್ದೊಂದೆ ಸಶಕ್ತ ವಾತಾವರಣದೋಳ್

[ಶ್ರೀ ಅರವಿಂದರ ಸಾವಿತ್ರಿ (ಅನುವಾದ) ಪುಟ;355]

**– ಶ್ರೀ ಮಂದರ್ಕೆ ಮಾಧವ ಪೈ**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.